ಶನಿವಾರ, ಜುಲೈ 2, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಕ್ಕಳ ಪ್ರಾರ್ಥನೆ

ಅಸ್ಸಾಂನ ತೇಜ್‌ಪುರದಲ್ಲಿ ಶುಕ್ರವಾರ ನಡೆದ ರಥಯಾತ್ರೆ ಹಬ್ಬದ ನಿಮಿತ್ತ ಜಗನ್ನಾಥ ದೇವರಿಗೆ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು



ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಬೇಸರ • ಭಾರತೀಯ ವೈದ್ಯಕೀಯ ಸಂಘದಿಂದ ಪ್ರಶಸ್ತಿ ಪ್ರದಾನ

‘ರಸ್ತೆ ಅಗೆದವರಿಗೆ ಮುಚ್ಚಲು ಹಣವಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಮಾರ್ಟ್ ಸಿಟಿ ಹೆಸರಿನಲ್ಲಿ ನಗರದ ವಿವಿಧೆಡೆ ರಸ್ತೆಗಳ ಅಗೆದು, ಹಾಗೆಯೇ ಬಿಡಲಾಗಿದೆ. ಕಾಮಗಾರಿ ಬಳಿಕ ಮುಚ್ಚಲು ಸರ್ಕಾರಗಳ ಬಳಿ ಹಣವಿರುವುದಿಲ್ಲ. ಕಾನೂನಿನ ಹೆದರಿಕೆ ಇಲ್ಲದ ಜನರು, ಭ್ರಷ್ಟಾಚಾರ ಪೋಷಿಸುತ್ತಿದ್ದಾರೆ’ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಶಾಖೆ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ವೈದ್ಯರ ದಿನ ಕಾರ್ಯಕ್ರಮ ಉದ್ಘಾಟಿಸಿ, ‘ಅಧಿಕಾರದಲ್ಲಿರುವವರ ಸ್ವಾರ್ಥ ಮತ್ತು ದುರಾಸೆಯು ಭ್ರಷ್ಟಾಚಾರವನ್ನು ಪೋಷಿಸುತ್ತಿದೆ. ಪ್ರತಿ ಹಂತದಲ್ಲಿ ಲಂಚ ಸಾಮಾನ್ಯವಾಗಿದೆ. ಶಿಕ್ಷೆಯ ಭಯವಿಲ್ಲದ ಭ್ರಷ್ಟರು ಅವ್ಯಾಹತವಾಗಿ ಹಗರಣಗಳನ್ನು ಮಾಡುತ್ತಿದ್ದಾರೆ. 1984ರ ಬೊಫೋರ್ಸ್ ಹಗರಣದಲ್ಲಿ ದೇಶಕ್ಕೆ ₹ 64 ಕೋಟಿ ನಷ್ಟವಾಯಿತು. 2010ರಲ್ಲಿ ನಡೆದ ಕಲ್ಲಿದ್ದಲು ಹಗರಣದ ಮೊತ್ತ ₹1,88,000 ಕೋಟಿ. ಆಡಳಿತದಲ್ಲಿರುವವರ ಸ್ವಾರ್ಥ-ದುರಾಸೆ ಇವುಗಳಿಗೆಲ್ಲಾ ಕಾರಣ. ಪ್ರಾಮಾಣಿಕತೆಗೆ ಬೆಲೆಯಿಲ್ಲ’ ಎಂದರು.

‘ಸರ್ಕಾರದ ಹಣವು ಖಜಾನೆಯಿಂದ ಸೋರಿಹೋದರೆ ಅಭಿವೃದ್ಧಿ ಹೇಗೆ ಸಾಧ್ಯ? ದೇಶದಲ್ಲಿ ಭ್ರಷ್ಟಾಚಾರ ಮಾತ್ರ 'ಅಭಿವೃದ್ಧಿ'ಯಾಗಿದೆ’ ಎಂದು ವ್ಯಂಗ್ಯವಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ‘ನಾನು ಜೀವಂತವಾಗಿರಲು ವೈದ್ಯರೇ ಕಾರಣ. ಕೋವಿಡ್ ಎರಡನೇ ಅಲೆಯಲ್ಲಿ ಕೊರೊನಾ ಸೋಂಕಿತನಾಗಿ, ಸ್ಪರ್ಶ್ ಆಸ್ಪತ್ರೆಗೆ ದಾಖಲಾಗಿದ್ದೆ. 20 ದಿನಗಳ ಆಸ್ಪತ್ರೆ ಅವಧಿಯಲ್ಲಿ ಬದುಕಿ ಬರುವ ಖಚಿತತೆ ಇರಲಿಲ್ಲ. ವೈದ್ಯರು ಸಮಯಕ್ಕೆ ಸರಿಯಾಗಿ ಚಿಕಿತ್ಸೆ ನೀಡಿದ್ದರಿಂದ ಚೇತರಿಸಿಕೊಳ್ಳಲು ಸಾಧ್ಯವಾಯಿತು. ದೇವರು ಜೀವ ನೀಡಿದರೆ, ವೈದ್ಯರು ಜೀವ ಉಳಿಸಿ, ಜೀವನ ನೀಡುತ್ತಾರೆ. ಶಿಶುನಾಳ ಶರೀಫ ಅವರು 19ನೇ ಶತಮಾನದಲ್ಲಿಯೇ ಕೋವಿಡ್ ಬಗ್ಗೆ ಹೇಳಿದ್ದರು. ಅವರ ತತ್ವಪದದಲ್ಲಿ ‘ಕ್ವಾರಂಟೈನ್’ ಬಗ್ಗೆ ಉಲ್ಲೇಖವಿತ್ತು’ ಎಂದು ಹೇಳಿದರು.

ಐಎಂಎ ಕರ್ನಾಟಕ ಶಾಖೆ ಅಧ್ಯಕ್ಷ ಡಾ. ಕಟೀಲ್ ಸುರೇಶ್ ಕುಡ್ವಾ, ‘ಡಾ. ಬಿ.ಸಿ. ರಾಯ್ ಅವರ ಜನ್ಮ ದಿನವನ್ನು ವೈದ್ಯರ ದಿನವನ್ನಾಗಿ ಆಚರಣೆ ಮಾಡುತ್ತಿರುವುದು ವೈದ್ಯ ಸಮೂಹದ ಭಾಗ್ಯ. ವೈದ್ಯರಿಗೆ ಮಾರ್ಗದರ್ಶನ ನೀಡಲು ಭಾರತೀಯ ಆರೋಗ್ಯ ಮಂಡಳಿಯನ್ನು ಅವರು ಆರಂಭಿಸಿದರು’ ಎಂದು ತಿಳಿಸಿದರು.



ಐಎಂಎ ಕರ್ನಾಟಕ ಶಾಖೆ ಆಯೋಜಿಸಿದ ಕಾರ್ಯಕ್ರಮದಲ್ಲಿ ಡಾ.ಭರತ್ ಕುಮಾರ್, ಡಾ.ಹಲಸಂಗಿಮಠ ಸುರೇಶ್, ಡಾ.ಗೌರಾಂಬಾ ಆರ್. ಸಜ್ಜನ್ ಹಾಗೂ ಡಾ.ಚಂದ್ರಕಾಂತ ಗುಡಗಿ ಅವರನ್ನು ನ್ಯಾ. ಸಂತೋಷ್ ಹೆಗ್ಡೆ ಸನ್ಮಾನಿಸಿದರು. (ನಿಂತವರು ಎಡದಿಂದ) ಐಎಂಎ ಕರ್ನಾಟಕ ಶಾಖೆಯ ಕಾರ್ಯದರ್ಶಿ ಡಾ.ಎಸ್.ಎಂ.ಪ್ರಸಾದ್, ವೈದ್ಯಕೀಯ ಒಕ್ಕೂಟದ ಅಧ್ಯಕ್ಷೆ ಡಾ.ಆರ್. ಜ್ಯೋತಿ, ಅಧ್ಯಕ್ಷ ಡಾ.ಕಟೀಲ್ ಸುರೇಶ್ ಕುಡ್ವಾ ಹಾಗೂ ಪದಾಧಿಕಾರಿಗಳು ಇದ್ದಾರೆ – ಪ್ರಜಾವಾಣಿ ಚಿತ್ರ

24 ವೈದ್ಯರಿಗೆ ‘ಐಎಂಎ–ಕೆಎಸ್‌ಬಿ ಪ್ರಶಸ್ತಿ’

ರಾಜ್ಯದ ವಿವಿಧೆಡೆ ಉತ್ತಮವಾಗಿ ಸೇವೆ ನೀಡುತ್ತಿರುವ 24 ವೈದ್ಯರಿಗೆ ಸಂಘವು ‘ಐಎಂಎ–ಕೆಎಸ್‌ಬಿ ಪ್ರಶಸ್ತಿ ಪ್ರದಾನ’ ಮಾಡಿತು. ಡಾ. ಆಶಾ ಪ್ರಭು (ಶಿರಸಿ), ಡಾ. ಅಶೋಕ್ ಮಹೀಂದ್ರಕರ್ (ಬೆಂಗಳೂರು), ಡಾ. ಭರತ್ ಕುಮಾರ್ (ಬಳ್ಳಾರಿ), ಡಾ. ಚಂದ್ರಕಾಂತ್ ಗುಡಗಿ (ಬೀದರ್), ಡಾ. ಗೌರಾಂಬಾ ಆರ್. ಸಜ್ಜನ್ (ಬಿಜಾಪುರ), ಡಾ. ಹಲಸಂಗಿಮಠ ಸುರೇಶ್ (ಧಾರವಾಡ), ಡಾ.ಎಸ್.ಎಸ್. ಹಿರೇಮಠ (ಹುಬ್ಬಳ್ಳಿ), ಡಾ. ಕರವೀರಪ್ರಭು ಕ್ಯಾಲಕೊಂಡ (ಬಾದಾಮಿ), ಡಾ.ಎಂ.ಎಸ್. ಕೆಂಪೇಗೌಡ (ಮೈಸೂರು), ಡಾ.ಎಚ್.ಎಲ್. ಕೃಷ್ಣೇಗೌಡ (ಕೃಷ್ಣರಾಜನಗರ), ಡಾ.ಸಿ.ಎನ್. ಕುಲಕರ್ಣಿ (ರಾಯಚೂರು), ಡಾ.ಜೆ.ಕೆ. ಲಖಾನಿ (ಗದಗ), ಡಾ. ಮಲ್ಲಪ್ಪ ಲಕ್ಷ್ಮಣ್ ತುಕ್ಕರ್ (ಬೆಳಗಾವಿ), ಡಾ. ಮುಕುಂದ್ ರಾವ್ (ಚಿತ್ರದುರ್ಗ), ಡಾ. ನಾರಾಯಣ ಸ್ವಾಮಿ ಎಂ. (ಕೋಲಾರ), ಡಾ.ನಾರಾಯಣ ಪಿ. (ಶಿವಮೊಗ್ಗ), ಡಾ. ನಾಯಕ್ ವಿ.ಎಲ್. (ಉಡುಪಿ), ಡಾ.ನೀಲಮ್ಮ ಎಸ್.ಆರ್. (ಯಾದಗಿರಿ), ಡಾ. ಪಾಟೀಲ್ ಎಸ್.ಎನ್. (ಕಲಬುರ್ಗಿ), ಡಾ. ಪ್ರಸಾದ್ ಎಂ.ಕೆ. (ದಕ್ಷಿಣ ಕನ್ನಡ), ಡಾ. ಸರ್ವೋತ್ತಮ ಜೋಶಿ (ಗಂಗಾವತಿ), ಡಾ.ಶಂಕರ್ ಟಿ.ವಿ. (ರಾಮನಗರ), ಡಾ.ಶೀಲಾ ಭಾನುಮತಿ ಎಸ್. (ಬೆಂಗಳೂರು) ಹಾಗೂ ಡಾ. ಯಾದ್ವಾಡ್ ಬಿ.ಆರ್. (ತಾಳಿಕೋಟೆ) ಅವರನ್ನು ಗೌರವಿಸಲಾಯಿತು.

‘ಹಾಸ್ಪಿಟಲ್ ಮ್ಯಾನೇಜ್‌ಮೆಂಟ್’ ಕೋರ್ಸ್‌ಗೆ ಚಾಲನೆ

ಬೆಂಗಳೂರು: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂಬಿ) ಸಂಸ್ಥೆ ಪ್ರಾರಂಭಿಸಿದ ‘ಹಾಸ್ಪಿಟಲ್ ಮ್ಯಾನೇಜ್‌ಮೆಂಟ್’ ಕೋರ್ಸ್‌ಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಚಾಲನೆ ನೀಡಿದರು.

ಸಂಸ್ಥೆಯು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆಗಳ ಜತೆಗೆ ಉತ್ತಮ ಆಡಳಿತವೂ ಅಗತ್ಯ. ಆಡಳಿತದಲ್ಲಿ ದೋಷಗಳಿದ್ದರೆ ಅದು ರೋಗಿಗಳ ಚಿಕಿತ್ಸೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಹೊಸ ಕೋರ್ಸ್ ವೈದ್ಯರಿಗೆ ನೆರವಾಗಲಿದ್ದು, ರಾಜ್ಯದ ಸರ್ಕಾರಿ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ಸಾಧ್ಯ.’

‘ಐಐಎಂಬಿಯ ಪರಿಣತ ಉಪನ್ಯಾಸಕರು ಈ ಕೋರ್ಸ್ ನಡೆಸಿಕೊಡಲಿದ್ದು, ವೈದ್ಯರಿಗೆ ಸೂಕ್ತ ತರಬೇತಿ ನೀಡಲಿದ್ದಾರೆ. ಇದರಿಂದಾಗಿ ರಾಜ್ಯದ ಸರ್ಕಾರಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಆಡಳಿತ ನಡೆಸುವ ಪರಿಣತಿಯನ್ನು ವೈದ್ಯರು ಹೊಂದಬಹುದಾಗಿದೆ’ ಎಂದು ತಿಳಿಸಿದರು.

ಐಐಎಂಬಿಯ ನಿರ್ದೇಶಕ ಪ್ರೊ.ರಿಷಿಕೇಶ ಟಿ.ಕೃಷ್ಣನ್ ಹಾಗೂ ನಾರಾಯಣ ಹೆಲ್ತ್‌ನ ಸಂಸ್ಥಾಪನಾ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ಇದ್ದರು.

ಸುದ್ದಿ 2 ನಿಮಿಷ

ಅರ್ಬನ್ ಕ್ರೂಸರ್ ಹೈರೈಡರ್ ಅನಾವರಣ

ನವದೆಹಲಿ (ಪಿಟಿಐ): ಟೊಯೊಟ ಕಿರ್ಲೋಸ್ಕರ್ ಮೋಟರ್ ಕಂಪನಿಯು ‘ಅರ್ಬನ್ ಕ್ರೂಸರ್ ಹೈರೈಡರ್’ ಅನಾವರಣ ಮಾಡಿದ್ದು, ಈ ಮೂಲಕ ಮಧ್ಯಮ ಗಾತ್ರದ ಎಸ್‌ಯುವಿ ಮಾರುಕಟ್ಟೆ ಪ್ರವೇಶಿಸಿದೆ.

ಮುಂಬರುವ ಹಬ್ಬಗಳ ಋತುವಿನಲ್ಲಿ ಈ ವಾಹನವು ಬಿಡುಗಡೆ ಆಗುವ ನಿರೀಕ್ಷೆ ಇದೆ. ಇದು ಹುಂಡೈ ಕ್ರೆಟಾ, ಕಿಯಾ ಸೆಲ್ಟೋಸ್‌ನಂತಹ ವಾಹನಗಳ ಜೊತೆ ಪೈಪೋಟಿಗೆ ಇಳಿಯಲಿದೆ ಎನ್ನಲಾಗಿದೆ.

₹ 25 ಸಾವಿರ ಪಾವತಿಸಿ ಅರ್ಬನ್ ಕ್ರೂಸರ್ ಹೈರೈಡರ್ ವಾಹನ ಬುಕ್ ಮಾಡಬಹುದು ಎಂದು ಕಂಪನಿ ಹೇಳಿದೆ. ಇದು ನಿಯೊ ಡ್ರೈವರ್ ಹಾಗೂ ಸ್ವಯಂ ಚಾರ್ಜ್ ಆಗುವ ಹೈಬ್ರಿಡ್ ಎಲೆಕ್ಟ್ರಿಕ್ ಎಂಜಿನ್ ಆಯ್ಕೆಗಳಲ್ಲಿ ಲಭ್ಯವಾಗಲಿದೆ.

ನಿಯೊ ಡ್ರೈವ್ ಮಾದರಿಯು 1.5 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಹೊಂದಿರಲಿದೆ. ಸ್ವಯಂ ಚಾರ್ಜ್ ಆಗುವ ಹೈಬ್ರಿಡ್ ಎಲೆಕ್ಟ್ರಿಕ್ ಮಾದರಿಯಲ್ಲಿ 1.5 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಇದರಲ್ಲಿದೆ.

ಸನ್‌ರೂಫ್, ವೈರ್‌ಲೆಸ್ ಚಾರ್ಜರ್, 360 ಡಿಗ್ರಿ ಕ್ಯಾಮೆರಾ, ಆರು ಏರ್‌ಬ್ಯಾಗ್‌ಗಳು ವಾಹನದಲ್ಲಿ ಇರಲಿವೆ ಎಂದು ಕಂಪನಿ ತಿಳಿಸಿದೆ.



ಕೋವಿಡ್: ಸಕ್ರಿಯ ಪ್ರಕರಣ ಹೆಚ್ಚಳ

ಬೆಂಗಳೂರು: ಬೆಂಗಳೂರಿನಲ್ಲಿ 1,008 ಸೇರಿದಂತೆ ರಾಜ್ಯದಲ್ಲಿ 1,073 ಮಂದಿ ಸೋಂಕಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 25,587 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.19ರಷ್ಟಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 42 ವರ್ಷದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದ್ದು, 6,134 ಮಂದಿ ಸೋಂಕಿತರಿದ್ದಾರೆ. ಬೆಂಗಳೂರಿನಲ್ಲಿ 5,814 ಪ್ರಕರಣಗಳಿವೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.70 ಲಕ್ಷಕ್ಕೆ ಏರಿಕೆಯಾಗಿದೆ. 39.24 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ.

ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,076ಕ್ಕೆ ಏರಿಕೆಯಾಗಿದೆ. ಮರಣ ಪ್ರಮಾಣ ದರ ಶೇ 0.09ರಷ್ಟಿದೆ.

ಮಹಾರಾಷ್ಟ್ರ: ಸೋಮವಾರ ವಿಶ್ವಾಸಮತ ಯಾಚನೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂಧೆ ಜತೆಗಿರುವ ಶಿವಸೇನಾದ 39 ಶಾಸಕರು ಮತ್ತು ಬಿಜೆಪಿ ಮೈತ್ರಿ ಸರ್ಕಾರವು ಇದೇ 4ರಂದು (ಸೋಮವಾರ) ವಿಶ್ವಾಸಮತ ಕೋರಲಿದೆ. ಬಿಜೆಪಿ ಶಾಸಕ ರಾಹುಲ್ ನಾರ್ವೇಕರ್ ಅವರು ವಿಧಾನಸಭೆಯ ಸ್ಪೀಕರ್ ಹುದ್ದೆಗೆ ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ.

ಚುನಾವಣೆ ನಡೆಸಬೇಕಾದ ಅಗತ್ಯ ಬಿದ್ದರೆ ಭಾನುವಾರ ಚುನಾವಣೆ ನಡೆಯಲಿದೆ. ಎರಡು ದಿನಗಳ ವಿಶೇಷ ಅಧಿವೇಶನ ಭಾನುವಾರವೇ ಆರಂಭವಾಗಲಿದೆ.

ಸ್ಪೀಕರ್ ಹುದ್ದೆಗೆ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲು ಉದ್ಧವ್ ನೇತೃತ್ವದ ಶಿವಸೇನಾ, ಎನ್‌ಸಿಪಿ, ಕಾಂಗ್ರೆಸ್ ಮೈತ್ರಿಕೂಟವಾದ ಮಹಾ ವಿಕಾಸ ಆಘಾಡಿ (ಎಂವಿಎ) ನಿರ್ಧರಿಸಿದೆ. ಆದರೆ, ಅಭ್ಯರ್ಥಿ ಯಾರು ಎಂಬುದನ್ನು ಇನ್ನೂ ನಿರ್ಧರಿಸಿಲ್ಲ.

ಬಿಜೆಪಿಯು 106 ಶಾಸಕರನ್ನು ಹೊಂದಿದ್ದರೆ, ಶಿವಸೇನಾದ 39 ಶಾಸಕರ ಬೆಂಬಲವೂ ಇದೆ. 10 ಪಕ್ಷೇತರರು ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಕೆಲವು ಸಣ್ಣ ಪಕ್ಷಗಳ ಬೆಂಬಲವೂ ಇದೆ. ಹಾಗಾಗಿ, 165 ಶಾಸಕರು ಬೆಂಬಲಕ್ಕೆ ಇದ್ದಾರೆ ಎಂದು ಬಿಜೆಪಿ ಹೇಳಿಕೊಂಡಿದೆ.

ಉದ್ಧವ್ ಠಾಕ್ರೆ ಜತೆಗೆ ಶಿವಸೇನಾದ 16, ಕಾಂಗ್ರೆಸ್‌ನ 44 ಮತ್ತು ಎನ್‌ಸಿಪಿಯ 51 ಶಾಸಕರು ಇದ್ದಾರೆ. ಹೀಗಾಗಿ ಸ್ಪೀಕರ್ ಚುನಾವಣೆಯಲ್ಲಿ ಎಂವಿಎ ಅಭ್ಯರ್ಥಿ ಗೆಲ್ಲುವ ಸಾಧ್ಯತೆ ಕ್ಷೀಣ.

‘ಎಂವಿಎ ಸ್ಪೀಕರ್ ಹುದ್ದೆಯಲ್ಲಿ ಸ್ಪರ್ಧಿಸಲಿದೆ. ಶಿವಸೇನಾದಿಂದ ದೂರ ಹೋಗಿರುವ ಶಾಸಕರು ಅನರ್ಹತೆಯಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಎಂವಿಎಗೆ ಮತ ಹಾಕಲಿದ್ದಾರೆ. ಅವರು ಮತ ಹಾಕದೇ ಇದ್ದರೆ ಅನರ್ಹತೆ ಪ್ರಕ್ರಿಯೆ ಆರಂಭವಾಗಲಿದೆ’ ಎಂದು ಎನ್‌ಸಿಪಿ ರಾಜ್ಯ ಘಟಕದ ಅಧ್ಯಕ್ಷ ಜಯಂತ್ ಪಾಟೀಲ್ ಹೇಳಿದ್ದಾರೆ.

ಜೆ.ಪಿ. ಭವನದ ಬಳಿ ಜನತಾ ಮಿತ್ರ ಯಾತ್ರೆಗೆ ಚಾಲನೆ

ಆಗಸ್ಟ್‌ನಲ್ಲಿ ಪಂಚರತ್ನ ಯಾತ್ರೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬರುವ ಆಗಸ್ಟ್‌ನಲ್ಲಿ ಪಂಚರತ್ನ ರಥಯಾತ್ರೆ ಆರಂಭಿಸಿ ಹಳ್ಳಿ–ಹಳ್ಳಿಗೆ ಹೋಗುತ್ತೇನೆ. ಮೂರು ತಿಂಗಳು ಬೆಂಗಳೂರಿಗೆ ಬರುವುದಿಲ್ಲ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಜೆ.ಪಿ. ಭವನದ ಬಳಿ ಆಯೋಜಿಸಿದ್ದ ಜನತಾಮಿತ್ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಹದಿನೈದು ದಿನ ಬೆಂಗಳೂರಿಗೆ ಮೀಸಲಿಟ್ಟಿದ್ದೇನೆ. ಎಲ್ಲೆಡೆ ಜನತಾ ಮಿತ್ರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇನೆ. ಬೆಂಗಳೂರು ನಗರದ ಕಾರ್ಯಕರ್ತರ ಸಮಾವೇಶವನ್ನು ಜುಲೈ 17 ರಂದು ನಡೆಸಲಾಗುವುದು. ಸುಮಾರು ಒಂದೂವರೆ ಲಕ್ಷ ಜನ ಭಾಗವಹಿಸುವ ನಿರೀಕ್ಷೆ ಇದೆ’ ಎಂದರು.

‘ಬೆಂಗಳೂರಿಗೆ ನನ್ನ ಅಧಿಕಾರದ ಅವಧಿಯಲ್ಲಿ ಸಾಕಷ್ಟು ಕೊಡುಗೆ ನೀಡಿದ್ದೇನೆ. ಜೆಡಿಎಸ್ ಪರ ಒಲವು ಹೊಂದಿರುವ ಮತದಾರರು ಇದ್ದಾರೆ. ಅವರನ್ನು ಭೇಟಿಯಾಗಿ ಪಕ್ಷದ ಕಾರ್ಯಕ್ರಮಗಳು ಮತ್ತು ಉದ್ದೇಶಗಳನ್ನು ತಿಳಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕು. ಮುಂದಿನ ಚುನಾವಣೆಯಲ್ಲಿ ಬೆಂಗಳೂರು ನಗರದಿಂದಲೇ ಕನಿಷ್ಠ 17 ಶಾಸಕರು ಜೆಡಿಎಸ್‌ನಿಂದ ಚುನಾಯಿತರಾಗಲಿದ್ದಾರೆ’ ಎಂದು ಹೇಳಿದರು.



ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್.ಮಂಜುನಾಥ್ ಅವರಿಗೆ ಪಕ್ಷದ ಬಾವುಟ ನೀಡುವ ಮೂಲಕ ಜನತಾ ಮಿತ್ರ ಯಾತ್ರೆಗೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಚಾಲನೆ ನೀಡಿದರು. ರಮೇಶ್‌ಗೌಡ, ಎಚ್.ಡಿ. ಕುಮಾರಸ್ವಾಮಿ ಮತ್ತು ಬೆಂಗಳೂರು ನಗರ ಘಟಕದ ಅಧ್ಯಕ್ಷ ಪ್ರಕಾಶ್ ಇದ್ದರು – ಪ್ರಜಾವಾಣಿ ಚಿತ್ರ

‘ಎರಡೂ ರಾಷ್ಟ್ರೀಯ ಪಕ್ಷಗಳೂ ಜನರಿಗೆ ಮೋಸ ಮಾಡಿವೆ. ರಾಜ್ಯದ ತೆರಿಗೆಯಲ್ಲಿ ಸಂಬಳ ಪಡೆಯುವ ಐಎಎಸ್ ಅಧಿಕಾರಿಗಳು ಬಂಡವಾಳ ಹೂಡಿಕೆದಾರರಿಗೆ ಗುಜರಾತ್‌ಗೆ ಕಳುಹಿಸುತ್ತಿದ್ದಾರೆ. ಚುನಾವಣೆ ಸಮೀಪ ಬಂದಾಗ ಎಲ್ಲವನ್ನೂ ವಿವರವಾಗಿ ಮಾತನಾಡುತ್ತೇನೆ. ಡಿಸೆಂಬರ್‌ನಲ್ಲಿ ಚುನಾವಣೆ ಬರುವ ಸಾಧ್ಯತೆಗಳು ಇವೆ’ ಎಂದರು.

‘ರಾಜರಾಜೇಶ್ವರಿ ನಗರದಲ್ಲಿ ಪಕ್ಷದ ಮತಗಳಿವೆ. ಕಾರ್ಯಕರ್ತರು ಇದನ್ನು ಮರೆಯಬಾರದು. ಅಧಿಕಾರ ಇದ್ದಾಗ ನಾವು ಅಕ್ರಮವಾಗಿ ಹಣ ಮಾಡಿಲ್ಲ. ಮೂವರು ಶಾಸಕರು ನಮ್ಮ ಪಕ್ಷದವರಿದ್ದರು. ಅವರೂ ಬೇರೆ ಕಡೆ ಹೋಗಿದ್ದಾರೆ. ಚಾಮರಾಜಪೇಟೆಯಲ್ಲಿ ನಮ್ಮ ನಾಯಕರು ಹೋರಾಟ ಮಾಡಿದರು. ಅದರಿಂದಾಗಿ ಚಾಮರಾಜಪೇಟೆ, ಪುಲಕೇಶಿನಗರ, ಮಹಾಲಕ್ಷ್ಮಿ ಲೇಔಟ್ ಗಳಲ್ಲೂ ಗೆದ್ದೆವು. ಪಕ್ಷ ಉಳಿದರೆ ನಾವೆಲ್ಲಾ ಉಳಿಯುತ್ತೇವೆ ಎಂಬುದನ್ನು ಕಾರ್ಯಕರ್ತರು ಅರ್ಥ ಮಾಡಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.

‘ಭಗವಂತನ ಆಶೀರ್ವಾದದಿಂದ ಎರಡು ಬಾರಿ ಮುಖ್ಯಮಂತ್ರಿಯಾಗಿ ಇತಿಹಾಸದ ಪುಟ ಸೇರಿದ್ದೇನೆ. ಈಗಿನ ಸರ್ಕಾರ ಲೂಟಿ ಹೊಡೆಯುತ್ತಿದೆ. ಇದನ್ನು ಸಂಪೂರ್ಣವಾಗಿ ಬಂದ್ ಮಾಡಬೇಕು. ನನಗೆ ಒಂದು ಅವಕಾಶ ಕೊಡಲಿ. ನಮಗೆ ಇಪ್ಪತ್ತು ವರ್ಷ ಬೇಡ ಐದು ವರ್ಷದ ಅವಕಾಶ ಸಾಕು’ ಎಂದು ಅವರು ಹೇಳಿದರು.

‘ಶಿವಸೇನಾ ನಾಯಕ’ ಸ್ಥಾನದಿಂದ ಏಕನಾಥ ಶಿಂಧೆಗೆ ಕೊಕ್

ಮುಂಬೈ (ಪಿಟಿಐ): ಶಿವಸೇನಾ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಏಕನಾಥ ಶಿಂಧೆ ಅವರನ್ನು ‘ಶಿವಸೇನಾ ನಾಯಕ’ ಸ್ಥಾನದಿಂದ ಶುಕ್ರವಾರ ತೆಗೆದುಹಾಕಿದ್ದಾರೆ.

ಈ ಸಂಬಂಧ ಶಿಂಧೆ ಅವರಿಗೆ ಪತ್ರ ಬರೆದಿರುವ ಠಾಕ್ರೆ, ‘ಶಿಂಧೆ, ಪಕ್ಷದ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದರು’ ಎಂದು ಆರೋಪಿಸಿದ್ದಾರೆ.

‘ಶಿಂಧೆ ಸ್ವ ಇಚ್ಛೆಯಿಂದ ಪಕ್ಷದ ಸದಸ್ಯತ್ವವನ್ನು ತ್ಯಜಿಸಿದ್ದು, ಅವರನ್ನು ಪಕ್ಷದ ನಾಯಕ ಸ್ಥಾನದಿಂದ ತೆಗೆದು ಹಾಕಲಾಗಿದೆ’ ಎಂದು ಹೇಳಿದ್ದಾರೆ.

ಗುರುವಾರವಷ್ಟೇ, ಶಿಂಧೆ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

ಇ.ಡಿ ವಿಚಾರಣೆ ಎದುರಿಸಿದ ರಾವುತ್

ಮುಂಬೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣವೊಂದಕ್ಕೆ ಸಂಬಂಧಿಸಿ ಶಿವಸೇನಾದ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಶುಕ್ರವಾರ ಹತ್ತು ಗಂಟೆಗಳಿಗೂ ಹೆಚ್ಚು ಕಾಲ ವಿಚಾರಣೆಗೆ ಒಳಪಡಿಸಿದರು.

‘ಇಲ್ಲಿನ ಬಲ್ಲಾರ್ಡ್ ಎಸ್ಟೇಟ್‌ನಲ್ಲಿರುವ ಇ.ಡಿ ಕಚೇರಿಯಲ್ಲಿ ನಡೆದ ವಿಚಾರಣೆಗೆ ಹಾಜರಾಗಿ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿದೆ. ಮತ್ತೆ ಸಮನ್ಸ್ ನೀಡಿದಲ್ಲಿ, ವಿಚಾರಣೆಗೆ ಹಾಜರಾಗುವೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ರೈಲು, ವಿಮಾನಗಳಲ್ಲಿ ‘ಗುಡ್‌ಲೈಫ್’

ಹಾಸನ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದಿಂದ ಸರಬರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ರೈಲು ಮತ್ತು ವಿಮಾನಗಳಿಗೆ ಇದೇ ಮೊದಲ ಬಾರಿ ಹಾಸನ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ವತಿಯಿಂದ ‘ನಂದಿನಿ ಗುಡ್‌ಲೈಫ್’ ಸುವಾಸಿತ ಹಾಲು ಸರಬರಾಜು ಮಾಡುವುದನ್ನು ಆರಂಭಿಸಲಾಗಿದೆ.

ಸುಮಾರು ₹170 ಕೋಟಿ ಬಂಡವಾಳದಲ್ಲಿ ದಕ್ಷಿಣ ಭಾರತದಲ್ಲಿ ಮೊದಲ ಬಾರಿ ಸಂಪೂರ್ಣ ಸ್ವಯಂ ಚಾಲಿತ ವಿದ್ಯುನ್ಮಾನ ನಿಯಂತ್ರಿತ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಸಿರುವ ಪೆಟ್‌ಬಾಟಲ್ ಬೃಹತ್ ಸ್ಥಾವರನ್ನು ಸ್ಥಾಪಿಸಲಾಗಿದೆ. ಫೆಬ್ರುವರಿಯಿಂದ ಈ ಘಟಕ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ದಿನ 5 ಲಕ್ಷ ಬಾಟಲ್‌ಗಳವರೆಗೆ ಉತ್ಪಾದನೆ ಮಾಡಲಾಗುತ್ತಿದೆ.

ಈ ಸ್ವಯಂ ಚಾಲಿತ ಸ್ಥಾವರದಲ್ಲಿ ‘ನಂದಿನಿ ಗುಡ್‌ಲೈಫ್’ ಉಪ ಬ್ರ್ಯಾಂಡ್‌ನಲ್ಲಿ ಬಾದಾಮಿ, ಪಿಸ್ತಾ, ಸ್ಟ್ರಾಬೆರಿ ಸುವಾಸಿತ ಹಾಲು, ಲಸ್ಸಿ, ಚಾಕೊಲೇಟ್, ವೆನಿಲ್ಲಾ, ಬನಾನಾ ಮಿಲ್ಕ್ ಶೇಕ್, ಮಸಾಲ ಮಜ್ಜಿಗೆ ತಯಾರಿಸಿ ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಭಾರತೀಯ ರೈಲಿಗೆ ಪ್ರತಿ ತಿಂಗಳು 3 ಲಕ್ಷ ಲೀಟರ್ ಬೇಡಿಕೆ ಇದೆ. ಬೇಸಿಗೆ ಕಾಲದಲ್ಲಿ 5 ಲಕ್ಷದಿಂದ 6 ಲಕ್ಷ ಲೀಟರ್ ಬೇಡಿಕೆ ಇದೆ.



ಬೆಂಗಳೂರು ಶುಕ್ರವಾರ ಪೆಟ್ ಬಾಟಲ್ ಪೂರೈಸುವ ವಾಹನಗಳಿಗೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಹಸಿರು ನಿಶಾನೆ ತೋರಿದರು

ಹಾಸನ ಹಾಲು ಒಕ್ಕೂಟದ ಅಧ್ಯಕ್ಷ ಮತ್ತು ಶಾಸಕ ಎಚ್.ಡಿ. ರೇವಣ್ಣ ಅವರು 3.75 ಲಕ್ಷ ಲೀಟರ್ ಬಾಟಲ್ ಸಾಗಿಸುವ ಹಾಲಿನ ವಾಹನಗಳಿಗೆ ಶುಕ್ರವಾರ ಹಾಸನದಲ್ಲಿ ಹಸಿರು ನಿಶಾನೆ ತೋರಿದರು.

ವಿಸ್ತಾರಾ ಮತ್ತು ಏರ್ ಇಂಡಿಯಾ ಸಂಸ್ಥೆಗಳ ವಿಮಾನಗಳಲ್ಲೂ ಪೆಟ್ ಬಾಟಲ್ ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡಲಾಗುತ್ತಿದೆ. ಪೆಟ್ ಬಾಟಲ್ ಪೂರೈಸುವ ವಾಹನಗಳಿಗೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಅವರು ಹಸಿರು ನಿಶಾನೆ ತೋರಿದರು.

ಖಾಲಿ ನಿವೇಶನಗಳಲ್ಲಿ ತ್ಯಾಜ್ಯ; ಕ್ರಿಮಿನಲ್ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಖಾಲಿ ನಿವೇಶನಗಳಲ್ಲಿ ತ್ಯಾಜ್ಯವಿದ್ದರೆ ಅದರ ಮಾಲೀಕರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಲಿದೆ.

ಖಾಲಿ ನಿವೇಶನಗಳಲ್ಲಿ ತ್ಯಾಜ್ಯ ತೆರವಿಗೆ ಈ ಹಿಂದೆ ದಂಡ ವಿಧಿಸಲಾಗುತ್ತಿತ್ತು. ಇದನ್ನು ಪುನಃ ಜಾರಿಗೆ ತರಲಾಗುತ್ತದೆ. ಇನ್ನೊಂದು ತಿಂಗಳ ಗಡುವು ನೀಡಲಾಗುತ್ತಿದ್ದು, ಅಷ್ಟರಲ್ಲಿ ಮಾಲೀಕರು ಖಾಲಿ ನಿವೇಶನದಲ್ಲಿನ ತ್ಯಾಜ್ಯವನ್ನು ತೆರವುಗೊಳಿಸಬೇಕು ಎಂದು ಬಿಬಿಎಂಪಿ ಕಸ ನಿರ್ವಹಣಾ ವಿಭಾಗದ ವಿಶೇಷ ಆಯುಕ್ತ ಕೆ.ಹರೀಶ್ ಕುಮಾರ್ ಶುಕ್ರವಾರ ತಿಳಿಸಿದರು.

ಖಾಲಿ ನಿವೇಶನದಲ್ಲಿ ತ್ಯಾಜ್ಯವಿದ್ದರೆ ಅದನ್ನು ಬಿಬಿಎಂಪಿ ತೆರವು ಮಾಡುತ್ತದೆ. ಇದಕ್ಕೆ ಚದರ ಅಡಿಗೆ ₹2 ಶುಲ್ಕ ವಿಧಿಸಲಾಗುತ್ತದೆ. ಎರಡನೇ ಬಾರಿಯೂ ಶುಲ್ಕ ವಿಧಿಸಿ ತೆರವು ಮಾಡಲಾಗುತ್ತದೆ. ಮೂರನೇ ಬಾರಿ ಇದು ಮುಂದುವರಿದರೆ ಮಾಲೀಕರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ ಎಂದು ವಿವರ ನೀಡಿದರು.

ಶುಲ್ಕ ಕಟ್ಟದಿದ್ದರೆ ಏನಾಗುತ್ತದೆ ಎಂದು ಸುಮ್ಮನಿರುವಂತಿಲ್ಲ. ಎರಡು ಬಾರಿ ವಿಧಿಸುವ ಶುಲ್ಕವನ್ನು ಆಸ್ತಿ ತೆರಿಗೆಗೆ ಸೇರಿಸಲಾಗುತ್ತದೆ. ಇದನ್ನು ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲಾಗುತ್ತದೆ ಎಂದರು.

ಏಕಬಳಕೆ ಪ್ಲಾಸ್ಟಿಕ್ ನಿಷೇಧವನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತದೆ. ವಲಯಗಳಲ್ಲಿ ದಿಢೀರ್ ತಪಾಸಣೆ ಮಾಡಲಾಗುತ್ತದೆ. ಜೊತೆಗೆ ನಾಗರಿಕರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನೂ ಮಾಡಲಾಗುತ್ತದೆ. ಪ್ರತಿ ವಾರ, ಪ್ರತಿ ವಲಯದಲ್ಲೂ ಈ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ ಎಂದು ಹರೀಶ್‌ಕುಮಾರ್ ತಿಳಿಸಿದರು.

ಶಿವಾನಂದ ವೃತ್ತ ಸ್ಟೀಲ್ ಮೇಲ್ಸೇತುವೆ ಕಾಮಗಾರಿ ಪುನರಾರಂಭ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾನಂದ ವೃತ್ತದಲ್ಲಿ ಸ್ಥಗಿತಗೊಂಡಿದ್ದ ಸ್ಟೀಲ್ ಮೇಲ್ಸೇತುವೆ ಕಾಮಗಾರಿ 10 ತಿಂಗಳ ನಂತರ ಪ್ರಾರಂಭವಾಗುವ ಲಕ್ಷಣಗಳಿವೆ.

ಮೇಲುರಸ್ತೆ ಉದ್ದವನ್ನು ಕಡಿತಗೊಳಿಸಿದ್ದ ಬಿಬಿಎಂಪಿಯ ಮಾರ್ಪಡಿಸಿದ ವಿನ್ಯಾಸಕ್ಕೆ ಭಾರತೀಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ತಜ್ಞರು ಸಮ್ಮತಿ ಸೂಚಿಸಿದ ಹಿನ್ನೆಲೆಯಲ್ಲಿ ಹೈಕೋರ್ಟ್‌ನಿಂದ ಕಾಮಗಾರಿ ಮುಂದುವರಿಸಲು ಬಿಬಿಎಂಪಿಗೆ ಸೂಚನೆ ಲಭಿಸಿದೆ.

ಮೇಲ್ಸೇತುವೆ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಗೆ ಒಪ್ಪದ ಆಸ್ತಿ ಮಾಲೀಕರು, ಬಿಬಿಎಂಪಿಯ ಪರಿಹಾರಕ್ಕೆ ಸಮ್ಮತಿಸಿರಲಿಲ್ಲ. ಹೀಗಾಗಿ, ಅವುಗಳನ್ನು ಹೊರತುಪಡಿಸಿ ಮೇಲ್ಸೇತುವೆ ಉದ್ದವನ್ನು ಕಡಿತಗೊಳಿಸಿ ಕಾಮಗಾರಿ ಮುಗಿಸಲು ಬಿಬಿಎಂಪಿ ಎಂಜಿನಿಯರ್‌ಗಳು ವಿನ್ಯಾಸವನ್ನು ಬದಲಿಸಿದ್ದರು. ಅದು ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿತ್ತು.

‘ಮಾರ್ಪಡಿಸಿದ ವಿನ್ಯಾಸ ಇಂಡಿಯನ್ ರೋಡ್ಸ್ ಕಾಂಗ್ರೆಸ್ (ಐಆರ್‌ಎಸ್) ನಿಯಮಗಳಂತೆಯೇ ಇತ್ತು. ಐಐಎಸ್‌ಸಿ ತಜ್ಞರೂ ಸಮ್ಮತಿಸಿದ್ದಾರೆ. ಹೀಗಾಗಿ ಈ ಮೇಲ್ಸೇತುವೆ ಕಾಮಗಾರಿಯನ್ನು ಇನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸಬಹುದಾಗಿದೆ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಸ್ಟೀಲ್ ಮೇಲ್ಸೇತುವೆ ಕಾಮಗಾರಿ 2017ರ ಅಕ್ಟೋಬರ್‌ನಲ್ಲಿ ಆರಂಭವಾಗಿತ್ತು. ಮೊದಲಿನ ಯೋಜನೆಯಂತೆ ಮೂರು ವರ್ಷಗಳ ಹಿಂದೆಯೇ ಪೂರ್ಣಗೊಳ್ಳಬೇಕಿತ್ತು.

ಮೇಲ್ಸೇತುವೆ ನಿರ್ಮಾಣದಿಂದ ಸಾಕಷ್ಟು ತೊಂದರೆ ಉಂಟಾಗಿದ್ದು, ಪಾದಚಾರಿಗಳ ಓಡಾಟಕ್ಕೂ ಸಮಸ್ಯೆಯಾಗಿದೆ ಎಂಬ ದೂರು ಇದೆ. ‘ಮೇಲ್ಸೇತುವೆ ಕಾಮಗಾರಿ ಪೂರ್ಣಗೊಂಡ ಮೇಲೆ ಪಾದಚಾರಿ ಮಾರ್ಗವನ್ನು ನಿರ್ಮಿಸಲಾಗುತ್ತದೆ. ರಸ್ತೆ ಬದಿಯ ಚರಂಡಿಯನ್ನು ಮರು–ನಿರ್ಮಾಣ ಮಾಡಲಾಗುತ್ತದೆ’ ಎಂದು ಬಿಬಿಎಂಪಿ ಯೋಜನೆ ಮುಖ್ಯ ಎಂಜಿನಿಯರ್ ಎಂ. ಲೋಕೇಶ್ ತಿಳಿಸಿದರು.

ಡಿಕೆಶಿ ವಿಚಾರಣೆ ಜುಲೈ 30ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಇತರ ನಾಲ್ವರು ಆರೋಪಿಗಳ ವಿಚಾರಣೆಯನ್ನು ಜುಲೈ 30ಕ್ಕೆ ಇಲ್ಲಿನ ಚುನಾಯಿತ ಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ (ಇ.ಡಿ. ನ್ಯಾಯಾಲಯ) ಮುಂದೂಡಿದೆ.

ಶಿವಕುಮಾರ್, ಅವರ ನಿಕಟವರ್ತಿಗಳಾದ ಉದ್ಯಮಿ ಸಚಿನ್ ನಾರಾಯಣ್, ಶರ್ಮಾ ಟ್ರಾನ್ಸ್‌ಪೋರ್ಟ್ ಮಾಲೀಕ ಸುನೀಲ್ ಕುಮಾರ್ ಶರ್ಮಾ, ದೆಹಲಿಯ ಆಂಜನೇಯ ಹನುಮಂತಯ್ಯ ಮತ್ತು ರಾಜೇಂದ್ರ ಎನ್. ವಿರುದ್ಧ ವಿಚಾರಣೆ ಆರಂಭಿಸುವಂತೆ ಕೋರಿ ನ್ಯಾಯಾಲಯಕ್ಕೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಆರೋಪ ಪಟ್ಟಿ ಸಲ್ಲಿಸಿದ್ದರು. ಈ ವರದಿಯನ್ನು ಮಾನ್ಯ ಮಾಡಿದ ನ್ಯಾಯಾಲಯವು ಜುಲೈ 1ರಂದು ವಿಚಾರಣೆಗೆ ಹಾಜರಾಗುವಂತೆ ಎಲ್ಲ ಆರೋಪಿಗಳಿಗೂ ಸಮನ್ಸ್ ಜಾರಿ ಮಾಡಿತ್ತು.

ಪಶ್ಚಿಮ ವಲಯ ವ್ಯಾಪ್ತಿ ಅಧಿಕಾರಿಗಳಿಗೆ ಮುಖ್ಯ ಆಯುಕ್ತರ ಸೂಚನೆ

ರಸ್ತೆಯಲ್ಲಿ ಮಳೆ ನೀರು: 15 ದಿನದಲ್ಲಿ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ನೀರು ರಸ್ತೆಯಲ್ಲಿ ನಿಲ್ಲದಂತೆ ಚರಂಡಿಗಳನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿದು ಹೋಗುವಂತೆ 10–15 ದಿನಗಳಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ನಗರದ ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಲ್ಲಿ ಶುಕ್ರವಾರ ತಪಾಸಣೆ ನಡೆಸಿದ ಅವರು, ಈ ವಲಯದಲ್ಲಿ ಸುಮಾರು 12 ಸ್ಥಳಗಳಲ್ಲಿ ನೀರು ನಿಂತು ಸಮಸ್ಯೆ ಉಂಟಾಗುತ್ತಿದೆ. ಇದನ್ನು ಕೂಡಲೇ ಪರಿಹರಿಸುವಂತೆ ಆದೇಶಿಸಿದರು.

ಸದಾಶಿವನಗರ ಪೊಲೀಸ್ ಠಾಣೆಯಿಂದ ನ್ಯೂ ಬಿಇಎಲ್ ರಸ್ತೆ, ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ರಸ್ತೆ ಶೋಲ್ಡರ್ ಡ್ರೈನ್ ಅನ್ನು ಸ್ವಚ್ಛಗೊಳಿಸಬೇಕು. ಟ್ರಾನ್ಸ್‌ಫಾರ್ಮರ್‌ನ ವಿದ್ಯುತ್ ತಂತಿಗಳು ಪಾದಚಾರಿ ಮಾರ್ಗದಲ್ಲಿರುವುದರಿಂದ ಸಮಸ್ಯೆಯಾಗುತ್ತಿದ್ದು, ಅದನ್ನು ಸರಿಪಡಿಸಲು ಬೆಸ್ಕಾಂ ಅಧಿಕಾರಿಗಳಿಗೆ ಹೇಳಿದರು.



ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಪಶ್ಚಿಮ ವಲಯದಲ್ಲಿ ರಸ್ತೆ ಚರಂಡಿಗಳನ್ನು ಪರಿಶೀಲಿಸಿದರು

ರಸ್ತೆ ಬದಿಯಿರುವ ಚರಂಡಿಗೆ ನೇರವಾಗಿ ಒಳಚರಂಡಿ ನೀರು ಹರಿಯುವುದನ್ನು ಗಮನಿಸಿದ ಮುಖ್ಯ ಆಯುಕ್ತರು, ಜಲಮಂಡಳಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು, ನೋಟಿಸ್ ನೀಡಲು ಸೂಚಿಸಿದರು.

ತುಮಕೂರು ಕಡೆ ಹೋಗುವ ಹೊರ ವರ್ತುಲ ರಸ್ತೆಯ ಎಂ.ಇ.ಐ ಜಂಕ್ಷನ್ ಬಳಿ, ಮಹಾಲಕ್ಷ್ಮೀಪುರ ವಾರ್ಡ್ ಜೆ.ಎಸ್.ನಗರ 60 ಅಡಿ ರಸ್ತೆಯಲ್ಲಿ ಚರಂಡಿ, ಶೋಲ್ಡರ್ ಡ್ರೈನ್‌ಗಳನ್ನು ಸ್ವಚ್ಛಗೊಳಿಸಲು ತಿಳಿಸಿದರು. ಜೆ.ಸಿ. ನಗರದ ಬಳಿಯಿರುವ ವೃಷಭಾವತಿ ಕಾಲುವೆ ತಡೆಗೋಡೆ ಕಾಮಗಾರಿಯನ್ನು ತ್ವರಿತವಾಗಿ ಪ್ರಾರಂಭಿಸಲು ರಾಜಕಾಲುವೆ ವಿಭಾಗದವರಿಗೆ ಹೇಳಿದರು.

ಮೇಲುಸೇತುವೆ: ಮಾಗಡಿ ಮುಖ್ಯರಸ್ತೆ ಮೂಲಕ ಹೆಚ್ಚು ವಾಹನಗಳು ಸಂಚರಿಸುವ ನಿಟ್ಟಿನಲ್ಲಿ ವೀರೇಶ್ ಚಿತ್ರ ಮಂದಿರದ ಬಳಿ ಪಾದಚಾರಿಗಳು ರಸ್ತೆ ದಾಟಲು ಮೇಲು ಸೇತುವೆ ನಿರ್ಮಿಸಲು ಅಧಿಕಾರಿಗಳಿಗೆ ಆದೇಶಿಸಿದರು.

ಓಕಳಿಪುರ ಅಷ್ಟಪಥ ಕಾರಿಡಾರ್ ಬಳಿ ರೈಲ್ವೆ ಇಲಾಖೆ ವತಿಯಿಂದ ನಡೆಯುತ್ತಿರುವ ಬಾಕ್ಸ್ ಅಳವಡಿಸುವ ಕಾಮಗಾರಿಯನ್ನು ಇನ್ನೊಂದು ತಿಂಗಳಲ್ಲಿ ಪೂರ್ಣಗೊಳಿಸಲು ತುಷಾರ್ ಗಿರಿನಾಥ್ ಸೂಚಿಸಿದರು.

ವಲಯ ಆಯುಕ್ತ ಡಾ. ದೀಪಕ್, ವಲಯ ಜಂಟಿ ಆಯುಕ್ತ ಶ್ರೀನಿವಾಸ್, ಮುಖ್ಯ ಎಂಜಿನಿಯರ್ ದೊಡ್ಡಯ್ಯ, ಲೋಕೇಶ್, ಜಲಮಂಡಳಿ, ಬೆಸ್ಕಾಂ ಅಧಿಕಾರಿಗಳು ಇದ್ದರು.

ಮುಖ್ಯ ಆಯುಕ್ತರ ನಡೆ ವಲಯದ ಕಡೆ

ಬಿಬಿಎಂಪಿ ಪಶ್ಚಿಮ ವಲಯದ ಕಚೇರಿಯಲ್ಲಿ ಸಾರ್ವಜನಿಕರು ಅಹವಾಲುಗಳನ್ನು ಸ್ವೀಕರಿಸಿದ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಹಲವು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರಕ್ಕೆ ಸೂಚಿಸಿದರು.

ಎಂಟೂ ವಲಯಗಳ ನಾಗರಿಕರು ದೂರು ನೀಡಲು ಕೇಂದ್ರ ಕಚೇರಿಗೆ ಬರುತ್ತಿದ್ದ ಹಿನ್ನೆಲೆಯಲ್ಲಿ, ಅವರಿಗೆ ಅನುಕೂಲ ಕಲ್ಪಿಸಲು ‘ಮುಖ್ಯ ಆಯುಕ್ತರ ನಡೆ ವಲಯದ ಕಡೆ’ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹೀಗಾಗಿ, ಶುಕ್ರವಾರ ಮಲ್ಲೇಶ್ವರದಲ್ಲಿರುವ ಬಿಬಿಎಂಪಿ ಕಚೇರಿಯಲ್ಲಿ ಅಹವಾಲು ಸ್ವೀಕರಿಸಿದರು.

ಮಳೆ ನೀರಿನ ಸಮಸ್ಯೆ, ರಸ್ತೆಯಲ್ಲಿ ತ್ಯಾಜ್ಯ, ಅಕ್ರಮ ಚಟುವಟಿಕೆ, ಅಕ್ರಮ ಮಳಿಗೆ ನಿರ್ಮಾಣ, ರಸ್ತೆ ಅಗೆತ, ಬೀದಿದೀಪ ಸೇರಿದಂತೆ ಹಲವು ದೂರುಗಳಿಗೆ ಸ್ಪಂದಿಸಿದ ಮುಖ್ಯ ಆಯುಕ್ತರು, ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಚಿತ್ರದುರ್ಗ: ಮಾನವರಹಿತ ಯುದ್ಧವಿಮಾನ ಹಾರಾಟ ಯಶಸ್ವಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮೊದಲ ಮಾನವರಹಿತ ಯುದ್ಧವಿಮಾನದ ಪರೀಕ್ಷಾರ್ಥ ಹಾರಾಟ ಚಳ್ಳಕೆರೆ ತಾಲ್ಲೂಕಿನ ರಕ್ಷಣಾ ಸಂಶೋಧನ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ವಿಮಾನ ಪರೀಕ್ಷಾ ನೆಲೆಯಲ್ಲಿ (ಎಟಿಆರ್) ಶುಕ್ರವಾರ ಯಶಸ್ವಿಯಾಗಿ ನಡೆಯಿತು.

ಇಲ್ಲಿ ನಡೆದ ಪರೀಕ್ಷಾರ್ಥ ಹಾರಾಟದಲ್ಲಿ, ಆಗಸಕ್ಕೆ ಹಾರಿದ ಯುದ್ಧವಿಮಾನವು ಅಷ್ಟೇ ನಿಖರವಾಗಿ ಕೆಳಗೆ ಇಳಿದು ಭರವಸೆ ಮೂಡಿಸಿತು. ರಕ್ಷಣಾ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುತ್ತಿರುವ ಭಾರತ, ಮಾನವರಹಿತ ವಿಮಾನಗಳ ಅಭಿವೃದ್ಧಿಯಂತಹ ಕ್ಲಿಷ್ಟಕರ ತಂತ್ರಜ್ಞಾನದಲ್ಲಿಯೂ ಮೈಲಿಗಲ್ಲು ಸಾಧಿಸಿದಂತಾಯಿತು.



ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಡಿಆರ್‌ಡಿಒದ ವಿಮಾನ ಪರೀಕ್ಷಾ ನೆಲೆಯಲ್ಲಿ ಮಾನವರಹಿತ ಯುದ್ಧವಿಮಾನದ ಪರೀಕ್ಷಾರ್ಥ ಹಾರಾಟ ಶುಕ್ರವಾರ ನಡೆಯಿತು

ಬೆಂಗಳೂರಿನಲ್ಲಿರುವ ಡಿಆರ್‌ಡಿಒ ಅಂಗಸಂಸ್ಥೆಯಾದ ವೈಮಾನಿಕ ಅಭಿವೃದ್ಧಿ ಸಂಸ್ಥೆ (ಎಡಿಇ) ಈ ಯುದ್ಧವಿಮಾನವನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದೆ. ವೈಮಾನಿಕ ವಾಹನವನ್ನು ನಿಯಂತ್ರಿಸುವ ಏವಿಯಾನಿಕ್ಸ್ ವ್ಯವಸ್ಥೆಯನ್ನು ದೇಶೀಯವಾಗಿಯೇ ಸಿದ್ಧಪಡಿಸಲಾಗಿದೆ. ಡಿಆರ್‌ಡಿಒದ ಈ ಸಾಧನೆಗೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ‘ಯುದ್ಧ ವಿಮಾನ ನಿರ್ಮಾಣದಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಇದೊಂದು ಮಹತ್ತರ ಸಾಧನೆ. ಆತ್ಮನಿರ್ಭರ ಭಾರತದ ದಾರಿಯಲ್ಲಿ ಇದು ಮಹತ್ವದ ಹೆಜ್ಜೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಶನಿವಾರ, ಜುಲೈ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 182 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಅನಿಯಂತ್ರಿತ ಮೂತ್ರ ವಿಸರ್ಜನೆ ಬಹಳಷ್ಟು ಮಹಿಳೆಯರನ್ನು ಕಾಡುವ ಸಮಸ್ಯೆ. ಕೆಗೆಲ್ ವ್ಯಾಯಾಮ ಮಾಡುವುದರಿಂದ ಹೆಚ್ಚಿನ ಸಂದರ್ಭಗಳಲ್ಲಿ ಇದನ್ನು ತಡೆಗಟ್ಟಬಹುದು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,908 ▼	15,752 ▼	₹53,600 (ಬೆಂಗಳೂರು) ▲	₹60,600 (ಬೆಂಗಳೂರು) ▼	78.94 ▲

ಬಿಜೆಪಿಯಿಂದ ಅಮಾನತಾದ ನಾಯಕಿಗೆ ಸುಪ್ರೀಂ ಕೋರ್ಟ್ ತರಾಟೆ

‘ದೇಶಕ್ಕೇ ಬೆಂಕಿ ಹಚ್ಚಿದ ನೂಪುರ್’

ನವದೆಹಲಿ (ಪಿಟಿಐ): ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರ ಹಿಡಿತವಿಲ್ಲದ ಮಾತು ಇಡೀ ದೇಶಕ್ಕೆ ಬೆಂಕಿ ಹಚ್ಚಿದೆ, ದೇಶದಲ್ಲಿ ಈಗ ಏನಾಗುತ್ತಿದೆಯೋ ಅದಕ್ಕೆಲ್ಲಾ ಅವರೊಬ್ಬರೇ ಹೊಣೆ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ತರಾಟೆಗೆ ತೆಗೆದುಕೊಂಡಿದೆ.


ನೂಪುರ್


ಸುದ್ದಿವಾಹಿನಿಯೊಂದರ ಚರ್ಚಾ ಕಾರ್ಯಕ್ರಮವೊಂದರಲ್ಲಿ ಮಾತನಾಡುವಾಗ ಪ್ರವಾದಿ ಮಹಮ್ಮದರ ಕುರಿತು ನೂಪುರ್ ಶರ್ಮಾ ಅವರು ನೀಡಿದ್ದ ಹೇಳಿಕೆಗೆ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. ಹಲವು ದೇಶಗಳು ಈ ಬಗ್ಗೆ ತಮ್ಮ ಆಕ್ಷೇಪ ಮತ್ತು ಪ್ರತಿಭಟನೆಯನ್ನು ದಾಖಲಿಸಿದ್ದವು. ತಕ್ಷಣವೇ ಬಿಜೆಪಿಯು ನೂಪುರ್ ಶರ್ಮಾ ಅವರನ್ನು ಪಕ್ಷದ ವಕ್ತಾರೆ ಸ್ಥಾನದಿಂದ ವಜಾ ಮಾಡಿತ್ತು. ನೂಪುರ್ ಅವರ ಹೇಳಿಕೆಯನ್ನು ಬೆಂಬಲಿಸಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದ ಉದಯಪುರದ ಟೇಲರ್ ಕನ್ಹಯ್ಯಲಾಲ್ ಎಂಬುವವರನ್ನು ಇಬ್ಬರು ಮುಸ್ಲಿಮರು ಕೆಲ ದಿನಗಳ ಹಿಂದೆ ಹತ್ಯೆ ಮಾಡಿದ್ದರು.

ನೂಪುರ್ ಅವರ ಹೇಳಿಕೆ ವಿರುದ್ಧ ದೇಶದ ಹಲವೆಡೆ ಎಫ್‌ಐಆರ್ ದಾಖಲಾಗಿದ್ದವು. ಆ ಎಲ್ಲಾ ಎಫ್‌ಐಆರ್‌ಗಳನ್ನು ದೆಹಲಿಗೆ ವರ್ಗಾಯಿಸಬೇಕು ಎಂದು ಕೋರಿ ನೂಪುರ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪಾರ್ದಿವಾಲಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿ, ನೂಪುರ್ ಅವರನ್ನು ಮತ್ತು ದೆಹಲಿ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತು.

7ನೇ ಪುಟ ನೋಡಿ

ಪೊಲೀಸರಿಗೂ ತರಾಟೆ

ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಪೀಠವು ದೆಹಲಿ ಪೊಲೀಸರನ್ನು ತರಾಟೆಗೆ ತೆಗೆದುಕೊಂಡಿತು. ನೂಪುರ್ ಅವರನ್ನು ಏಕೆ ಬಂಧಿಸಿಲ್ಲ ಎಂದು ಕೇಳಿತು. ‘ನಮ್ಮ ಕಕ್ಷಿದಾರರ ವಿರುದ್ಧ ದೆಹಲಿ, ಮುಂಬೈ, ಹೈದರಾಬಾದ್, ಜಮ್ಮು-ಕಾಶ್ಮೀರದಲ್ಲಿ ಎಫ್‌ಐಆರ್‌ಗಳು ದಾಖಲಾಗಿವೆ. ಅವರು ದೆಹಲಿಯಲ್ಲಿ ತನಿಖೆಗೆ ಹಾಜರಾಗಿದ್ದಾರೆ. ಅವರು ಎಲ್ಲಿಯೂ ಓಡಿ ಹೋಗಿಲ್ಲ’ ಎಂದು ನೂಪುರ್ ಪರ ವಕೀಲರು ಹೇಳಿದರು.



ಆಗ ಪೀಠವು, ‘ಬೇರೆಯವರ ವಿರುದ್ಧ ಎಫ್‌ಐಆರ್ ದಾಖಲಾದ ತಕ್ಷಣವೇ ಅವರನ್ನು ಬಂಧಿಸುತ್ತೀರಿ. ಆದರೆ ಇವರನ್ನು ಬಂಧಿಸಿಲ್ಲ. ಅವರ ವಿರುದ್ಧ ದಾಖಲಾದ ಎಫ್‌ಐಆರ್‌ನ ತನಿಖೆಯ ಪ್ರಗತಿ ಏನಾಯಿತು. ದೆಹಲಿ ಪೊಲೀಸರು ಏನು ಮಾಡಿದ್ದಾರೆ? ನಾವು ಆ ಬಗ್ಗೆಯೂ ಮಾತನಾಡಬೇಕೆ’ ಎಂದು ಪ್ರಶ್ನಿಸಿತು.

ಜತೆಗೆ, ‘ತನಿಖೆಗೆ ಹಾಜರಾದಾಗ ಅವರಿಗೆ ಅದ್ದೂರಿ ಸ್ವಾಗತ ದೊರಕಿರಬೇಕಿಲ್ಲವೇ? ಎಫ್‌ಐಆರ್ ದಾಖಲಾಗಿದೆ. ಆದರೂ ಅವರನ್ನು ಬಂಧಿಸಿಲ್ಲ. ಅವರು ಪ್ರಭಾವ ಬೀರಿರುವುದನ್ನು ಇದು ತೋರಿಸುತ್ತದೆ. ಅವರ ಬೆನ್ನಿಗೆ ರಾಜಕೀಯ ಪಕ್ಷವಿದೆ ಎಂದ ಮಾತ್ರಕ್ಕೆ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಬಹುದು ಎಂದು ಅವರು ಭಾವಿಸಿದ್ದಾರೆಯೇ’ ಎಂದು ಪೀಠವು ಕೇಳಿತು.

‘ನಿರೂಪಕರ ವಿರುದ್ಧ ಎಫ್‌ಐಆರ್ ದಾಖಲಿಸಬೇಕಿತ್ತು’

ಸುದ್ದಿವಾಹಿನಿಯ ನಿರೂಪಕರು ಚರ್ಚಾ ಕಾರ್ಯಕ್ರಮವನ್ನು ದುರ್ಬಳಕೆ ಮಾಡಿಕೊಂಡಿದ್ದರೆ, ಅವರ ವಿರುದ್ಧ ಮೊದಲು ಎಫ್‌ಐಆರ್ ದಾಖಲಿಸಬೇಕಿತ್ತಲ್ಲವೇ ಎಂದು ಸುಪ್ರೀಂ ಕೋರ್ಟ್ ಪೀಠವು ಪ್ರಶ್ನಿಸಿದೆ.

‘ನಿರೂಪಕರು ಕೇಳಿದ ಪ್ರಶ್ನೆಗೆ ನೂಪುರ್ ಶರ್ಮಾ ಆ ಹೇಳಿಕೆ ನೀಡಿದ್ದರು. ಅಲ್ಲಿ ಗಂಭೀರ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಎದುರಾಳಿಗಳು ಆಡಿದ ಮಾತಿಗೆ, ಆ ಸಂದರ್ಭಕ್ಕಷ್ಟೇ ನೂಪುರ್ ಪ್ರತಿಕ್ರಿಯೆ ನೀಡಿದ್ದರು’ ಎಂದು ನೂಪುರ್ ಪರ ವಕೀಲರು ಮಾಡಿದ ಪ್ರತಿಪಾದನೆಗೆ ಪೀಠವು ಈ ರೀತಿ ಪ್ರತಿಕ್ರಿಯಿಸಿದೆ.

‘ಸುದ್ದಿವಾಹಿನಿಯ ಚರ್ಚೆ ನಡೆಯುತ್ತಿದ್ದುದಾದರೂ ಏನಕ್ಕೆ? ಅದು ಕಾರ್ಯಸೂಚಿಯ ಭಾಗವಾಗಿತ್ತೇ? ನ್ಯಾಯಾಂಗದ ವ್ಯಾಪ್ತಿಯಲ್ಲಿರುವ ವಿಷಯವನ್ನು ಏಕೆ ಆಯ್ಕೆ ಮಾಡಿಕೊಳ್ಳಬೇಕಿತ್ತು? ನ್ಯಾಯಾಂಗದ ವ್ಯಾಪ್ತಿಯಲ್ಲಿರುವ ವಿಷಯವನ್ನು ಚರ್ಚೆಗೆ ಎತ್ತಿಕೊಳ್ಳುವುದರಲ್ಲಿ, ಕಾರ್ಯಸೂಚಿಗೆ ಪ್ರಚಾರ ನೀಡುವುದರ ಹೊರತಾಗಿ ಸುದ್ದಿವಾಹಿನಿಗೆ ಬೇರೆ ಯಾವ ಉದ್ದೇಶವಿತ್ತು’ ಎಂದು ಪೀಠವು ಪ್ರಶ್ನಿಸಿದೆ.

ಇವರಿಗೆ ಬೆದರಿಕೆ ಇದೆಯೇ ಅಥವಾ ಇವರೇ ದೇಶಕ್ಕೆ ಬೆದರಿಕೆಯಾಗಿದ್ದಾರೆಯೇ? ಈ ಮಹಿಳೆ ದೇಶದೆಲ್ಲೆಡೆ ಭಾವನೆಗಳನ್ನು ಪ್ರಚೋದಿಸಿದ್ದಾರೆ
ಸುಪ್ರೀಂ ಕೋರ್ಟ್

ಸಿಜೆಐಗೆ ಅರ್ಜಿ

‘ನೂಪುರ್ ಶರ್ಮಾ ವಿರುದ್ಧ ಸುಪ್ರೀಂ ಕೋರ್ಟ್‌ನ ರಜೆಕಾಲದ ಪೀಠವು ಆಡಿರುವ ಮಾತುಗಳನ್ನು ವಾಪಸ್ ಪಡೆಯಲು ಅಗತ್ಯವಾದ ನಿರ್ದೇಶನ ಅಥವಾ ಆದೇಶ ನೀಡಿ’ ಎಂದು ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರಿಗೆ ಸಲ್ಲಿಸಲಾಗಿದೆ.

ಸಾಮಾಜಿಕ ಕಾರ್ಯಕರ್ತ ಎಂದು ಹೇಳಿಕೊಂಡಿರುವ ದೆಹಲಿಯ ಅಜಯ್ ಗೌತಮ್ ಎಂಬುವವರು ಪತ್ರದ ಮೂಲಕ ಈ ಅರ್ಜಿ ಸಲ್ಲಿಸಿದ್ದಾರೆ. ‘ನ್ಯಾಯಬದ್ಧವಾದ ವಿಚಾರಣೆಯ ಅವಕಾಶ ನೂಪುರ್ ಶರ್ಮಾ ಅವರಿಗೂ ದೊರೆಯಬೇಕು’ ಎಂದು ಅವರು ಪ್ರತಿಪಾದಿಸಿದ್ದಾರೆ.

ಬಜೆಟ್‌ನಲ್ಲಿ ಬೊಮ್ಮಾಯಿ ಘೋಷಿಸಿದ್ದ ಯೋಜನೆ

438 ಕಡೆ ‘ನಮ್ಮ ಕ್ಲಿನಿಕ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಒಟ್ಟು 438 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (ನಮ್ಮ ಕ್ಲಿನಿಕ್) ಆರಂಭಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.



ಬಿಬಿಎಂಪಿಯ ಎಲ್ಲಾ ವಾರ್ಡ್‌ಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ‘ನಮ್ಮ ಕ್ಲಿನಿಕ್’ಗಳನ್ನು ಆರಂಭಿಸಲಾಗುವುದು. ಇದಕ್ಕಾಗಿ 15ನೇ ಹಣಕಾಸು ಆಯೋಗದ ಅನುದಾನದಡಿ ₹155 ಕೋಟಿ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಇಲ್ಲಿ ಕಾರ್ಯ ನಿರ್ವಹಿಸಲು 438 ವೈದ್ಯರು ಮತ್ತು ಇಷ್ಟೇ ಸಂಖ್ಯೆಯ ನರ್ಸ್‌ಗಳ ಹುದ್ದೆಗಳ ಸೃಷ್ಟಿಸಿ, ನೇಮಕ ಮಾಡಿಕೊಳ್ಳಲಾಗುವುದು. ‘ಡಿ’ ದರ್ಜೆಯಡಿ 438 ಸಿಬ್ಬಂದಿಯನ್ನು ತಾತ್ಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ‘ನಮ್ಮ ಕ್ಲಿನಿಕ್’ಗೆ ತಲಾ ₹36.45 ಲಕ್ಷ ಮತ್ತು ಇತರ ಕಡೆಗಳಲ್ಲಿ ₹34.50 ಲಕ್ಷ ವೆಚ್ಚ ಮಾಡಲಾಗುವುದು. ಜ್ವರ, ನೆಗಡಿ, ಶೀತ ಸಂಬಂಧಿಸಿದಂತೆ ಸಣ್ಣ- ಪುಟ್ಟ ಆರೋಗ್ಯ ಸಮಸ್ಯೆಗಳಿಗೆ ಇಲ್ಲಿ ಪರೀಕ್ಷೆ ಮಾಡಿಸಿ ಚಿಕಿತ್ಸೆ ಪಡೆಯಬಹುದಾಗಿದೆ. ಮಧುಮೇಹ, ರಕ್ತದೊತ್ತಡದಂತಹ ಸಾಮಾನ್ಯ ಆರೋಗ್ಯ ತಪಾಸಣೆ ಮಾಡಲಾಗುವುದು. ಪ್ರಯೋಗಾಲಯ ಸೇವೆಯೂ ಇಲ್ಲಿ ಇರಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್‌ನಲ್ಲಿ ಈ ಯೋಜನೆಯನ್ನು ಘೋಷಿಸಿದ್ದರು.

ಹಟ್ಟಿ ಚಿನ್ನದ ಗಣಿ: ಹಟ್ಟಿ ಚಿನ್ನದ ಗಣಿ ಕಂಪನಿಯು ಸರ್ಕಾರದಿಂದ ಗುತ್ತಿಗೆ ಪಡೆದ ಭೂಮಿಯ ಉತ್ತರ ಭಾಗದಲ್ಲಿ ಚಿನ್ನದ ನಿಕ್ಷೇಪವಿದ್ದು, ಅಲ್ಲಿ ಗಣಿಗಾರಿಕೆ ನಡೆಸಲು ಭೂ ಕೆಳಮೈ ಮುಕ್ತ ಪ್ರವೇಶವನ್ನು ಕಲ್ಪಿಸುವ ಉದ್ದೇಶಕ್ಕಾಗಿ ₹307.95 ಕೋಟಿ ಅಂದಾಜು ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಎಂದು ಮಾಧುಸ್ವಾಮಿ ಹೇಳಿದರು.

ಚಿತ್ರದುರ್ಗದ ಮುರುಘಾಮಠದ ಆವರಣದಲ್ಲಿ 325 ಅಡಿ ಎತ್ತರದ ಬಸವೇಶ್ವರರ ಕಂಚಿನ ಪುತ್ಥಳಿ ನಿರ್ಮಾಣಕ್ಕೆ ₹20 ಕೋಟಿ ಅನುದಾನ ನೀಡಿದ್ದು, ಹೆಚ್ಚುವರಿಯಾಗಿ ₹10 ಕೋಟಿಗೆ ಘಟನೋತ್ತರ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ ಎಂದರು.

ಒಳ ಪುಟಗಳು



ದತ್ತಪೀಠ ವರದಿಗೆ ಒಪ್ಪಿಗೆ

ಬೆಂಗಳೂರು: ಬಾಬಾಬುಡನ್‌ಗಿರಿ ಗುರು ದತ್ತಾತ್ರೇಯ ಪೀಠದಲ್ಲಿ ಪಾದುಕೆಗಳಿಗೆ ಪೂಜೆ ಸಲ್ಲಿಸುವ ಸಂಬಂಧ ವರದಿ ನೀಡುವಂತೆ ಸರ್ಕಾರ ಹೈಕೋರ್ಟ್‌ಗೆ ಸೂಚನೆ ನೀಡಿತ್ತು. ಅದರ ಪ್ರಕಾರ ಸಂಪುಟ ಉಪಸಮಿತಿ ವರದಿ ಸಿದ್ಧಪಡಿಸಿದ್ದು, ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಮಾಧುಸ್ವಾಮಿ ಹೇಳಿದರು.

ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿರುವುದರಿಂದ, ವರದಿಯ ಮಾಹಿತಿಯನ್ನು ನೀಡಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದರು.


ದತ್ತ ಪಾದುಕೆಗಳಿಗೆ ಹಿಂದೂ ಅರ್ಚಕರಿಂದಲೇ ಪೂಜೆಗೆ ಅವಕಾಶ ನೀಡಬೇಕು ಎಂಬುದು ಹಿಂದೂ ಸಂಘಟನೆಗಳ ವಾದವಾಗಿತ್ತು. ಈ ಸಂಬಂಧ ಸರ್ಕಾರ ಸಚಿವ ಸಂಪುಟ ಉಪಸಮಿತಿ ರಚಿಸಿತ್ತು. ಗಿರಿಯ ಗುಹೆಯೊಳಗಿರುವ ದತ್ತಾತ್ರೇಯ ಪಾದುಕೆಗಳಿಗೆ ಹಿಂದೂ ಅರ್ಚಕರಿಂದಲೇ ಪೂಜೆಗೆ ಅವಕಾಶ ನೀಡಲು ಉಪಸಮಿತಿ ಶಿಫಾರಸು ಮಾಡಿತ್ತು. ಇದು ವರದಿಯಲ್ಲಿದೆ ಎಂದು ಮೂಲಗಳು ತಿಳಿಸಿವೆ.

ವಾಣಿಜ್ಯ ಬಳಕೆ ಸಿಲಿಂಡರ್ ದರ ₹ 187 ಇಳಿಕೆ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವು ಬೆಂಗಳೂರಿನಲ್ಲಿ ಜುಲೈ 1ರಿಂದ ಅನ್ವಯವಾಗುವಂತೆ ₹ 187ರಷ್ಟು ಕಡಿಮೆ ಆಗಿದೆ. 19 ಕೆ.ಜಿ. ತೂಕದ ಸಿಲಿಂಡರ್ ದರ ₹ 2,108.50ಕ್ಕೆ ತಗ್ಗಿದೆ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಬದಲಾವಣೆ ಆಗಿಲ್ಲ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶನಿವಾರದ ಉಷ್ಣಾಂಶ 28° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ ಭಾಗಶಃ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ.

ಹವಾಮಾನ: ಭಾನುವಾರ 28° 20° | ಸೋಮವಾರ 28° 20° | ಮಂಗಳವಾರ 28° 20°

ಆಚರಣೆಗೆ ಅನುದಾನ ಕೊರತೆ • ಪಾಲನೆಯಾಗದ ಸರ್ಕಾರದ ಆದೇಶ • ನಿರ್ಲಕ್ಷ್ಯಕ್ಕೆ ಅಸಮಾಧಾನ

ಕೆಂಪೇಗೌಡರ ಜಯಂತಿ ಮರೆತ ಬಿಬಿಎಂಪಿ

• ಆರ್. ಮಂಜುನಾಥ್

ಬೆಂಗಳೂರು: ನಗರ ನಿರ್ಮಾತೃ ಕೆಂಪೇಗೌಡರ ಜಯಂತಿ ಆಚರಣೆ ವಿಷಯದಲ್ಲಿ ಬಿಬಿಎಂಪಿಯ ನಿರ್ಲಕ್ಷ್ಯಕ್ಕೆ ಅಸಮಾಧಾನ ವ್ಯಕ್ತವಾಗಿದೆ.

'ಮೇಯರ್ ಇದ್ದಾಗ ಅವರ ಅನುದಾನದಿಂದ ಕಾರ್ಯಕ್ರಮವಾಗುತ್ತಿತ್ತು. ಈಗ ಆಚರಣೆಗೆ ಅನುದಾನದ ಕೊರತೆ ಇದೆ' ಎಂದು ಬಿಬಿಎಂಪಿ ಅಧಿಕಾರಿಗಳು ಜಯಂತಿಯಂದು ಬಿಬಿಎಂಪಿ ಕೇಂದ್ರ ಕಚೇರಿ ಮುಂದಿರುವ ಕೆಂಪೇಗೌಡ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕಾರ್ಯಕ್ರಮ ಮುಗಿಸಿದ್ದಾರೆ. ಕೆಂಪೇಗೌಡರ ಜಯಂತಿ ಆಚರಣೆಗೂ ಅನುದಾನದ ಕೊರತೆಯ ಕಾರಣ ಮುಂದಿಟ್ಟಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

ಕೆಂಪೇಗೌಡರ ಜಯಂತಿಯನ್ನು ಮೈಸೂರು ದಸರಾ ರೀತಿಯಲ್ಲಿ ನಾಡ ಹಬ್ಬವಾಗಿ ಆಚರಿಸುವುದಾಗಿ ಸಚಿವರು ಹೇಳಿಕೊಂಡಿದ್ದರು. ಆದರೆ, ಸರ್ಕಾರದಿಂದ ಕೆಂಪೇಗೌಡ ಪ್ರಶಸ್ತಿ ಪ್ರದಾನ ಸಮಾರಂಭ ಹೊರತುಪಡಿಸಿದರೆ ಯಾವುದೇ ಕಾರ್ಯಕ್ರಮ ನಡೆದಿಲ್ಲ. ಕೆಂಪೇಗೌಡರ ಗೋಪುರವನ್ನೇ ಚಿಹ್ನೆಯಾಗಿರಿಸಿಕೊಂಡಿರುವ, ಅವರ ಹೆಸರಿನಲ್ಲೇ ಸಭಾಂಗಣಗಳನ್ನು ಹೊಂದಿರುವ ಬಿಬಿಎಂಪಿ ಒಂದು ಸಮಾರಂಭ ಮಾಡದಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.



'ಮೇಯರ್ ಇದ್ದಾಗ ಯಾವ ಕೆಲಸಗಳನ್ನು ಮಾಡುತ್ತಿದ್ದರೋ ಅದನ್ನು ಆಡಳಿತಾಧಿಕಾರಿ ಮಾಡುತ್ತಿದ್ದಾರೆ. ಕೆಂಪೇಗೌಡರ ಜಯಂತಿಯನ್ನು ಆಚರಿಸಬೇಕಾದದ್ದು ಅವರ ಕರ್ತವ್ಯ. ಅದನ್ನು ಮರೆತು ಸುಮ್ಮನೆ ಕುಳಿತಿರುವುದು ನಿರ್ಲಕ್ಷ್ಯದ ಪರಮಾವಧಿ' ಎಂದು ಲೇಖಕ ತಲಕಾಡು ಚಿಕ್ಕರಂಗೇಗೌಡ ಆಕ್ರೋಶ ವ್ಯಕ್ತಪಡಿಸಿದರು.

'ಕೆಂಪೇಗೌಡರ ಜಯಂತಿಯನ್ನು ಕರಗದ ಸಂದರ್ಭದಲ್ಲಿ ಈ ಹಿಂದೆ ಮಾಡಲಾಗುತ್ತಿತ್ತು. ಆದರೆ, ಇತಿಹಾಸ ತಜ್ಞರ ದಾಖಲೆ ಹಾಗೂ ಸಲಹೆ ಮೇರೆಗೆ 2017ರ ನಂತರ ಸರ್ಕಾರ ಪ್ರತಿ ವರ್ಷ ಜೂನ್ 27ರಂದು ಕೆಂಪೇಗೌಡರ ಜಯಂತಿ ಆಚರಣೆ ಮಾಡಲು ತೀರ್ಮಾನಿಸಿ ಆದೇಶ ಹೊರಡಿಸಿದೆ. ಸರ್ಕಾರದ ಆದೇಶವನ್ನೂ ಬಿಬಿಎಂಪಿ ಪಾಲಿಸದಿರುವುದು ಆಕ್ಷೇಪಾರ್ಹ' ಎಂದರು.

ಪ್ರಜಾವಾಣಿ ವಿಶೇಷ

'ಸ್ಥಳೀಯರಿಗೆ, ಇಲ್ಲಿ ಬಂದು ವಾಸಮಾಡುವವರರಿಗೆ, ವ್ಯಾಪಾರ ಮಾಡುವವರಿಗೆ ಈ ನಗರವನ್ನು ನಿರ್ಮಿಸಿದ ಕೆಂಪೇಗೌಡರ ಜಯಂತಿಯನ್ನು ಬಿಬಿಎಂಪಿ ನಿರ್ಲಕ್ಷಿಸಿದ್ದು ಸರಿಯಲ್ಲ. ನಾಡಪ್ರಭು ಜಯಂತಿಗೆ ಅನುದಾನಕ್ಕಾಗಿ ಕಾಯುವ ಅಧಿಕಾರಿಗಳು, ರಾತ್ರೋರಾತ್ರಿ ರಸ್ತೆ ಮಾಡುವುದಕ್ಕೆ ಏಕೆ ಕಾಯುವುದಿಲ್ಲ' ಎಂಬುದು 'ಗೌಡತಿಯರ ಸೇನೆ' ಅಧ್ಯಕ್ಷೆ ರೇಣುಕಾ ಪ್ರಶ್ನಿಸುತ್ತಾರೆ.



ರಾತ್ರೋರಾತ್ರಿ ಕೋಟ್ಯಂತರ ರೂಪಾಯಿಗಳ ರಸ್ತೆ ಮಾಡಲು ಹಣ ಇರುತ್ತದೆ. ಕೆಂಪೇಗೌಡರ ಜಯಂತಿಗೆ ಹಣ ಇಲ್ಲವೇ? ಈ ನಿರ್ಲಕ್ಷ್ಯ ಸಹಿಸಲು ಸಾಧ್ಯವಿಲ್ಲ

ತಲಕಾಡು ಚಿಕ್ಕರಂಗೇಗೌಡ, ಲೇಖಕ



ಮೊದಲು ಕರಗದ ಸಂದರ್ಭದಲ್ಲಿ ಕೆಂಪೇಗೌಡ ಜಯಂತಿ ಆಚರಿಸಲಾಗುತ್ತಿತ್ತು. ಇದೀಗ ಜೂನ್ 27ರಂದೇ ಜಯಂತಿ ಆಚರಿಸಬೇಕು. ಅದನ್ನು ಅಧಿಕಾರಿಗಳು ಮರೆತಿದ್ದಾರೆ

ಎಸ್.ಕೆ. ನಟರಾಜ್, ಮಾಜಿ ಮೇಯರ್



ಕೆಂಪೇಗೌಡರ ಜಯಂತಿ ಮಾಡದೆ ಅವಮಾನ ಮಾಡಿದ ಬಿಬಿಎಂಪಿ, ಅವರು ಕಟ್ಟಿದ ನಗರವನ್ನು ಏನು ಅಭಿವೃದ್ಧಿ ಮಾಡುತ್ತಾರೆ?

ರೇಣುಕಾ ಭಕ್ತರಹಳ್ಳಿ

ಅಧ್ಯಕ್ಷೆ, ಗೌಡತಿಯರ ಸೇನೆ

ಚರ್ಚಿಸಿ, ಆಯೋಜನೆ: ಆಡಳಿತಾಧಿಕಾರಿ

'ಕೆಂಪೇಗೌಡರಂತಹ ಮಹನೀಯರ ಜಯಂತಿ ಕಾರ್ಯಕ್ರಮವನ್ನು ಮರೆಯುವಂತಿಲ್ಲ. ಕಳೆದ ವರ್ಷದ ರೀತಿಯಲ್ಲಿ ಈ ಬಾರಿಯೂ ಬಿಬಿಎಂಪಿ ಮುಂದಿನ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಆಚರಣೆ ಮಾಡಿದೆ. ಸರ್ಕಾರ ಕಾರ್ಯಕ್ರಮ ಆಯೋಜನೆ ಮಾಡಿದ್ದರಿಂದ ನಾವು ಮಾಡಬೇಕೆ ಬೇಡವೇ ಎಂಬ ಪ್ರಶ್ನೆ ಇತ್ತು. ಎಲ್ಲರ ಅಭಿಪ್ರಾಯದಲ್ಲಿ ಆಚರಣೆ ಮಾಡಬೇಕೆಂದರೆ ಮುಖ್ಯ ಆಯುಕ್ತರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಆಡಳಿತಾಧಿಕಾರಿ ರಾಕೇಶ್ ಸಿಂಗ್ ತಿಳಿಸಿದರು.

ಬೆಂಗಳೂರು ಹಬ್ಬವೂ ಕಡೆಗಣನೆ

'ಕೆಂಪೇಗೌಡರ ಜಯಂತಿಯನ್ನು 2022ರಿಂದ ಮೂರು ದಿನ 'ಬೆಂಗಳೂರು ಹಬ್ಬ'ವಾಗಿ ಆಚರಿಸಲಾಗುವುದು' ಎಂದು ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ನೀಡಿದ್ದ ಭರವಸೆಯೂ ಈಡೇರದಿರುವುದು ಆಕ್ರೋಶಕ್ಕೆ ಕಾರಣವಾಗಿದೆ.

'ಜೂನ್ 26ರಿಂದ 28ರ ವರೆಗೆ ನಗರದಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ಅಲಂಕಾರಗೊಳಿಸಿ, ಅವುಗಳ ಮಾಹಿತಿಯನ್ನು ಪ್ರಚಾರಗೊಳಿಸಲಾಗುವುದು ಎಂದು 2021ರಲ್ಲಿ ನಡೆದ ಕೆಂಪೇಗೌಡ ಜಯಂತಿ ಸಂದರ್ಭದಲ್ಲಿ ಅಂದು ಉಪ ಮುಖ್ಯಮಂತ್ರಿಯಾಗಿದ್ದ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದರು. ಅದೂ ಕಾರ್ಯಗತವಾಗಿಲ್ಲ. ಸಚಿವರಿಗೆ ಅವರು ಹೇಳಿದ್ದನ್ನೇ ನೆನಪಿಸುವ ಕೆಲಸವಾಗಬೇಕೇ?' ಎಂದು ತಲಕಾಡು ಚಿಕ್ಕರಂಗೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಪಠ್ಯಪುಸ್ತಕ ಪೂರೈಸಲು ಆಗ್ರಹ

ಬೆಂಗಳೂರು: 'ಪಠ್ಯಪುಸ್ತಕ ಇಲ್ಲದೆ ಮಕ್ಕಳ ಕಲಿಕೆ ಶೂನ್ಯವಾಗುತ್ತಿದೆ. ತಕ್ಷಣವೇ ಶಾಲೆಗಳಿಗೆ ಪುಸ್ತಕ ಪೂರೈಸಿ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಒಕ್ಕೂಟದ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, 'ಕಳೆದ ಎರಡು ವರ್ಷಗಳಿಂದ ಕೋವಿಡ್ ಕಾರಣಕ್ಕೆ ಮಕ್ಕಳ ಕಲಿಕಾ ಚಟುವಟಿಕೆಗಳು ಕುಂಠಿತಗೊಂಡಿವೆ. ಈ ವರ್ಷ ಶಾಲೆಗಳು ಪ್ರಾರಂಭವಾಗಿ ಎರಡು ತಿಂಗಳು ಸಮೀಪಿಸುತ್ತಿವೆ. ಪಠ್ಯಪುಸ್ತಕ ಸಿಗದ ಕಾರಣ ಪ್ರಾರಂಭದಲ್ಲಿ ಮಳೆಬಿಲ್ಲು ಎಂಬ ಕಲಿಕೆ ವ್ಯಾಪಕ ಟೀಕೆಗೆ ಗುರಿಯಾಯಿತು. ಈ ವಿಷಯದ ಕುರಿತು ಯಾವುದೇ ಕೈಪಿಡಿ ಅಥವಾ ಶಿಕ್ಷಕರಿಗೆ ತರಬೇತಿ ನೀಡಿರಲಿಲ್ಲ' ಎಂದು ತಿಳಿಸಿದ್ದಾರೆ.

'ನಂತರ ವಿದ್ಯಾಪ್ರವೇಶ ಎಂಬ ಇನ್ನೊಂದು ಕಾರ್ಯಕ್ರಮ ಆರಂಭಿಸಲಾಗಿದೆ. ಇದಕ್ಕೂ ತರಬೇತಿ ಅಥವಾ ಪ್ರತ್ಯೇಕ ಪಠ್ಯಪುಸ್ತಕ ಇಲ್ಲದೆ ಮಕ್ಕಳ ಮುಂದೆ ಶಿಕ್ಷಕರು ನಾಟಕವಾಡುವಂತಾಗಿದೆ. ಈ ವಿಷಯದಲ್ಲಿ ಮುಖ್ಯಮಂತ್ರಿ ಅವರು ಮಧ್ಯ ಪ್ರವೇಶಿಸಿ ತಕ್ಷಣವೇ ಖಾಸಗಿ ಶಾಲೆಗಳಿಗೆ ಹಾಗೂ ಸರ್ಕಾರಿ ಶಾಲಾ ಮಕ್ಕಳಿಗೆ ಪಠ್ಯಪುಸ್ತಕಗಳನ್ನು ಒದಗಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಕ್ಯಾನ್‌ಫಿನ್ ಹೋಮ್ಸ್ ಶಾಖೆ ಉದ್ಘಾಟನೆ



ಬೆಂಗಳೂರು: ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ಶುಕ್ರವಾರ ಕೆನರಾ ಬ್ಯಾಂಕ್‌ನ ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್‌ನ 201ನೇ ಶಾಖೆಯು ಲೋಕಾರ್ಪಣೆಗೊಂಡಿತು.

ಜಿಗಣಿಯ ಎಸ್.ಎನ್. ಪ್ರವೀಣ್ ಆರ್ಕೇಡ್, ಸಿಎ2, ಎಪಿಸಿ ಸರ್ಕಲ್‌ನಲ್ಲಿ ಈ ನೂತನ ಶಾಖೆ ಕಾರ್ಯಾರಂಭ ಮಾಡಿದೆ. ಈ ಭಾಗದ ನಿವಾಸಿಗಳಿಗೆ ಅನುಕೂಲ ಕಲ್ಪಿಸಲು ಶಾಖೆ ತೆರೆಯಲಾಗಿದೆ.

ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಎಲ್.ವಿ. ಪ್ರಭಾಕರ್, ಕೆನರಾ ಬ್ಯಾಂಕ್‌ನ ಇಡಿ ದೇಬಾಶಿಷ್ ಮುಖರ್ಜಿ, ಕ್ಯಾನ್‌ಫಿನ್ ಹೋಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಗಿರೀಶ್ ಕೌಸಗಿ ಹಾಜರಿದ್ದರು.

ಸಂಕ್ಷಿಪ್ತ ಸುದ್ದಿ

ಮಾಗಡಿ ತಹಶೀಲ್ದಾರ್ ವರ್ಗಾವಣೆ

ರಾಮನಗರ: ಜಿಲ್ಲೆಯಲ್ಲಿ ಅಧಿಕಾರಿಗಳ ವರ್ಗಾವಣೆ ಪರ್ವ ಮುಂದುವರಿದಿದ್ದು, ಶುಕ್ರವಾರ ತಹಶೀಲ್ದಾರ್ ಸೇರಿದಂತೆ ಮೂವರು ಹಿರಿಯ ಅಧಿಕಾರಿಗಳು ವರ್ಗಾವಣೆ ಆಗಿದ್ದಾರೆ.

ಮಾಗಡಿ ತಹಶೀಲ್ದಾರ್ ಜಿ.ಬಿ. ಶ್ರೀನಿವಾಸಪ್ರಸಾದ್ ಅವರನ್ನು ಸರ್ಕಾರವು ತುಮಕೂರು ಗ್ರೇಡ್–1 ತಹಶೀಲ್ದಾರ್ ಆಗಿ ವರ್ಗಾವಣೆ ಮಾಡಿದೆ. ಈ ತಹಶೀಲ್ದಾರ್ ವರ್ಗಾವಣೆಗೆ ಸಂಬಂಧಿಸಿ ಕೆಲವು ತಿಂಗಳ ಹಿಂದೆ ವಿಧಾನಸೌಧದಲ್ಲಿ ಕಂದಾಯ ಸಚಿವ ಆರ್. ಅಶೋಕ ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ನಡುವೆ ವಾಗ್ವಾದ ನಡೆದಿತ್ತು. ಅದಾದ ಹಲವು ತಿಂಗಳ ಬಳಿಕ ಈ ವರ್ಗಾವಣೆ ಆದೇಶ ಹೊರಬಿದ್ದಿದೆ. ಹೊಸ ತಹಶೀಲ್ದಾರ್ ಅನ್ನು ಸರ್ಕಾರ ಇನ್ನೂ ನೇಮಿಸಿಲ್ಲ.

ಪೊಲೀಸ್ ಇಲಾಖೆಯಲ್ಲೂ ವರ್ಗ: ಮಾಗಡಿ ಉಪ ವಿಭಾಗದ ಡಿವೈಎಸ್‌ಪಿ ಟಿ.ಎ. ಓಂಪ್ರಕಾಶ್ ಅವರನ್ನು ಸರ್ಕಾರ ರಾಜ್ಯ ಗುಪ್ತವಾರ್ತೆ ವಿಭಾಗಕ್ಕೆ ವರ್ಗಾವಣೆ ಮಾಡಿದೆ. ಅವರ ಜಾಗಕ್ಕೆ ಯು.ಡಿ. ಕೃಷ್ಣಕುಮಾರ್ ಬರಲಿದ್ದಾರೆ

ಪೀಠೋಪಕರಣ ಮೇಳ



ಬೆಂಗಳೂರು: ಗೃಹ ಹಾಗೂ ವಾಣಿಜ್ಯ ಬಳಕೆಯ ಪೀಠೋಪಕರಣ ಮೇಳ 'ಬಿಗ್ ಫರ್ನಿಚರ್ ಎಕ್ಸ್‌ಪೊ' ಮೇಖ್ರಿ ವೃತ್ತದ ಬಳಿಯಿರುವ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಜುಲೈ 4ರವರೆಗೆ ನಡೆಯಲಿದೆ.

ಸೋಫಾ, ಡೈನಿಂಗ್, ಬೆಡ್‌ರೂಂ, ಕಚೇರಿ ಪೀಠೋಪಕರಣಗಳು ಸೇರಿದಂತೆ ಮಕ್ಕಳಿಗೆ ಅನುಕೂಲವಾಗುವ ಟೇಬಲ್‌ಗಳೂ ಪ್ರದರ್ಶನದಲ್ಲಿವೆ. ಬೆಳಿಗ್ಗೆ 10ರಿಂದ ರಾತ್ರಿ 8.30ರ ವರೆಗೆ ಮೇಳ ತೆರೆದಿದ್ದು, ಪ್ರವೇಶ ಉಚಿತವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಣ್ಯದರ್ಶಿನಿ ಪ್ರದರ್ಶನ

ಬೆಂಗಳೂರು: ಕನ್ನಡ ನಾಡು ನಾಣ್ಯ ಸಂಘದ ವತಿಯಿಂದ 'ನಾಣ್ಯದರ್ಶಿನಿ–2022' ಪ್ರದರ್ಶನವನ್ನು ಜುಲೈ 8ರಿಂದ 10ರ ವರೆಗೆ ಮೂರು ದಿನ ಕಾವೇರಿ ಭವನದ ಎದುರು ಇರುವ ಶಿಕ್ಷಕ ಸದನದಲ್ಲಿ ಹಮ್ಮಿಕೊಳ್ಳಲಾಗಿದೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ಸಂಘದ ಅಧ್ಯಕ್ಷ ರಾಜೇಂದ್ರ ಮರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಬಿ.ಸಿ. ರಾಯ್ ಅವರ ಜನ್ಮದಿನ: ವಿವಿಧ ಆಸ್ಪತ್ರೆಗಳಲ್ಲಿ ವೈದ್ಯರ ದಿನ ಆಚರಣೆ

ರಾಯ್ ಸ್ಮರಣೆ, ವೈದ್ಯರ ಸೇವೆಗೆ ಗೌರವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಗಲಿರುಳೆನ್ನದೆ ಇನ್ನೊಬ್ಬರ ಆರೋಗ್ಯಕ್ಕಾಗಿ ಶ್ರಮಿಸುತ್ತಿರುವ ವೈದ್ಯರಲ್ಲಿ ಶುಕ್ರವಾರ ಸಾರ್ಥಕ ಭಾವ. ಸಂಕಷ್ಟದ ಸಂದರ್ಭದಲ್ಲಿಯೂ ಎದೆಗುಂದದೆ ಸಲ್ಲಿಸಿದ ಅವರ ಸೇವೆಗೆ, ನಗರದ ಎಲ್ಲೆಡೆ ಅಭಿನಂದನೆಗಳ ಮಹಾಪೂರವೇ ಹರಿಯಿತು.

ಡಾ.ಬಿ.ಸಿ. ರಾಯ್ ಅವರ ಜನ್ಮದಿನದ ಪ್ರಯುಕ್ತ ನಗರದ ವಿವಿಧೆಡೆ ರಾಷ್ಟ್ರೀಯ ವೈದ್ಯರ ದಿನವನ್ನು ಆಚರಿಸಲಾಯಿತು. ಆಸ್ಪತ್ರೆಗಳಲ್ಲಿ ರೋಗಿಗಳು ಹಾಗೂ ಆರೋಗ್ಯ ಸಿಬ್ಬಂದಿ ವೈದ್ಯರಿಗೆ ಶುಭ ಹಾರೈಸಿದರು. ವಿವಿಧ ಸಂಘ–ಸಂಸ್ಥೆಗಳು ಉತ್ತಮ ಸೇವೆ ನೀಡುತ್ತಿರುವ ಸರ್ಕಾರಿ ಆಸ್ಪತ್ರೆಗಳ ವೈದ್ಯರನ್ನು ಗೌರವಿಸಿದವು. ಜನಪ್ರತಿನಿಧಿಗಳು ಆಸ್ಪತ್ರೆಗಳಿಗೆ ತೆರಳಿ, ವೈದ್ಯರಿಗೆ ಶುಭ ಕೋರಿದರು.

ಭಾರತೀಯ ವೈದ್ಯಕೀಯ ಸಂಘ (ಐಎಂಎ), ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ಸೇರಿದಂತೆ ವಿವಿಧ ವೈದ್ಯಕೀಯ ಸಂಘಟನೆಗಳು ವೈದ್ಯರ ದಿನ ಆಚರಿಸಿ, ಡಾ.ಬಿ.ಸಿ. ರಾಯ್ ಅವರಿಗೆ ಗೌರವ ಸಲ್ಲಿಸಿದವು. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರು ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ವೈದ್ಯರ ದಿನ ಆಚರಿಸಿದರು.

ಆರೋಗ್ಯ ಇಲಾಖೆಯು 'ಒಂದು ಸೆಲ್ಫಿ ನಿಮ್ಮ ವೈದ್ಯರೊಂದಿಗೆ' ಎಂಬ ಅಭಿಯಾನವನ್ನು ಸಾಮಾಜಿಕ ಜಾಲತಾಣದಲ್ಲಿ ಹಮ್ಮಿಕೊಂಡಿತ್ತು. ಕೆಲವರು ತಮಗೆ ಚಿಕಿತ್ಸೆ ನೀಡಿದ ವೈದ್ಯರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು, ಧನ್ಯವಾದ ತಿಳಿಸಿದರು.



ಎನ್‌ಯು ಆಸ್ಪತ್ರೆಯ ಸಿಬ್ಬಂದಿ ನೃತ್ಯದ ಮೂಲಕ ವೈದ್ಯರಿಗೆ ಗೌರವ ಸಲ್ಲಿಸಿದರು



ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ವೈದ್ಯರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಳ್ಳುವ ಮೂಲಕ ವೈದ್ಯರ ದಿನ ಆಚರಿಸಿದರು



ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾ.ಕೆ. ಸುಧಾಕರ್ ಅವರು ಕೇಕ್ ಕತ್ತರಿಸಿ ವೈದ್ಯರ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ.ಕೆ. ರವಿ, ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ಹಾಗೂ ವಿಕ್ಟೋರಿಯಾ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ರಮೇಶ್ ಕೃಷ್ಣ ಇದ್ದಾರೆ.

ಮಣಿಪಾಲ್, ಅಪೋಲೊ, ಫೋರ್ಟಿಸ್, ನಾರಾಯಣ ಹೆಲ್ತ್, ಆಸ್ಟರ್, ಯುನೈಟೆಡ್, ಎನ್‌ಯು ಸೇರಿದಂತೆ ನಗರದ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿಯೂ ವೈದ್ಯರ ದಿನ ಆಚರಣೆ ಮಾಡಲಾಯಿತು. ಶುಶ್ರೂಷಕರು ಹಾಗೂ ಆಸ್ಪತ್ರೆಗಳ ಸಿಬ್ಬಂದಿ ತಮ್ಮ ನೆಚ್ಚಿನ ವೈದ್ಯರಿಗೆ ಶುಭ ಹಾರೈಸಿದರು.

ಹಾಜರಾತಿ ವ್ಯವಸ್ಥೆ ಬದಲಾವಣೆ: ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯರ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಚಿವ ಡಾ.ಕೆ. ಸುಧಾಕರ್, 'ವೈದ್ಯರ ಸೇವೆಯನ್ನು ಹಣದಿಂದ ಅಳೆಯಲು ಸಾಧ್ಯವಿಲ್ಲ. ಇಂತಹ ವೃತ್ತಿಯನ್ನು ಸಮರ್ಪಣಾ ಮನೋಭಾವದಿಂದ ಮಾಡಬೇಕು. ವೈದ್ಯರು ವೃತ್ತಿಪರರಾಗಿದ್ದಾಗ ಸಮಾಜ ಅವರನ್ನು ಗುರುತಿಸಿ ಗೌರವಿಸುತ್ತದೆ. ವೈದ್ಯರು ನಿರಂತರ ಅಧ್ಯಯನ ಮಾಡಿದರೆ ಮಾತ್ರ ಹೊಸತನಕ್ಕೆ ಹೊಂದಿಕೊಳ್ಳಲು ಸಾಧ್ಯ. ಸರ್ಕಾರಿ ಆಸ್ಪತ್ರೆಗಳಲ್ಲಿ ಸದ್ಯ ವೈದ್ಯರ ಕೊರತೆ ಇಲ್ಲ. ಆದರೆ ಕೆಲ ವೈದ್ಯರಿಂದ ಹಾಜರಾತಿ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಹಾಗಾಗಿದೆ. ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೆ ಬರಲಿದೆ' ಎಂದರು.

'ಡಾ.ಬಿ.ಸಿ.ರಾಯ್ ಅವರ ಜನ್ಮಶತಮಾನೋತ್ಸವದ ಅಂಗವಾಗಿ ಇಡೀ ದೇಶದಲ್ಲಿ ವೈದ್ಯರ ದಿನಾಚರಣೆ ನಡೆಯುತ್ತಿದೆ. ರಾಜ್ಯ ಸರ್ಕಾರ ಕೂಡ ಅರ್ಥಪೂರ್ಣ ಆಚರಣೆಗೆ ಸಿದ್ಧವಾಗಿದೆ. ಜುಲೈ 7ರಂದು ವಿಧಾನಸೌಧದಲ್ಲಿ ವೈದ್ಯಕೀಯ ಕ್ಷೇತ್ರದ ಸಾಧಕರಿಗೆ ಗೌರವ ಸಮರ್ಪಣೆ ಮಾಡಲಾಗುವುದು' ಎಂದು ಹೇಳಿದರು.

'ಆಸ್ಪತ್ರೆಗಳಿಂದ ಹೆಚ್ಚುವರಿ ಹಣ ವಸೂಲಿ'

'ಕೋವಿಡ್ ಸಮಯದಲ್ಲಿ ಕೆಲ ಖಾಸಗಿ ಆಸ್ಪತ್ರೆಗಳು ಸರ್ಕಾರ ಹಾಗೂ ರೋಗಿಗಳಿಂದ ಹಣ ಪಡೆದಿವೆ. ಅಂತಹ ಆಸ್ಪತ್ರೆಗಳಿಗೆ ನೋಟಿಸ್ ನೀಡಿ, ರೋಗಿಗಳಿಂದ ಪಡೆದ ಹಣವನ್ನು ಅವರ ಕುಟುಂಬಕ್ಕೆ ಮರಳಿಸಲು ಕ್ರಮವಹಿಸಲಾಗುವುದು. ಎಲ್ಲ ವೈದ್ಯರು ಆಡಳಿತದಲ್ಲಿ ಪರಿಣತಿ ಪಡೆಯಬೇಕು. ಅದಕ್ಕಾಗಿ 'ಡಾಕ್ಟರ್ಸ್ ಹೆಲ್ತ್ ಕೇರ್ ಮ್ಯಾನೇಜ್‌ಮೆಂಟ್' ಆರಂಭಿಸಿದ್ದೇವೆ' ಎಂದು ಡಾ.ಕೆ. ಸುಧಾಕರ್ ಹೇಳಿದರು.

'ಕೋವಿಡ್ ಬಳಿಕ 10 ವರ್ಷದಲ್ಲಿ ಆಗುವಂತಹ ಬೆಳವಣಿಗೆ ಒಂದು ವರ್ಷದಲ್ಲಿ ಆಗಿದೆ. 2020ಕ್ಕೆ ಹೋಲಿಸಿದರೆ ಈಗ ಹೆಚ್ಚುವರಿಯಾಗಿ 4 ಸಾವಿರ ವೈದ್ಯರು ಕೆಲಸ ಮಾಡುತ್ತಿದ್ದಾರೆ. ವೈದ್ಯರ ಮೇಲೆ ಯಾರೇ ಹಲ್ಲೆ ಮಾಡಿದರೂ ಅದು ಅಕ್ಷಮ್ಯ ಅಪರಾಧ. ಹಲ್ಲೆ ಮಾಡಿದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'ವೈದ್ಯರು ಟ್ರೇಡ್ ಲೈಸೆನ್ಸ್ ಕಾಯಕವನ್ನಷ್ಟೆ ಮಾಡದಿರಲಿ'

ಬೆಂಗಳೂರು: ಬಿಬಿಎಂಪಿಯಲ್ಲಿರುವ ವೈದ್ಯರು ಟ್ರೇಡ್ ಲೈಸೆನ್ಸ್ ನೀಡುವುದನ್ನೇ ಕಾಯಕ ಮಾಡಿಕೊಳ್ಳದೆ, ವೈದ್ಯಕೀಯ ಸೇವೆಯನ್ನು ಪೂರ್ಣಪ್ರಮಾಣದ ಕರ್ತವ್ಯವಾಗಿ ನಿರ್ವಹಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಮಹಾಲಕ್ಷ್ಮೀ ಲೇಔಟ್ ಡಾ. ರಾಜ್‌ಕುಮಾರ್ ಸಭಾಂಗಣದಲ್ಲಿ ವೈದ್ಯರ ದಿನಾಚರಣೆ ಅಂಗವಾಗಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೋವಿಡ್ ಕಾಲಕ್ಕೂ ಮುನ್ನ ಬಿಬಿಎಂಪಿ ವೈದ್ಯರು ಟ್ರೇಡ್ ಲೈಸೆನ್ಸ್ ಮಾತ್ರ ನೀಡುತ್ತಿದ್ದರು. ಕೋವಿಡ್ ಸಮಯದಲ್ಲಿ ವೈದ್ಯಕೀಯ ಸೇವೆಗಳನ್ನು ನೀಡಬೇಕೆಂಬ ಅರಿವು ಬಂದಿದೆ. ಆರೋಗ್ಯ ಅಧಿಕಾರಿಗಳು (ಎಂಒಎಚ್, ಎಚ್‌ಒ) ವೈದ್ಯಕೀಯ ಸೇವೆಗಳನ್ನು ನೀಡುವ ಬಗ್ಗೆ ಹೆಚ್ಚು ಕಾಳಜಿ ವಹಿಸಿ, ನಾಗರಿಕರನ್ನು ಕಾಪಾಡಬೇಕು ಎಂದು ಹೇಳಿದರು.

ವೈದ್ಯಕೀಯ ಸೇವೆ ಜಗತ್ತಿನ ಎಲ್ಲೆಡೆ ತುಟ್ಟಿಯಾಗಿದೆ. ಆದ್ದರಿಂದ ಸರ್ಕಾರದ ಮಧ್ಯ ಪ್ರವೇಶ ಅತ್ಯಗತ್ಯ. ಸಹಾಯಧನ, ನೀತಿಗಳ ಮೂಲಕ ಎಲ್ಲರಿಗೂ ಚಿಕಿತ್ಸೆ ದೊರೆಯುವಂತೆ ಮಾಡಬೇಕು. ಯಾವುದೇ ರೀತಿಯಲ್ಲಿ ಜೀವಹಾನಿಯಾಗದಂತೆ ನೋಡಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಬಿಬಿಎಂಪಿ ವ್ಯಾಪ್ತಿಯ ಎಲ್ಲಾ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ₹125 ಕೋಟಿ ಒದಗಿಸಲಾಗಿದೆ. ವೈದ್ಯರು ಗುಣಮಟ್ಟದ ಚಿಕಿತ್ಸೆ ನೀಡಬೇಕು ಎಂದರು.

ಮಣಿಪಾಲ್ ಆಸ್ಪತ್ರೆಯ ಡಾ. ಕಾರ್ತಿಕ್ ರಾವ್, ಡಾ. ಅನೂಪ್ ಅಮರ್‌ನಾಥ್, ಮೈಸೂರಿನ ಡಾ. ಸತ್ಯನಾರಾಯಣ್ ಅವರನ್ನು ಸನ್ಮಾನಿಸಲಾಯಿತು. ಕೋವಿಡ್ ಸಮಯದಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸಿದ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗೆ ಸನ್ಮಾನಿಸಿ ಸ್ಮರಣಿಕೆ ಹಾಗೂ ಪ್ರಮಾಣಪತ್ರ ವಿತರಿಸಿ ಗೌರವಿಸಲಾಯಿತು.

ಕಂದಾಯ ಆಯುಕ್ತ ಡಾ. ದೀಪಕ್, ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್, ಟಿಎಸಿ ಸಲಹಾ ಸಮಿತಿ ಅಧ್ಯಕ್ಷ ಡಾ. ಸುದರ್ಶನ್, ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ಇದ್ದರು.



ವೈದ್ಯರ ದಿನಾಚರಣೆ ಅಂಗವಾಗಿ ಬಿಬಿಎಂಪಿ ವತಿಯಿಂದ ಮಣಿಪಾಲ್ ಆಸ್ಪತ್ರೆಯ ಡಾ. ಕಾರ್ತಿಕ್ ರಾವ್, ಡಾ. ಅನೂಪ್ ಅಮರ್‌ನಾಥ್, ಮೈಸೂರಿನ ಡಾ. ಸತ್ಯನಾರಾಯಣ್ ಅವರನ್ನು ಸನ್ಮಾನಿಸಲಾಯಿತು. ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್, ಕಂದಾಯ ಆಯುಕ್ತ ಡಾ. ದೀಪಕ್, ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಇದ್ದರು



ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಶೃಂಗೇರಿ ಕಿರಿಯ ಶ್ರೀಗಳಾದ ವಿಧುಶೇಖರ ಭಾರತಿ ಸ್ವಾಮೀಜಿಗೆ ಗುರುವಾರ ಏರ್ಪಡಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಪೂಜ್ಯರಿಗೆ ನಮಿಸಿ, ಆಶೀರ್ವಾದ ಪಡೆದರು.

ಮಲ್ಲೇಶ್ವರದಲ್ಲಿ ಶೃಂಗೇರಿ ಕಿರಿಯ ಶ್ರೀಗಳಿಗೆ ಗುರುವಂದನೆ

ಬೆಂಗಳೂರು: ಎಂಟು ವರ್ಷಗಳ ನಂತರ ನಗರದಲ್ಲಿ ವಾಸ್ತವ್ಯ ಹೂಡಿರುವ ಶೃಂಗೇರಿಯ ದಕ್ಷಿಣಾಮ್ನಾಯ ಶಂಕರಾಚಾರ್ಯ ಪೀಠದ ಕಿರಿಯ ಸ್ವಾಮೀಜಿ ವಿಧುಶೇಖರ ಭಾರತಿ ಅವರಿಗೆ ಮಲ್ಲೇಶ್ವರ ಕ್ಷೇತ್ರದ ವ್ಯಾಪ್ತಿಯಲ್ಲಿ ಗುರುವಾರ ಗುರುವಂದನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಚೌಡಯ್ಯ ಸ್ಮಾರಕ ಭವನ, 11ನೇ ಮುಖ್ಯರಸ್ತೆಯ ಶ್ರೀ ಶಂಕರಾಚಾರ್ಯ ಉದ್ಯಾನ ಮತ್ತು 6ನೇ ಮುಖ್ಯರಸ್ತೆಯ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಸ್ಥಳೀಯ ಶಾಸಕ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದಲ್ಲಿ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡಲಾಗಿತ್ತು. ಇದಕ್ಕೂ ಮುನ್ನ ಶ್ರೀಗಳು, ಸಚಿವರ ಮನೆಯಲ್ಲಿ ಪೂಜಾ ಕೈಂಕರ್ಯ ನೆರವೇರಿಸಿ, ಆಶೀರ್ವಚನ ನೀಡಿದರು.

ಗುರುವಂದನೆ ಸ್ವೀಕರಿಸಿ ಮಾತನಾಡಿದ ಶ್ರೀ ವಿಧುಶೇಖರ ಭಾರತಿ ಸ್ವಾಮೀಜಿ, 'ಸೃಷ್ಟಿಯಲ್ಲಿ ಧಾರ್ಮಿಕ ಅನುಸಂಧಾನದ ಮತ್ತು ಧರ್ಮರಕ್ಷಣೆಯ ಪ್ರಜ್ಞೆ ಇರುವುದು ಮನುಷ್ಯನಿಗೆ ಮಾತ್ರ. ಹೀಗಾಗಿಯೇ ನಮ್ಮ ಸಂಸ್ಕೃತಿ ಇನ್ನೂ ಉಳಿದುಕೊಂಡು ಬಂದಿದೆ' ಎಂದರು.

11ನೇ ಮುಖ್ಯರಸ್ತೆಯ ಶ್ರೀ ಶಂಕರಾಚಾರ್ಯ ಉದ್ಯಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಗಳು ನವೀಕೃತ ಭಜನಾ ಮಂದಿರ ಮತ್ತು ದಶಮಾನೋತ್ಸವ ಭವನಗಳನ್ನು ಲೋಕಾರ್ಪಣೆ ಮಾಡಿದರು. ಶೃಂಗೇರಿ ಮಹಾಸಂಸ್ಥಾನದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರೀಶಂಕರ್ ಸೇರಿ ಗಣ್ಯರು ಉಪಸ್ಥಿತರಿದ್ದರು.

ಲಂಚ ಪ್ರಕರಣ: ಜಿಲ್ಲಾಧಿಕಾರಿ ಮಂಜುನಾಥ್ ವರ್ಗಾವಣೆ

ಬೆಂಗಳೂರು: ಜಮೀನು ಮಾಲೀಕತ್ವದ ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅರ್ಜಿದಾರರ ಪರ ಆದೇಶ ನೀಡಲು ಲಂಚ ಪಡೆದಿರುವ ಆರೋಪ ಎದುರಿಸುತ್ತಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರನ್ನು ವರ್ಗಾವಣೆಗೊಳಿಸಿ ಶುಕ್ರವಾರ ಆದೇಶ ಹೊರಡಿಸಲಾಗಿದೆ.



ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ ಅವರಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯ ಹೆಚ್ಚುವರಿ ಜವಾಬ್ದಾರಿ ನೀಡಲಾಗಿದೆ. ಮಂಜುನಾಥ್ ಅವರನ್ನು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಆನೇಕಲ್ ತಾಲ್ಲೂಕಿನ ಕೂಡ್ಲು ಗ್ರಾಮದ 38 ಗುಂಟೆ ಜಮೀನು ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯದಲ್ಲಿ ಅನುಕೂಲಕರ ಆದೇಶ ನೀಡಲು ಬೇಗೂರು ನಿವಾಸಿ ಅಜಂ ಪಾಷಾ ಎಂಬುವವರಿಂದ ₹ 5 ಲಕ್ಷ ಲಂಚ ಪಡೆಯುತ್ತಿದ್ದಾಗ ಜಿಲ್ಲಾಧಿಕಾರಿ ಕಚೇರಿ ವ್ಯವಸ್ಥಾಪಕ ಮಹೇಶ್ ಮತ್ತು ನ್ಯಾಯಾಲಯ ವಿಭಾಗದ ಸಹಾಯಕ ಚೇತನ್ ಕುಮಾರ್ ಅಲಿಯಾಸ್ ಚಂದ್ರು ಎಂಬುವವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಮೇ 21ರಂದು ಬಂಧಿಸಿತ್ತು.

'ನನ್ನ ಜಮೀನಿಗೆ ಸಂಬಂಧಿಸಿದ ಪ್ರಕರಣದ ಆದೇಶವನ್ನು ಪ್ರಕಟಿಸುವಂತೆ ಮನವಿ ಮಾಡಲು ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿದ್ದೆ. ಅವರ ಸೂಚನೆಯಂತೆ ಮಹೇಶ್ ಅವರನ್ನು ಭೇಟಿ ಮಾಡಿದೆ. ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ಅಜಂ ಪಾಷಾ ದೂರಿನಲ್ಲಿ ಉಲ್ಲೇಖಿಸಿದ್ದರು. ಜಿಲ್ಲಾಧಿಕಾರಿ ಹಾಗೂ ಮಹೇಶ್ ಜತೆಗಿನ ಸಂಭಾಷಣೆಯ ವಿವರವನ್ನು ಮೊಬೈಲ್‌ನಲ್ಲಿ ರೆಕಾರ್ಡಿಂಗ್ ಮಾಡಿಕೊಂಡಿದ್ದ ದೂರುದಾರರು ಆ ವಿವರಗಳನ್ನೂ ದೂರಿನೊಂದಿಗೆ ತನಿಖಾ ಸಂಸ್ಥೆಗೆ ನೀಡಿದ್ದರು.

ಲಂಚದ ಹಣವನ್ನು ಮಹೇಶ್, ಚೇತನ್ ಕುಮಾರ್ ಪಡೆದಿದ್ದರೂ, ದೂರುದಾರರಿಗೆ ಸಂಬಂಧಿಸಿದ ಕಡತ ನೇರವಾಗಿ ಜಿಲ್ಲಾಧಿಕಾರಿ ಬಳಿ ಇರುವುದು ತನಿಖೆ ವೇಳೆ ಪತ್ತೆಯಾಗಿತ್ತು. ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ 3 ತಿಂಗಳಾದರೂ ಆದೇಶ ಪ್ರಕಟಿಸದೇ ಇರುವುದು ಕಂಡುಬಂದಿತ್ತು.

ಜೂನ್ 22ರಂದು ಮಂಜುನಾಥ್ ವಿಚಾರಣೆ ನಡೆಸಿದ್ದ ಎಸಿಬಿ ಅಧಿಕಾರಿಗಳು, ಜಿಲ್ಲಾಧಿಕಾರಿಯನ್ನು ಮೂರನೇ ಆರೋಪಿಯನ್ನಾಗಿ ಪರಿಗಣಿಸುವಂತೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು. ಗುರುವಾರ (ಜೂನ್ 30) ಬೆಳಿಗ್ಗೆಯಿಂದ ರಾತ್ರಿಯವರೆಗೂ ಮಂಜುನಾಥ್ ವಿಚಾರಣೆ ನಡೆಸಿದ್ದ ತನಿಖಾ ತಂಡ, ಹೇಳಿಕೆ ದಾಖಲಿಸಿಕೊಂಡಿತ್ತು. ಜಿಲ್ಲಾಧಿಕಾರಿ ಕಚೇರಿ ಸಿಬ್ಬಂದಿಯ ಪ್ರತ್ಯೇಕವಾಗಿ ವಿಚಾರಣೆ ನಡೆಸಲಾಗಿತ್ತು.

ನಗರದಲ್ಲಿ ಇಂದು

ಘಟಿಕೋತ್ಸವ: ಅತಿಥಿಗಳು: ಪ್ರಶಾಂತ್ ದೊರೆಸ್ವಾಮಿ, ದಿವ್ಯಾ ಸಿಂಗ್, ಗಾಳಿಸ್ವಾಮಿ, ತಿಂತಿಶಾ ಎಚ್. ಸಾಗರ್, ರೋಹನ್ ಪ್ರೇಮ್ ಸಾಗರ್, ನತಾಶಾ ಎಚ್. ಸಾಗರ್, ಸಿ.ಪಿ.ಎಸ್. ಪ್ರಕಾಶ್, ಆಯೋಜನೆ ಮತ್ತು ಸ್ಥಳ: ದಯಾನಂದ್ ಸಾಗರ ಎಂಜಿನಿಯರಿಂಗ್ ಕಾಲೇಜು, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 9.30

ಲೈಂಗಿಕ ಶೋಷಣೆ ವೇಳೆ ರಕ್ಷಣಾತ್ಮಕ ಪ್ರತಿಕ್ರಿಯೆ ಜಾಗೃತಿ ಕಾರ್ಯಕ್ರಮ: ಉದ್ಘಾಟನೆ: ಪ್ರೊ.ಸಿಂಥಿಯಾ ಮಿನೇಜಸ್, ಪ್ರತಾಪ ಲಿಂಗಯ್ಯ, ಅತಿಥಿಗಳು: ಎಂ.ಕೊಟ್ರೇಶ್, ಕೆ.ವಿ. ಖಾದ್ರಿ ನರಸಿಂಹಯ್ಯ, ಡಾ.ಸಂಗೀತಾ ಸಕ್ಸೇನಾ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸ್ಥಳ: ವೆಂಕಟಗಿರಿ ಸಭಾಂಗಣ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10

100ನೇ ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಜಿ.ಟಿ. ದೇವೇಗೌಡ, ಎಂ.ವಿ. ವೆಂಕಟೇಶ್, ಯಶವಂತ ಡೋಂಗ್ರೆ, ಆಯೋಜನೆ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಸ್ಥಳ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಆನಂದರಾವ್ ಸರ್ಕಲ್ ಹತ್ತಿರ, ಬೆಳಿಗ್ಗೆ 11

ಭಕ್ತಿ ಗೀತೆಗಳ ಗಾಯನ: ಗಾಯನ: ಅನ್ವಿತಾ ಸಾವಿತ್ರಿ, ಆಯೋಜನೆ: ವಾಸವಿ ದೇವಸ್ಥಾನ ಸ್ಥಳ: ವಾಸವಿ ದೇವಸ್ಥಾನದ ಆವರಣ, 7ನೇ ಮುಖ್ಯರಸ್ತೆ, ಮಹಾಲಕ್ಷ್ಮಿ ಬಡಾವಣೆ, ಸಂಜೆ 7



ಅನ್ವಿತಾ ಸಾವಿತ್ರಿ

ವಿದೇಶಿ ವ್ಯಂಗ್ಯಚಿತ್ರಗಳ ಪ್ರದರ್ಶನ: **ಅತಿಥಿಗಳು:** ಪ್ರೊ. ತರುಣ ಸೌರದೀಪ, ಆಯಿಷಾ ಅಬ್ರಹಾಂ, ಗುರುದಾಸ್ ಶೆಣೈ, ಅಮರನಾಥ ಕಾಮತ್, ಮಾಯಾ ಕಾಮತ್, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ನಂ.1, ಮಿಡ್‌ಫೋರ್ಡ್ ಹೌಸ್, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಬೆಳಿಗ್ಗೆ 11

'ಬಸವ ಪಥ' ಕನ್ನಡ ಮಾಸ ಪತ್ರಿಕೆ 500ನೇ ಸಂಚಿಕೆ ಲೋಕಾರ್ಪಣೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಲೋಕಾರ್ಪಣೆ: ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ: ಟಿ.ಜಿ. ಪ್ರಭಾಶಂಕರ ಪ್ರೇಮಿ, ಆಯೋಜನೆ: ಬಸವ ಸಮಿತಿ, ಸ್ಥಳ: ಅರಿವಿನಮನೆ, ಬಸವ ಸಮಿತಿ, ಬಸವ ಭವನ, ಸಂಜೆ 5.30

ಶಾರದಾಂಬಾ ಸಭಾಂಗಣ ಉದ್ಘಾಟನೆ, ಗುರುವಂದನಾ ಕಾರ್ಯಕ್ರಮ: ವಿಧುಶೇಖರ ಭಾರತೀ ಸ್ವಾಮೀಜಿ, ಉಪಸ್ಥಿತಿ: ವಿ.ಆರ್. ಗೌರಿಶಂಕರ್, ಎಸ್.ಸುರೇಶ್ ಕುಮಾರ್, ಅಧ್ಯಕ್ಷತೆ: ಆರ್.ಲಕ್ಷ್ಮೀಕಾಂತ್, ಆಯೋಜನೆ: ಶಂಕರ ಸೇವಾ ಸಮಿತಿ, ಸ್ಥಳ: ಶಂಕರ ಸೇವಾ ಸಮಿತಿ, 4ನೇ ವಿಭಾಗ, ಡಾ.ರಾಜಕುಮಾರ ರಸ್ತೆ, ರಾಜಾಜಿನಗರ, ಸಂಜೆ 5.30

7 ಸಿ.ಡಿ.ಗಳು ಮತ್ತು ಪುಸ್ತಕಗಳ ಲೋಕಾರ್ಪಣೆ ಹಾಗೂ ಅಭಿನಂದನಾ ಕಾರ್ಯಕ್ರಮ: ಉದ್ಘಾಟನೆ: ಗರ್ತಿಕೆರೆ ರಾಘಣ್ಣ, ಅಧ್ಯಕ್ಷತೆ: ವಿ.ಲಕ್ಷ್ಮೀನಾರಾಯಣ್, ಅತಿಥಿಗಳು: ಎಲ್.ವಿ. ರವಿಸುಬ್ರಮಣ್ಯ, ಬಿ.ಎಸ್. ಸತ್ಯನಾರಾಯಣ, ಲೋಕಾರ್ಪಣೆ: ಸುಬ್ರಾಯ ಚೊಕ್ಕಾಡಿ, ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್, ಎಚ್.ಡುಂಡಿರಾಜ್, ಆಯೋಜನೆ: ಉಪಾಸನಾ ಟ್ರಸ್ಟ್, ನಿರ್ಮಾಣ್ ಸಮೂಹ ಸಂಸ್ಥೆಗಳು, ಸ್ಥಳ: ಪತ್ತಿ ಸಭಾಂಗಣ, ನರಸಿಂಹರಾಜ ಕಾಲೊನಿ, ಸಂಜೆ 6

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ರಿಚಾ ದಾಸ್, ಶೋಭಿತ್ ರಮೇಶ್, ಸುವೀನ್ ಪ್ರಸಾದ್, ನಿರ್ದೇಶನ: ಪಾರ್ಶ್ವನಾಥ ಉಪಾಧ್ಯಾಯ, ಶೃತಿ ಗೋಪಾಲ್, ಆದಿತ್ಯ ಪಿ.ವಿ., ಗಾಯನ: ರೋಹಿತ್ ಭಟ್ಟ ಉಪ್ಪುರ, ಮೃದಂಗ: ಹರ್ಷ ಸಾಮಗಾ, ಪಿಟೀಲು: ಜಯರಾಮ್ ಕಿಕ್ಕೇರಿ, ಆಯೋಜನೆ: ಉಪಾಧ್ಯಾಯ ನೃತ್ಯ ಶಾಲೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10



ರಿಚಾ ದಾಸ್, ಶೋಭಿತ್ ರಮೇಶ್ ಮತ್ತು ಸುವೀನ್ ಪ್ರಸಾದ್



ವರ್ಣಂ ನಾರಾಯಣಸ್ವಾಮಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ: ಅತಿಥಿಗಳು: ಪ್ರವೀಣ ಸೂದ್, ಸಿ.ಎಸ್. ಕೃಷ್ಣ ಸೆಟ್ಟಿ, ಪಿ.ಎಸ್. ಸಂಧು, ಸುರೇಶ ಹೆಬ್ಳೀಕರ್, ಎಸ್.ರಾಜೇಂದ್ರ ಪ್ರಸಾದ, ಎ.ಎಂ.ಪ್ರಕಾಶ, ಕೆ.ವಿ. ಶರತ್ ಚಂದ್ರ, ಎಂ.ಚಂದ್ರಶೇಖರ್, ಬಿ.ರಮೇಶ್, ಕೆ.ವಂಶಿ ಕೃಷ್ಣ, ಸುಮನಾ ಅನೂಪಕುಮಾರ್, ಎಂ.ಅಶ್ವಿನಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಬೆಳಿಗ್ಗೆ 11

15 ಮನೆಗಳಲ್ಲಿ ಕಳವು ಮೈಸೂರಿನಲ್ಲಿ ಆರೋಪಿ ಬಂಧನ

ಬೆಂಗಳೂರು: ನಗರದ 15 ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಮೈಸೂರಿನಲ್ಲಿ ಬಂಧಿಸಿದ್ದಾರೆ.

'ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿ, ತಲೆಮರೆಸಿಕೊಂಡು ಓಡಾಡುತ್ತಿದ್ದ. ಇತ್ತೀಚೆಗೆ ಆತನ ವಿಳಾಸ ಪತ್ತೆ ಮಾಡಿ ಬಂಧಿಸಲಾಗಿದೆ. ₹ 65 ಲಕ್ಷ ಮೌಲ್ಯದ 1 ಕೆ.ಜಿ 300 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಹಲಸೂರು ಗೇಟ್, ಸಿಟಿ ಮಾರ್ಕೆಟ್, ಕಮರ್ಷಿಯಲ್ ಸ್ಟ್ರೀಟ್, ಚಾಮರಾಜಪೇಟೆ, ಕಾಟನ್‌ಪೇಟೆ, ಸಿದ್ದಾಪುರ, ಅನ್ನಪೂರ್ಣೇಶ್ವರಿನಗರ, ಹನುಮಂತನಗರ ಠಾಣೆ ವ್ಯಾಪ್ತಿಯ ಮನೆಗಳಲ್ಲಿ ಆರೋಪಿ ಕಳ್ಳತನ ಮಾಡಿದ್ದ. ಹೋಟೆಲ್‌ನಲ್ಲಿ ವಾಸವಿರುತ್ತಿದ್ದ ಆರೋಪಿ, ಪೊಲೀಸರಿಗೆ ಸುಳಿವು ಸಿಗಬಾರದೆಂದು ಆಗಾಗ ಹೋಟೆಲ್ ಬದಲಾಯಿಸುತ್ತಿದ್ದ. ತಮಿಳುನಾಡು, ಗೋವಾ, ಆಂಧ್ರಪ್ರದೇಶದಲ್ಲೂ ಕೆಲದಿನ ಸುತ್ತಾಡಿದ್ದ. ಇತ್ತೀಚೆಗಷ್ಟೆ ಮೈಸೂರಿಗೆ ಬಂದಿದ್ದ' ಎಂದೂ ತಿಳಿಸಿದರು.

ಭೋವಿ ನಿಗಮದ ನಾಗರಾಜಪ್ಪ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಫಲಾನುಭವಿಗಳ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಭೋವಿ ಅಭಿವೃದ್ಧಿ ನಿಗಮದ ₹ 75 ಲಕ್ಷ ಅನುದಾನವನ್ನು ಲಪಟಾಯಿಸಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನಿಗಮದ ಪ್ರಧಾನ ವ್ಯವಸ್ಥಾಪಕ (ಜಿ.ಎಂ) ಡಾ.ಬಿ.ಕೆ. ನಾಗರಾಜಪ್ಪ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶುಕ್ರವಾರ ಬಂಧಿಸಿದೆ.

ನಿಗಮದ ಅನುದಾನ ದುರ್ಬಳಕೆ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದು ಸೇರಿದಂತೆ ವಿವಿಧ ಆರೋಪಗಳಡಿ ನಾಗರಾಜಪ್ಪ ವಿರುದ್ಧ ಎಸಿಬಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. ಇತರ ಕ್ರಿಮಿನಲ್ ಪ್ರಕರಣಗಳೂ ಈ ಅಧಿಕಾರಿ ವಿರುದ್ಧ ದಾಖಲಾಗಿದ್ದವು. ಹಲವು ದಿನಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪತ್ತೆಮಾಡಿ ಬಂಧಿಸಲಾಗಿದೆ.

ಆರೋಪಿಯು ಫಲಾನುಭವಿಗಳ ಹೆಸರಿನ ಖಾತೆಗೆ ನಿಗಮದ ಹಣವನ್ನು ವರ್ಗಾವಣೆ ಮಾಡಿ, ಅಲ್ಲಿಂದ ತನ್ನ ನಿಕಟವರ್ತಿಗಳ ಖಾತೆಗೆ ಹಣ ವರ್ಗಾವಣೆ ಮಾಡಿ ವಂಚಿಸಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. 15 ಫಲಾನುಭವಿಗಳ ಹೆಸರಿನಲ್ಲಿ ₹ 75 ಲಕ್ಷ ವಂಚಿಸಿರುವುದಕ್ಕೆ ತನಿಖಾ ತಂಡ ದಾಖಲೆಗಳನ್ನು ಸಂಗ್ರಹಿಸಿದೆ ಎಂದು ಎಸಿಬಿ ತಿಳಿಸಿದೆ.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಗೃಹಿಣಿ • ಕೊಠಡಿಯಲ್ಲಿ ಮರಣ ಪತ್ರ ಪತ್ತೆ

ಮಗಳ ಕೊಂದು ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರೂವರೆ ವರ್ಷದ ಮಗಳನ್ನು ಕೊಂದು ತಾಯಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ರಾಜರಾಜೇಶ್ವರಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಚನ್ನಸಂದ್ರ ಬಳಿಯ 'ಮಂತ್ರಿ ಆಫ್‌ಲೈನ್' ಅಪಾರ್ಟ್‌ಮೆಂಟ್ ಸಮುಚ್ಚಯದ ಫ್ಲ್ಯಾಟ್‌ನಲ್ಲಿ ವಾಸವಿದ್ದ ದೀಪಾ (31) ಮಗಳು ರಿಯಾಳನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತಿ ಹಾಗೂ ಸಂಬಂಧಿಕರ ಹೇಳಿಕೆ ಪಡೆದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಆದರ್ಶ್ ಎಂಬುವರನ್ನು ದೀಪಾ ಮದುವೆಯಾಗಿದ್ದರು. ದಂಪತಿಯು ಮಗಳ ಜೊತೆ ಫ್ಲ್ಯಾಟ್‌ನಲ್ಲಿ ವಾಸವಿದ್ದರು. ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ದೀಪಾ, ಹಲವೆಡೆ ಚಿಕಿತ್ಸೆ ಪಡೆದಿದ್ದರು. ಆದರೆ, ಗುಣಮುಖವಾಗಿರಲಿಲ್ಲ. ಇದರಿಂದಾಗಿ ಮಾನಸಿಕವಾಗಿ ನೊಂದಿದ್ದರೆಂದು ಗೊತ್ತಾಗಿದೆ'.



ದೀಪಾ

'ಗುರುವಾರ ಫ್ಲ್ಯಾಟ್‌ನ ಕೊಠಡಿಯಲ್ಲಿದ್ದ ದೀಪಾ, ಮಗಳು ರಿಯಾಳ ಕುತ್ತಿಗೆಗೆ ವೇಲ್‌ನಿಂದ ಸುತ್ತಿ ಫ್ಯಾನ್‌ಗೆ ನೇಣು ಬಿಗಿದು ಕೊಂದಿದ್ದರು. ನಂತರ, ತಾವೂ ಅದೇ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಮರಣ ಪತ್ರ ಪತ್ತೆ: 'ದೀಪಾ ಅವರು ಬರೆದಿದ್ದಾರೆ ಎನ್ನಲಾದ ಮರಣಪತ್ರ ಕೊಠಡಿಯಲ್ಲಿ ಸಿಕ್ಕಿದೆ. ಅದನ್ನು ವಶಕ್ಕೆ ಪಡೆಯಲಾಗಿದ್ದು, ಕೈಬರಹದ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು' ಎಂದು ಪೊಲೀಸರು ಹೇಳಿದರು.

'ನನ್ನ ಸಾವಿಗೆ ಯಾರೂ ಹೊಣೆಯಲ್ಲ. ಜೀವನದಲ್ಲಿ ಜುಗುಪ್ಸೆಯಾಗಿದೆ. ಅಮ್ಮ ನನ್ನನ್ನು ಕ್ಷಮಿಸಿ' ಎಂದು ಮರಣ ಪತ್ರದಲ್ಲಿ ಬರೆಯಲಾಗಿದೆ' ಎಂದೂ ಮಾಹಿತಿ ನೀಡಿದರು.

₹ 44 ಲಕ್ಷ ದರೋಡೆ: ಅಪರಾಧಿಗಳಿಗೆ ಜೈಲು

ಬೆಂಗಳೂರು: ಎಟಿಎಂಗೆ ತುಂಬಬೇಕಿದ್ದ ₹ 44 ಲಕ್ಷ ನಗದು ದರೋಡೆ ಮಾಡಿದ್ದ ಐವರು ಅಪರಾಧಿಗಳಿಗೆ 7 ವರ್ಷಗಳ ಜೈಲು ಶಿಕ್ಷೆ ಹಾಗೂ ತಲಾ ₹20 ಸಾವಿರ ದಂಡ ವಿಧಿಸಿ ನಗರದ 52ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

ಕೆ.ಆರ್.ಪುರದ ಜಾವೀದ್ ಪಾಷಾ (25), ಗೋವಿಂದಪುರದ ಜಮ್ಶಿದ್ ಪಾಷಾ ಅಲಿಯಾಸ್ ಮೌಲಿಸಾಬ್ (33), ನದೀಮ್ ಶರೀಫ್ (21), ಕೋಲಾರದ ಮಾಲೂರು ತಾಲ್ಲೂಕಿನ ಮೊಜಾಹಿದ್ ಪಾಷಾ ಅಲಿಯಾಸ್ ಮುಜ ಹಾಗೂ ಸಿಕಂದರ್ ಪಾಷಾ (21) ಶಿಕ್ಷೆಗೆ ಗುರಿಯಾದವರು.2012ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಯಶವಂತಕುಮಾರ್ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ತ್ಯಾಗರಾಜು ವಾದಿಸಿದ್ದರು.

ಪ್ರಕರಣದ ವಿವರ: 'ಬ್ಯಾಂಕ್‌ಗಳ ಎಟಿಎಂಗೆ ಹಣ ತುಂಬುವ ಜವಾಬ್ದಾರಿಯನ್ನು ಏಜೆನ್ಸಿಯೊಂದು ವಹಿಸಿಕೊಂಡಿತ್ತು. ಏಜೆನ್ಸಿ ಸಿಬ್ಬಂದಿ, ಟಾಟಾ ಸುಮೋ ವಾಹನದಲ್ಲಿ ಹಣ ಇರಿಸಿಕೊಂಡು 2012ರ ಜುಲೈ 27ರಂದು ರಾಮಚಂದ್ರಾಪುರ ಮುಖ್ಯರಸ್ತೆಯಲ್ಲಿ ಹೊರಟಿದ್ದರು' ಎಂದು ಪೊಲೀಸರು ತಿಳಿಸಿದರು.

'ವಾಹನ ಅಡ್ಡಗಟ್ಟಿದ್ದ ಆರೋಪಿಗಳು, ಸಿಬ್ಬಂದಿಯನ್ನು ಬೆದರಿಸಿದ್ದರು. ವಾಹನ ಸಮೇತ ₹ 44 ಲಕ್ಷ ದರೋಡೆ ಮಾಡಿಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ನಡೆಸಿದ್ದ ಅಂದಿನ ಇನ್‌ಸ್ಪೆಕ್ಟರ್ ಎಚ್. ನಾಗರಾಜ್, ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದು ಹೇಳಿದರು.


ಟೀಕೆಯೂ ಎಲ್ಲೆ ಮೀರದಿರಲಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಟ್ಟ ಪದಗಳ ಬಳಕೆ, ಕೂಗಾಡುವುದರಿಂದಷ್ಟೇ ಟೀಕಿಸಲು ಸಾಧ್ಯ ಎಂಬ ಮನೋಭಾವದಿಂದ ಪತ್ರಕರ್ತರು ಹೊರ ಬರಬೇಕು. ಟೀಕಿಸುವಾಗ ಬಳಸುವ ಭಾಷೆಯು ಎಲ್ಲೆ ಮೀರದಂತೆ ಎಚ್ಚರ ವಹಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು ಪ್ರೆಸ್ ಕ್ಲಬ್ ಮತ್ತು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಗಳು ಜಂಟಿಯಾಗಿ ಬೆಂಗಳೂರು ಪ್ರೆಸ್ ಕ್ಲಬ್ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, 'ಸೃಜನಶೀಲ ಭಾಷೆ ಬಳಸಿಯೂ ಮೊನಚಾಗಿ ಟೀಕಿಸಬಹುದು' ಎಂದರು.

'ನಾವು ಯಾವ ರೀತಿ ಸುದ್ದಿಗಳನ್ನು ನೀಡುತ್ತೇವೆ ಎನ್ನುವುದರ ಆಧಾರದಲ್ಲೇ ಮಾಧ್ಯಮಗಳೂ ಕೆಲಸ ಮಾಡುತ್ತವೆ. ರಾಜಕಾರಣಿಗಳಿಗೂ ಭಾಷೆಯ ಮೇಲೆ ಹಿಡಿತ ಅಗತ್ಯ. ಭಾಷೆಯನ್ನು ಸುಂದರವಾಗಿ ಹೇಗೆ ಬಳಸಬೇಕು ಎಂಬುದನ್ನು ಹಿರಿಯ ಪತ್ರಕರ್ತರು ಮತ್ತು ಹಿರಿಯ ರಾಜಕಾರಣಿಗಳಿಂದ ಕಲಿಯಬೇಕು' ಎಂದು ಹೇಳಿದರು.



ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಪತ್ರಿಕಾ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಗುತ್ತಾ ಮಾತುಕತೆಯಲ್ಲಿ ನಿರತರಾಗಿದ್ದ ದೃಶ್ಯ – ಪ್ರಜಾವಾಣಿ ಚಿತ್ರ

ಕನ್ನಡ ಪತ್ರಿಕೋದ್ಯಮ ಇನ್ನೂ ಹೆಚ್ಚು ವಿಸ್ತಾರವಾಗಿ ಬೆಳೆಯಲು ಅವಕಾಶಗಳಿವೆ. ಹೊಸ ಪತ್ರಿಕೆಗಳು ಮತ್ತು ಹೊಸ ಸುದ್ದಿ ವಾಹಿನಿಗಳಿಗೆ ಅವಕಾಶವೇ ಇಲ್ಲ ಎಂಬ ಮಾತು ಸರಿಯಲ್ಲ. ಹೊಸದಾಗಿ ಆರಂಭವಾದ ಹಲವು ಮಾಧ್ಯಮ ಸಂಸ್ಥೆಗಳು ಬೃಹದಾಕಾರವಾಗಿ ಬೆಳೆದಿರುವುದು ಈ ಕ್ಷೇತ್ರದಲ್ಲಿ ದೊಡ್ಡ ಅವಕಾಶಗಳಿರುವುದಕ್ಕೆ ಸಾಕ್ಷಿ ಎಂದರು.

ಸಾರಿಗೆ ಸಚಿವ ಬಿ. ಶ್ರೀರಾಮುಲು, ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಪ್ರೆಸ್ ಕ್ಲಬ್ ಅಧ್ಯಕ್ಷ ಆರ್. ಶ್ರೀಧರ, ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ವಾರ್ತಾ ಇಲಾಖೆ ಆಯುಕ್ತ ಡಾ.ಪಿ.ಎಸ್. ಹರ್ಷ ಉಪಸ್ಥಿತರಿದ್ದರು. ಪತ್ರಕರ್ತರಾದ ಮಾಯಾ ಶರ್ಮ ಮತ್ತು ಹುಣಸವಾಡಿ ರಾಜನ್ 'ಪತ್ರಿಕೋದ್ಯಮದ ಸವಾಲುಗಳು: ಅಂದು– ಇಂದು– ಮುಂದು' ಕುರಿತು ಮಾತನಾಡಿದರು.

'ಪ್ರಶ್ನೆಗಳಿಲ್ಲದೇ ನಿರಾಳರಾಗಿದ್ದೇವೆ'

'ಹಿಂದೆ ಪತ್ರಿಕಾಗೋಷ್ಠಿಗಳಲ್ಲಿ ಪ್ರಶ್ನೆ, ಉಪ ಪ್ರಶ್ನೆ, ಮರು ಪ್ರಶ್ನೆಗಳು ಎದುರಾಗುತ್ತಿದ್ದರಿಂದ ಭಯದಲ್ಲೇ ಹೋಗುತ್ತಿದ್ದೆವು. ಈಗ ಪ್ರಶ್ನೆಗಳೇ ಇಲ್ಲದಿರುವುದರಿಂದ ನಾವು ನಿರಾಳರಾಗಿದ್ದೇವೆ. ಈಗ ರಾಜಕಾರಣಿಗಳಿಗೆ ಪ್ರಶ್ನೆಗಳ ಭೀತಿ ಇಲ್ಲ' ಎಂದು ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಹೇಳಿದರು.

ಪತ್ರಿಕಾ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ತೋಚಿದ್ದನ್ನೇ ಬರೆಯುವುದು, ರೋಚಕವಾಗಿ ಸುದ್ದಿ ನೀಡುವುದು ಆ ಕಾಲಕ್ಕೆ ಖುಷಿ ನೀಡಬಹುದು. ಆದರೆ, ಅದರಿಂದ ಸಮಾಜಕ್ಕೆ ಒಳಿತಾಗುವುದಿಲ್ಲ' ಎಂದರು.

> **ವಿದ್ಯುನ್ಮಾನ ಮಾಧ್ಯಮಗಳ ಬೆಳವಣಿಗೆಯಿಂದಾಗಿ ಸರ್ಕಾರ ನಡೆಸುವವರು ಮಾಹಿತಿಗಾಗಿ ಗುಪ್ತದಳದ ವರದಿಯನ್ನೇ ಕಾಯಬೇಕಿಲ್ಲ. ಎಲ್ಲವೂ ಕ್ಷಣಮಾತ್ರದಲ್ಲಿ ತಿಳಿಯುತ್ತಿದೆ.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಗೃಹ ಇಲಾಖೆ, ಸಿಬಿಐಗೆ ನೋಟಿಸ್: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಕೃತ ಕಾಮಕೇಳಿಗೆ ಆಹ್ವಾನಿಸಿ ನನ್ನನ್ನು, ನನ್ನ ತಂಗಿಯನ್ನು ಹಾಗೂ ನನ್ನ ಮೊದಲ ಗಂಡನಿಗೆ ಜನಿಸಿದ ವಯಸ್ಕ ಹೆಣ್ಣುಮಕ್ಕಳನ್ನು ಲೈಂಗಿಕವಾಗಿ ಶೋಷಿಸುತ್ತಿರುವ ಪೊಲೀಸ್ ಇನ್‌ಸ್ಪೆಕ್ಟರ್ ಆಗಿರುವ ನನ್ನ ಪತಿಯ ವಿರುದ್ಧ ಕ್ರಮಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಮುಸ್ಲಿಂ ಮಹಿಳೆಯೊಬ್ಬರು ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ಗೃಹ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನಗರದ 36 ವರ್ಷದ ಮುಸ್ಲಿಂ ಮಹಿಳೆಯೊಬ್ಬರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ಪ್ರತಿವಾದಿಗಳಾದ ಪೊಲೀಸ್ ಮಹಾ ನಿರ್ದೇಶಕರು, ನಗರ ಪೊಲೀಸ್ ಆಯುಕ್ತರು, ಸಿಬಿಐ, ಜೆ.ಸಿ. ನಗರ ಠಾಣಾ ಇನ್‌ಸ್ಪೆಕ್ಟರ್ ಮತ್ತು ಟಿ.ಆರ್.ಶ್ರೀನಿವಾಸ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿದಾರ ಮಹಿಳೆಯ ಪರ ವಕೀಲರಾದ ನವೀದ್ ಅಹಮದ್ ಮತ್ತು ಎಚ್.ಸುನಿಲ್ ಕುಮಾರ್ ಜಂಟಿ ವಕಾಲತ್ತು ಸಲ್ಲಿಸಿದ್ದಾರೆ. ಆರೋಪಿ ಟಿ.ಆರ್. ಶ್ರೀನಿವಾಸ್ ವಸಂತನಗರದ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಪ್ರಕರಣವೇನು?: 'ಸಂಕಟದ ಗಳಿಗೆಯೊಂದರಲ್ಲಿ ಪೊಲೀಸ್ ಠಾಣೆಗೆ ದೂರು ಕೊಡಲು ಹೋದಾಗ ಪರಿಚಯವಾಗಿದ್ದ ಶ್ರೀನಿವಾಸ್ ನನ್ನನ್ನು ಮದುವೆಯಾದರು. ಕೆಲ ವರ್ಷಗಳ ನಂತರ ಅಮಾನವೀಯವಾಗಿ ನಡೆದುಕೊಳ್ಳಲು ಆರಂಭಿಸಿದರು. ಈಗ ನನ್ನ ತಂಗಿಯ ಜತೆಗೂ ಅನೈತಿಕ ಸಂಬಂಧ ಬೆಳೆಸಿ ಆಕೆ ಗರ್ಭಿಣಿಯಾಗಲು ಕಾರಣರಾಗಿದ್ದಾರೆ. ನಾನು ಮನೆಯಲ್ಲಿ ಇಲ್ಲದ ವೇಳೆ ನನ್ನ ಮೊದಲ ಗಂಡನಿಗೆ ಜನಿಸಿದ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳ ಮೇಲೂ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಮಹಿಳೆ ರಿಟ್ ಅರ್ಜಿಯಲ್ಲಿ ದೂರಿದ್ದಾರೆ.

'ಈ ಸಂಬಂಧ 2022ರ ಜೂನ್ 1ರಂದು ಜೆ.ಸಿ. ನಗರ ಠಾಣೆ ಇನ್‌ಸ್ಪೆಕ್ಟರ್‌ಗೆ ದೂರು ನೀಡಿದರೂ ತನಿಖೆ ನಡೆಸಿಲ್ಲ. ಬದಲಾಗಿ ಶ್ರೀನಿವಾಸ್ ಜೊತೆ ಸೇರಿ ನನ್ನನ್ನೇ ಠಾಣೆಗೆ ಕರೆಯಿಸಿ ದೂರು ಹಿಂಪಡೆಯುವಂತೆ ಬೆದರಿಸಿದ್ದಾರೆ. ಹಣದ ಆಮಿಷವೊಡ್ಡಿ ರಾಜಿ ಮಾಡಿಕೊಳ್ಳುವಂತೆ ಸೂಚಿಸಿದ್ದಾರೆ. ನನಗೆ ನ್ಯಾಯಬೇಕು, ಆದ್ದರಿಂದ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

ಸುದ್ದಿ 2 ನಿಮಿಷ

ಡ್ರಗ್ಸ್ ಮಾರಿ ಜೈಲು: ಹೊರಬಂದು ವಾಹನ ಕಳ್ಳತನ

ಬೆಂಗಳೂರು: ಮನೆಗಳ ಮುಂದೆ ಹಾಗೂ ಸಾರ್ವಜನಿಕ ಸ್ಥಳದಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ಆಂಥೋನಿ ಅಲಿಯಾಸ್ ತೂಪೇಕ್ (25) ಅವರನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

'ಕೋರಮಂಗಲದ ಲಕ್ಷ್ಮಣ ರಾವ್ ನಗರದ ನಿವಾಸಿ ಆಂಥೋನಿ, ಹಲವು ವರ್ಷಗಳಿಂದ ಅಪರಾಧ ಕೃತ್ಯ ಎಸಗುತ್ತಿದ್ದ. ಈತನಿಂದ ₹ 10 ಲಕ್ಷ ಮೌಲ್ಯದ 11 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೋಜು–ಮಸ್ತಿ ಹಾಗೂ ಐಷಾರಾಮಿ ಜೀವನಕ್ಕೆ ಹಣ ಹೊಂದಿಸಲು ಆರೋಪಿ ಕಳ್ಳತನ ಮಾಡುತ್ತಿದ್ದ. ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಆಂಥೋನಿಯನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಆರೋಪಿ, ದ್ವಿಚಕ್ರ ವಾಹನ ಕಳ್ಳತನ ಮಾಡಿ ಮಾರುತ್ತಿದ್ದ' ಎಂದೂ ತಿಳಿಸಿದರು.



ಕದ್ದ ಕಾರುಗಳಲ್ಲಿ ರಕ್ತಚಂದನ ಸಾಗಣೆ

ಬೆಂಗಳೂರು: ಕದ್ದ ಕಾರುಗಳಲ್ಲಿ ರಕ್ತಚಂದನ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಶೇಷಾದ್ರಿಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಎಸ್. ವಿಘ್ನೇಶ್ (25) ಹಾಗೂ ಎಂ. ಚಂದ್ರು (26) ಬಂಧಿತರು. ಇವರಿಂದ ₹ 51 ಲಕ್ಷ ಮೌಲ್ಯದ 453 ಕೆ.ಜಿ ತೂಕದ ರಕ್ತಚಂದನದ ತುಂಡುಗಳು ಹಾಗೂ ಮೂರು ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಶೇಷಾದ್ರಿಪುರದ ರೈಲ್ವೆ ಪರ್ಯಾಯ ರಸ್ತೆಯಲ್ಲಿ ಜೂನ್ 23ರಂದು ಸಿಬ್ಬಂದಿ ವಾಹನಗಳ ತಪಾಸಣೆ ಮಾಡುತ್ತಿದ್ದರು. ಅದೇ ರಸ್ತೆಯಲ್ಲಿ ಹೊರಟಿದ್ದ ಆರೋಪಿಗಳು, ಪೊಲೀಸರನ್ನು ನೋಡಿ ಕಾರು ರಿವರ್ಸ್ ತೆಗೆದುಕೊಂಡು ಪರಾರಿಯಾಗಲು ಯತ್ನಿಸಿದ್ದರು. ಕಾರು ಗಮನಿಸಿದ್ದ ಸಿಬ್ಬಂದಿ ಬೆನ್ನಟ್ಟಿ ನಿಲ್ಲಿಸಿದ್ದರು. ಇಬ್ಬರೂ ಆರೋಪಿಗಳನ್ನು ವಶಕ್ಕೆ ಪಡೆದು, ಕಾರಿನಲ್ಲಿ ಪರಿಶೀಲಿಸಿದಾಗ ರಕ್ತಚಂದನದ ತುಂಡುಗಳು ಪತ್ತೆಯಾದವು' ಎಂದು ತಿಳಿಸಿದರು.

'ಆಂಧ್ರಪ್ರದೇಶ ಕಾಡಿನಲ್ಲಿರುವ ಜನರಿಂದ ರಕ್ತಚಂದನ ಖರೀದಿಸುತ್ತಿದ್ದ ಆರೋಪಿಗಳು, ಬೆಂಗಳೂರು ಹಾಗೂ ಇತರೆಡೆ ಮಾರಾಟ ಮಾಡುತ್ತಿದ್ದರು. ಕೃತ್ಯದಲ್ಲಿ ಭಾಗಿಯಾಗಿರುವ ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಹೇಳಿದರು.

'ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಕಾರುಗಳನ್ನು ಕದ್ದಿದ್ದ ಆರೋಪಿಗಳು, ಅವುಗಳನ್ನೇ ರಕ್ತಚಂದನ ಸಾಗಿಸಲು ಬಳಸುತ್ತಿದ್ದರು' ಎಂದು ತಿಳಿಸಿದರು.

ವಿದ್ಯುತ್ ಬಿಲ್ ಹೆಸರಿನಲ್ಲಿ ₹ 2.51 ಲಕ್ಷ ವಂಚನೆ

ಬೆಂಗಳೂರು: ಬೆಸ್ಕಾಂ ವಿದ್ಯುತ್ ಬಿಲ್ ಪಾವತಿ ಹೆಸರಿನಲ್ಲಿ ನಗರದ ನಿವಾಸಿಗಳಿಬ್ಬರ ಬ್ಯಾಂಕ್ ಖಾತೆಯಿಂದ ₹ 2.51 ಲಕ್ಷ ವರ್ಗಾಯಿಸಿಕೊಂಡು ವಂಚಿಸಲಾಗಿದ್ದು, ಈ ಬಗ್ಗೆ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ಬೆಸ್ಕಾಂ ಪ್ರತಿನಿಧಿಗಳ ಸೋಗಿನಲ್ಲಿ ಕರೆ ಮಾಡಿದ್ದ ಸೈಬರ್ ವಂಚಕರು, ನಿವಾಸಿಗಳ ವೈಯಕ್ತಿಕ ಮಾಹಿತಿ ಪಡೆದು ವಂಚಿಸಿದ್ದಾರೆ. ಹಣ ಕಳೆದುಕೊಂಡಿರುವ ನಿವಾಸಿಗಳು ನೀಡಿರುವ ದೂರು ಆಧರಿಸಿ ದಕ್ಷಿಣ ಹಾಗೂ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

₹ 1.53 ಲಕ್ಷ ವಂಚನೆ: 'ಸದಾಶಿವ ನಗರ ನಿವಾಸಿ ಮಂಜರಿ ಅವರಿಗೆ ಜೂನ್ 24ರಂದು ಕರೆ ಮಾಡಿದ್ದ ಆರೋಪಿ, 'ನಿಮ್ಮ ಮನೆಯ ವಿದ್ಯುತ್ ಬಿಲ್ ಪಾವತಿ ಮಾಡಿಲ್ಲ. ಕೂಡಲೇ ಪಾವತಿ ಮಾಡದಿದ್ದರೆ, ಸಂಪರ್ಕ ಕಡಿತಗೊಳಿಸಲಾಗುವುದು' ಎಂದಿದ್ದ. ಬಿಲ್ ಪಾವತಿಸುವಂತೆ ಹೇಳಿ ಆ್ಯಪೊಂದರ ಲಿಂಕ್ ಕಳುಹಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆ್ಯಪ್ ಡೌನ್‌ಲೋಡ್ ಮಾಡಿದ್ದ ಮಂಜರಿ, ಬಿಲ್ ಪಾವತಿಸಲೆಂದು ವೈಯಕ್ತಿಕ ಮಾಹಿತಿ ನಮೂದಿಸಿದ್ದರು. ಇದಾದ ಕೆಲ ನಿಮಿಷಗಳಲ್ಲೇ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 1.53 ಲಕ್ಷ ಡ್ರಾ ಆಗಿದೆ' ಎಂದೂ ಹೇಳಿವೆ.

₹ 98,500 ವಂಚನೆ: 'ಪದ್ಮನಾಭ ನಗರದ ನಿವಾಸಿ ನಾರಾಯಣ ಅವರಿಗೆ ಜೂನ್ 28ರಂದು ಕರೆ ಬಂದಿತ್ತು. ಬೆಸ್ಕಾಂ ಪ್ರತಿನಿಧಿ ಎಂದಿದ್ದ ಆರೋಪಿ, ಬಿಲ್ ಪಾವತಿಸುವಂತೆ ಹೇಳಿ ಆ್ಯಪ್ ಒಂದನ್ನು ಡೌನ್‌ಲೋಡ್ ಮಾಡಿಸಿದ್ದ. ಆರೋಪಿ ಮಾತು ನಂಬಿದ್ದ ನಾರಾಯಣ, ವೈಯಕ್ತಿಕ ವಿವರ ನಮೂದಿಸಿದ್ದರು. ಇದಾದ ನಂತರ, ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 98,500 ಕಡಿತವಾಗಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

₹ 1.16 ಕೋಟಿ ಸುಲಿಗೆ: ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಆಳಂದದ ವೈದ್ಯ ಶಂಕರ್ ಬಾಬು ಅವರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ₹ 1.16 ಕೋಟಿ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ಮತ್ತೆ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವೈದ್ಯಕೀಯ ಸೀಟು ಕೊಡಿಸುವುದಾಗಿ ಹೇಳಿ ಹಣ ಪಡೆದು ವಂಚಿಸಿದ್ದ ಕೆಲವರು, ಹಣ ವಾಪಸು ಕೇಳಿದ್ದಕ್ಕೆ ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ಸುಲಿಗೆ ಮಾಡಿದ್ದಾರೆ' ಎಂದು ಆರೋಪಿಸಿ ವೈದ್ಯ ಶಂಕರ್ ಉಪ್ಪಾರಪೇಟೆ ಠಾಣೆಗೆ ದೂರು ನೀಡಿದ್ದರು. ತನಿಖೆ ಹೊಣೆ ಸಿಸಿಬಿಗೆ ವಹಿಸಲಾಗಿತ್ತು.

'ಪ್ರಕರಣದ ತನಿಖೆ ಕೈಗೊಂಡು ಪ್ರಮುಖ ಆರೋಪಿಗಳಾದ ಆಳಂದದ ನಾಗರಾಜ್ ಬೋರುಪಿ, ಬೆಂಗಳೂರಿನ ಮಧು ಹಾಗೂ ಓಂಪ್ರಕಾಶ್ ಎಂಬುವರನ್ನು ಈ ಹಿಂದೆಯೇ ಬಂಧಿಸಲಾಗಿತ್ತು. ಇದೀಗ ಮತ್ತೆ ಇಬ್ಬರನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಶಂಕರ್ ಅವರ ಮಗನಿಗೆ ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ಆಮಿಷವೊಡ್ಡಿದ್ದ ಆರೋಪಿಗಳು, ಹಂತ ಹಂತವಾಗಿ ₹ 66 ಲಕ್ಷ ಪಡೆದಿದ್ದರು. ಸೀಟು ಕೊಡಿಸದಿದ್ದಾಗ ಹಣ ವಾಪಸು ನೀಡುವಂತೆ ದೂರುದಾರ ಒತ್ತಾಯಿಸಿದ್ದರು.'

'ಹಣ ಕೊಡುವುದಾಗಿ ಹೇಳಿ ದೂರುದಾರರನ್ನು ಬೆಂಗಳೂರಿಗೆ ಕರೆಸಿಕೊಂಡಿದ್ದ ಆರೋಪಿಗಳು, ಮೆಜೆಸ್ಟಿಕ್‌ನಲ್ಲಿರುವ ಯು.ಟಿ ವಸತಿಗೃಹದ ಕೊಠಡಿಯಲ್ಲಿ ಇರಿಸಿದ್ದರು. ಅದೇ ಕೊಠಡಿಗೆ ಕೆಲ ಯುವತಿಯರನ್ನು ಕಳುಹಿಸಿ, ಸಲುಗೆಯಿಂದ ವರ್ತಿಸುವಂತೆ ಮಾಡಿ ಫೋಟೊ ಕ್ಲಿಕ್ಕಿಸಿಕೊಂಡಿದ್ದರು. ಫೋಟೊವನ್ನೇ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿ ₹ 50 ಲಕ್ಷ ಸುಲಿಗೆ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ₹ 3.50 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಬ್ಯಾಟರಾಯನಪುರ, ಹೆಬ್ಬಾಳ ಹಾಗೂ ಸರ್ವಜ್ಞನಗರ ಕ್ಷೇತ್ರಗಳ ಜನರು ವೀರಣ್ಣಪಾಳ್ಯದ ಮುಖ್ಯರಸ್ತೆಯನ್ನು ಬಳಸುತ್ತಿದ್ದು, ಈ ರಸ್ತೆಯಲ್ಲಿ ಹೆಚ್ಚಿನ ವಾಹನ ಸಂಚಾರದ ಒತ್ತಡವಿದೆ. ಈ ಹಿಂದೆಯೇ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗಿದ್ದರೂ ಈ ಭಾಗದಲ್ಲಿ ಒಳಚರಂಡಿ ನೀರು ಹರಿದುಹೋಗಲು ಅವಕಾಶವಿಲ್ಲದೆ ಸರ್ವಿಸ್ ರಸ್ತೆಯಲ್ಲಿ ಕೊಳಚೆನೀರು ಸಂಗ್ರಹವಾಗಿ ಪಾದಚಾರಿಗಳು ಹಾಗೂ ವಾಹನ ಸಂಚಾರಕ್ಕೆ ಸಮಸ್ಯೆಯಾಗಿತ್ತು' ಎಂದು ತಿಳಿಸಿದರು.

ಪಾಲಿಕೆ ಮಾಜಿ ಸದಸ್ಯ ಪಿ.ವಿ. ಮಂಜುನಾಥ ಬಾಬು, ನಗರಸಭೆ ಮಾಜಿ ಸದಸ್ಯರಾದ ರಮೇಶ್, ಪಾರ್ವತಮ್ಮ, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ಎಚ್.ಎ.ಶಿವಕುಮಾರ್, ಬಸವರಾಜು, ಸಂತೋಷ್ ಬೆಳ್ಳುಟ್ಟಿ, ಗೋಪಾಲರೆಡ್ಡಿ, ಬಿಬಿಎಂಪಿ ಸಹಾಯಕ ಎಂಜಿನಿಯರ್‌ಗಳಾದ ಸುರೇಶ್ ದೇವತ್ ರಾಜ್, ಮಾಲತೇಶ್ಇದ್ದರು.

ಉಚಿತ ಆನ್‌ಲೈನ್ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗಬಯಸುವ ಅಭ್ಯರ್ಥಿಗಳಿಗೆ ಬೆಂಗಳೂರಿನ ಬುದ್ಧ ಐಎಎಸ್ ಉಚಿತ ಆನ್‌ಲೈನ್ ತರಬೇತಿಗೆ ಅರ್ಜಿ ಆಹ್ವಾನಿಸಿದೆ.

2023ರಲ್ಲಿ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಲ್ಲಿ ಹಾಜರಾಗಬಯಸುವ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಎಸ್.ಸಿ, ಎಸ್.ಟಿ ಮತ್ತು ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. 3000 ಅಭ್ಯರ್ಥಿಗಳಿಗೆ 12 ತಿಂಗಳ ತರಬೇತಿ, 100ಕ್ಕೂ ಅಧಿಕ ಅಣಕು ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಸಂಸ್ಥೆ ಮುಖ್ಯಸ್ಥ ಸಿ.ರಘುಗೌಡ ತಿಳಿಸಿದರು.


ಆಸಕ್ತ ಅಭ್ಯರ್ಥಿಗಳು ಗೂಗಲ್ ಪ್ಲೇಸ್ಟೋರ್‌ನಿಂದ ಬುದ್ಧ ಐಎಎಸ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು, ಅದರಲ್ಲಿ BUDDHA IAS COACHING_563 ಎಂದು ಮೆಸೇಜ್ ಮಾಡಬೇಕು. ಆನಂತರ ಕೋರ್ಸ್‌ಗೆ ಸೇರ್ಪಡೆ ಮಾಡಿಕೊಳ್ಳಲಾಗುತ್ತದೆ ಎಂದು ಮಾಹಿತಿ ನೀಡಿದರು. ಹೆಚ್ಚಿನ ಮಾಹಿತಿಗಾಗಿ 7676211367– 9739109401ಗೆ ಸಂಪರ್ಕಿಸಿ.

'4 ಸಾವಿರ ಕುಟುಂಬಕ್ಕೆ ಹಕ್ಕುಪತ್ರ ವಿತರಣೆ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸರ್ಕಾರಿ ಜಮೀನಿನಲ್ಲಿ ಮನೆ ನಿರ್ಮಿಸಿಕೊಂಡಿರುವ ಯಶವಂತಪುರ ಕ್ಷೇತ್ರ ವ್ಯಾಪ್ತಿಯ ಬಿಬಿಎಂಪಿ ಮತ್ತು ಗ್ರಾಮೀಣ ಪ್ರದೇಶದ 4 ಸಾವಿರ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲಾಗಿದೆ. ಇನ್ನೂ ಕೆಲವರಿಗೆ ಶೀಘ್ರ ಹಕ್ಕು ಪತ್ರ ನೀಡಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಮಾಗಡಿ ರಸ್ತೆಯ ಶಾಸಕರ ಕಚೇರಿಯಲ್ಲಿ ಹೇರೋಹಳ್ಳಿ ವಾರ್ಡ್‌ನ ಬಿಳೆಕಲ್ಲುದನಿನ ಮಂದಿ ಗ್ರಾಮದ 102 ಕುಟುಂಬಗಳಿಗೆ ಮನೆಯ ಹಕ್ಕು ಪತ್ರ, 'ಎ' ಖಾತಾ ವಿತರಣೆ ಮಾಡಿ ಮತ್ತು ವಿಘ್ನೇಶ್ವರಿನಗರ ವ್ಯಾಪ್ತಿಯಲ್ಲಿ ಹತ್ತುಕೋಟಿ ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ, ಡಾಂಬರೀಕರಣ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.



ಬಿಳೆಕಲ್ಲುದನಿನ ಮಂದಿ ಗ್ರಾಮಸ್ಥರಿಗೆ ಸಹಕಾರ ಸಚಿವ ಎಸ್‌ಟಿ.ಸೋಮಶೇಖರ್ ಅವರು 'ಎ' ಖಾತಾ ಹಕ್ಕು ಪತ್ರಗಳನ್ನು ವಿತರಿಸಿದರು. ಕಾಚೋಹಳ್ಳಿ ಲೋಕೇಶ್, ರಾಜಣ್ಣ, ರಘು, ರಘುನಂದನ್ ಇದ್ದಾರೆ.

ಕಾವೇರಿ ನೀರಿನ ಸಂಪರ್ಕ ಪಡೆದುಕೊಳ್ಳದವರು ಶೀಘ್ರ ಪಡೆದುಕೊಳ್ಳಬೇಕು. ಡಾಂಬರೀಕರಣ ಮಾಡಿದ ನಂತರ ಸಾರ್ವಜನಿಕರು, ಬೆಂಗಳೂರು ಜಲಮಂಡಲಿ, ಬೆಸ್ಕಾಂ, ಖಾಸಗಿ ಸಂಸ್ಥೆಗಳು ರಸ್ತೆ ಅಗೆದರೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಉಳಿದ ರಸ್ತೆಗಳ ಅಭಿವೃದ್ಧಿ ಜತೆಗೆ ಹೇರೋಹಳ್ಳಿ ವಾರ್ಡ್‌ನ ವ್ಯಾಪ್ತಿಯಲ್ಲಿ ಶೀಘ್ರದಲ್ಲಿಯೇ ₹ 20 ಕೋಟಿ ವೆಚ್ಚದಲ್ಲಿ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಬಿ.ಸಿ.ಲೋಕೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಎಂ.ಬಿ.ನಾಗರಾಜು, ಚಿತ್ತಯ್ಯ, ವಾರ್ಡ್ ಬಿಜೆಪಿ ಅಧ್ಯಕ್ಷ ರವಿಶಂಕರ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ರಘು, ಬಿಬಿಎಂಪಿ ಮಾಜಿ ಸದಸ್ಯ ರಾಜಣ್ಣ, ಕಾಚೋಹಳ್ಳಿ ಲೋಕೇಶ್, ನಾಗವೇಣಿ, ಸೊಳ್ಳೆಪುರ ಸೋಮು ಇದ್ದರು.

ಚಿತ್ರಾವಳಿ



ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಶುಕ್ರವಾರ ನಿವೃತ್ತರಾದರು. ಬೆಂಗಳೂರು ವಕೀಲರ ಸಂಘದ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ಪದಾಧಿಕಾರಿಗಳಾದ ಚಂದ್ರಕಾಂತ ಪಾಟೀಲ, (ಎಡದಿಂದ) ಎಸ್‌.ರಾಜು, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಅರಾಧೆ, ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪದಾಧಿಕಾರಿ ಎ.ಎಸ್‌.ಹರೀಶ್, ನ್ಯಾಯಮೂರ್ತಿ ಬಿ.ವೀರಪ್ಪ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ಖಜಾಂಚಿ ಎಂ.ಟಿ.ಹರೀಶ್ ಮತ್ತು ವಿ. ಹೇಮಲತಾ ಇದ್ದರು.



ಆದಾಯ ತೆರಿಗೆ ಕಚೇರಿಯಲ್ಲಿ ನಡೆದ ಜಿಎಸ್‌ಟಿ ದಿನ ಕಾರ್ಯಕ್ರಮದಲ್ಲಿ ಇಲಾಖೆಯ ಪ್ರಧಾನ ಮುಖ್ಯ ಆಯುಕ್ತ ದಿನೇಶ್ ಚಂದ್ರ ಪಟ್ವಾರಿ, ಅಮಗಿ ಮೀಡಿಯಾ ಲಿಮಿಟೆಡ್‌ನ ಶ್ರೀವಿದ್ಯಾ ಶ್ರೀನಿವಾಸನ್, ಶಿಕ್ಷಣ ತಜ್ಞ ಗುರುರಾಜ ಕರಜಗಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಬೆಸ್ಕಾಂ ಆಯೋಜಿಸಿರುವ 'ಇ.ವಿ ಎಕ್ಸ್‌ಪೋ'ದಲ್ಲಿ ವೈವಿಧ್ಯಮಯ ವಾಹನಗಳು

ಎಲೆಕ್ಟ್ರಿಕಲ್ ವಾಹನ ಉದ್ಯಮದ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಬಳಕೆಗೂ ಎಲೆಕ್ಟ್ರಿಕ್ ಟ್ರ್ಯಾಕ್ಟರ್, ವೈವಿಧ್ಯಮಯ ಆಕರ್ಷಕ ಬೈಕ್ ಮತ್ತು ಕಾರುಗಳು, ಆ್ಯಪ್ ಮೂಲಕ ಚಾರ್ಜಿಂಗ್ ಸ್ಟೇಷನ್‌ಗಳ ಮಾಹಿತಿ, ಎರಡು ನಿಮಿಷದಲ್ಲಿ ಬ್ಯಾಟರಿ ಬದಲಾವಣೆ ವ್ಯವಸ್ಥೆ...

ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಎಲೆಕ್ಟ್ರಿಕಲ್ ವಾಹನಗಳ ಕ್ಷೇತ್ರ ಸಾಧಿಸಿರುವ ಪ್ರಗತಿಯ ಅನಾವರಣ ಇದು. ಉತ್ಪಾದಕರು, ಪೂರೈಕೆದಾರರು ಮತ್ತು ಗ್ರಾಹಕರನ್ನು ಒಂದೇ ಸೂರಿನಡಿಯಲ್ಲಿ ಸೇರಿಸಿದ ಈ ಎಕ್ಸ್‌ಪೋ ಹೊಸ ತಂತ್ರಜ್ಞಾನಗಳನ್ನು ಸಹ ಪರಿಚಯಿಸಿದೆ.

ಎಲೆಕ್ಟ್ರಿಕಲ್ ವಾಹನಗಳ ಬಳಕೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 'ಇ.ವಿ' ಅಭಿಯಾನ ಹಮ್ಮಿಕೊಂಡಿದೆ. ಇದರ ಅಂಗವಾಗಿ ಬೆಸ್ಕಾಂ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದ ಚಾಮರವಜ್ರ ಸಭಾಂಗಣದಲ್ಲಿ 'ಇ.ವಿ ಎಕ್ಸ್‌ಪೋ' ಆಯೋಜಿಸಿದೆ. ಶುಕ್ರವಾರ ಆರಂಭವಾದ ಎಕ್ಸ್‌ಪೋ ಭಾನುವಾರದ ವರೆಗೆ ನಡೆಯಲಿದೆ. 90ಕ್ಕೂ ಹೆಚ್ಚು ಕಂಪನಿಗಳು 'ಇ.ವಿ ಎಕ್ಸ್‌ಪೋ'ದಲ್ಲಿ ಭಾಗವಹಿಸಿವೆ.

ಕೃಷಿ ಚಟುವಟಿಕೆಗಳಲ್ಲೂ ಅನುಕೂಲ ಕಲ್ಪಿಸುವ ಎಲೆಕ್ಟ್ರಿಕಲ್ ಟ್ರ್ಯಾಕ್ಟರ್ ಅನ್ನು 'ಸೆಲ್ಸಿಸ್ಟಿಯಲ್ ಮೊಬಿಲಿಟಿ' ಕಂಪನಿ ಅಭಿವೃದ್ಧಿಪಡಿಸಿದೆ. 27ಎಚ್‌ಪಿ ಸಾಮರ್ಥ್ಯದ ಈ ಟ್ರ್ಯಾಕ್ಟರ್ ಬ್ಯಾಟರಿ ಚಾರ್ಜ್ ಮಾಡಲು ಆರು ಗಂಟೆಗಳು ಸಾಕು. ಒಂದು ಬಾರಿ ಚಾರ್ಜ್ ಮಾಡಿದರೆ 75 ಕಿಲೋ ಮೀಟರ್ ದೂರದವರೆಗೆ ಸಂಚರಿಸುತ್ತದೆ ಮತ್ತು



ನಗರದಲ್ಲಿ ಶುಕ್ರವಾರದಿಂದ ಆರಂಭವಾದ 'ಇ.ವಿ' ಎಕ್ಸ್‌ಪೋದಲ್ಲಿ ಗಮನ ಸೆಳೆದ ಎಲೆಕ್ಟ್ರಿಕಲ್ ಟ್ರ್ಯಾಕ್ಟರ್ –ಪ್ರಜಾವಾಣಿ ಚಿತ್ರ

ಜಮೀನುಗಳಲ್ಲಿ ಆರು ಗಂಟೆಗಳ ಕಾಲ ಬಳಸಬಹುದಾಗಿದೆ.

ಈ ಟ್ರ್ಯಾಕ್ಟರ್ ಮೌಲ್ಯ ₹6 ಲಕ್ಷದಿಂದ 8 ಲಕ್ಷ. ಡೀಸೆಲ್ ಟ್ರ್ಯಾಕ್ಟರ್‌ಗೆ ಹೋಲಿಸಿದರೆ ಎಲೆಕ್ಟ್ರಿಕಲ್ ಟ್ರ್ಯಾಕ್ಟರ್ ಇಂಧನ ಮತ್ತು ನಿರ್ವಹಣೆ ವೆಚ್ಚ ಅತಿ ಕಡಿಮೆ. ಜತೆಗೆ ಸುಲಭವಾಗಿ ಚಲಾಯಿಸಬಹುದು ಎಂದು ಕಂಪನಿಯ ಪ್ರತಿನಿಧಿ ಲಕ್ಷ್ಮೀಕಾಂತ್ ವಿವರಿಸಿದರು.

ಐವರು ಪ್ರಯಾಣಿಸುವ 'ಇ–ರಿಕ್ಷಾ' ಅಭಿವೃದ್ಧಿಪಡಿಸಿರುವ ನವೋದ್ಯಮ ಕಂಪನಿ 'ಇಕೊ ಡೈನಾಮಿಕ್', ಈಗಾಗಲೇ ವಿವಿಧ ಮಾದರಿಯ ಮೂರು ಸಾವಿರ ವಾಹನಗಳನ್ನು ಭಾರತದಲ್ಲಿ ಮಾರಾಟ ಮಾಡಿದೆ. ವಿವಿಧ ಕಂಪನಿಗಳ ಕ್ಯಾಂಪಸ್‌ಗಳಲ್ಲಿಯೂ ಈ ವಾಹನಗಳನ್ನು ಹೆಚ್ಚು ಬಳಸಲಾಗುತ್ತಿದೆ. ಈ ವಾಹನಗಳು 100 ಕಿ.ಮೀ. ಸಂಚರಿಸಿದರೆ ₹25 ಮಾತ್ರ ವೆಚ್ಚವಾಗುತ್ತದೆ. ಹೀಗಾಗಿ, ಇದು ಅತ್ಯಂತ ಅಗ್ಗದ ಸಾರಿಗೆ ವಾಹನ ಎಂದು ಕಂಪನಿಯ ಪ್ರತಿನಿಧಿ ವಿವೇಕ್ ತಿಳಿಸಿದರು.

'ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ'
ಪ್ರಜಾವಾಣಿ ನೋಡಿಯೊ

ಎರಡೇ ನಿಮಿಷದ ಒಳಗೆ ತ್ರಿಚಕ್ರಗಳ ಬ್ಯಾಟರಿಗಳನ್ನು ಬದಲಾಯಿಸುವ ವ್ಯವಸ್ಥೆ ರೂಪಿಸಿರುವ 'ಸನ್ ಮೊಬಿಲಿಟಿ' ದೇಶದಾದ್ಯಂತ 101 ಘಟಕಗಳನ್ನು ಸ್ಥಾಪಿಸಿದೆ. ಬೆಂಗಳೂರಿನಲ್ಲೂ 14 ಘಟಕಗಳನ್ನು ಸ್ಥಾಪಿಸಿದೆ. ಅಡುಗೆ ಅನಿಲ ಸಿಲಿಂಡರ್‌ಗಳನ್ನು ಬದಲಾಯಿಸುವ ವ್ಯವಸ್ಥೆಯ ರೀತಿಯಲ್ಲಿ ಈ ಬ್ಯಾಟರಿಗಳನ್ನು ಬದಲಾಯಿಸಬಹುದಾಗಿದೆ. ದ್ವಿಚಕ್ರ ವಾಹನಗಳ ಬ್ಯಾಟರಿಗಳನ್ನು ಒಂದು ನಿಮಿಷದಲ್ಲಿ ಮತ್ತು ತ್ರಿಚಕ್ರ ವಾಹನಗಳ ಬ್ಯಾಟರಿಗಳನ್ನು ಎರಡು ನಿಮಿಷಗಳ ಒಳಗೆ ಬದಲಾಯಿಸುವ ವ್ಯವಸ್ಥೆಯನ್ನು 'ಸನ್ ಮೊಬಿಲಿಟಿ' ಹೊಂದಿದೆ.

ಪೆಟ್ರೋಲ್ ಬಂಕ್‌ಗಳಲ್ಲಿ ಈ ಘಟಕಗಳನ್ನು ಸ್ಥಾಪಿಸಲು ಅನುಮತಿ ದೊರೆತಿದ್ದು, ಭಾರತೀಯ ತೈಲ ನಿಗಮದ (ಐಒಸಿಲ್) ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಕಂಪನಿಯ ಪ್ರತಿನಿಧಿ ಪ್ರಜ್ವಲ್ ಹೆಗಡೆ ಅವರು ತಿಳಿಸಿದರು.

ಮಡಚುವ ಇ-ಬೈಸಿಕಲ್: ಮಡಚುವ ಎಲೆಕ್ಟ್ರಿಕಲ್ ಬೈಸಿಕಲ್‌ಗಳು ಎಕ್ಸ್‌ಪೋದಲ್ಲಿ ಗಮನಸೆಳೆದವು. 67 ಸಾವಿರ ರೂಪಾಯಿಗಳಿಂದ 1 ಲಕ್ಷ ರೂಪಾಯಿ ಮೌಲ್ಯದ ಈ ಬೈಸಿಕಲ್‌ಗಳು ವಿವಿಧ ಮಾದರಿಯಲ್ಲಿ ಲಭ್ಯ. ಪೆಡಲ್ ಮಾಡುವ ಸೌಲಭ್ಯವನ್ನು ಈ ಬೈಸಿಕಲ್‌ಗಳು ಹೊಂದಿವೆ. ಸುಲಭವಾಗಿ ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಹುದಾದ ಈ ಸೈಕಲ್‌ಗಳ ಬ್ಯಾಟರಿಯನ್ನು ಒಂದು ಬಾರಿ ಚಾರ್ಜ್ ಮಾಡಿದರೆ 120 ಕಿಲೋ ಮೀಟರ್‌ವರೆಗೂ ಸಂಚರಿಸಹುದಾಗಿದೆ ಎಂದು ಸ್ವಿಚ್ ಕಂಪನಿ ಪ್ರತಿನಿಧಿ ಪುನೀತ್ ತಿಳಿಸಿದರು.


ಎಲೆಕ್ಟ್ರಿಕಲ್ ಬೈಕ್‌ಗಳ ಮೇಲೆ ಮಹಿಳೆಯರ ಸವಾರಿ

ಸುಲಭ ಘಟಕಗಳು

ಅಪಾರ್ಟ್‌ಮೆಂಟ್‌ಗಳು ಮತ್ತು ಮನೆಗಳಲ್ಲೂ ಅಳವಡಿಸಬಹುದಾದ ಸುಲಭವಾದ ಚಾರ್ಜಿಂಗ್ ಸ್ಟೇಷನ್ ಅನ್ನು 'ಬೋಲ್ಟ್' ಕಂಪನಿ ಅಭಿವೃದ್ಧಿಪಡಿಸಿದೆ. ದೇಶದಾದ್ಯಂತ ಐದು ಸಾವಿರಕ್ಕೂ ಹೆಚ್ಚು ಸ್ಟೇಷನ್‌ಗಳನ್ನು ಈ ಕಂಪನಿ ಸ್ಥಾಪಿಸಿದೆ. ಬೈಕ್ ಮತ್ತು ಕಾರುಗಳಿಗೆ ಸುಲಭವಾಗಿ ಚಾರ್ಜಿಂಗ್ ಮಾಡಬಹುದಾಗಿದೆ.

ಇಂದು ಇ.ವಿ ವಾಹನಗಳ ರ‍್ಯಾಲಿ

'ಇ.ವಿ' ಅಭಿಯಾನದ ಭಾಗವಾಗಿ ಶನಿವಾರ ಬೆಳಿಗ್ಗೆ 6.30ಕ್ಕೆ ವಿಧಾನಸೌಧದಿಂದ ಅರಮನೆ ಮೈದಾನದವರೆಗೆ ರ‍್ಯಾಲಿ ಆಯೋಜಿಸಲಾಗಿದೆ.

ಇಂಧನ ಸಚಿವ ವಿ. ಸುನಿಲ್ ಕುಮಾರ್ ಅವರು ಇ.ವಿ ರ‍್ಯಾಲಿಗೆ ಚಾಲನೆ ನೀಡಲಿದ್ದಾರೆ. 300ಕ್ಕೂ ಹೆಚ್ಚು ಇ.ವಿ ವಾಹನಗಳು ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿವೆ.

'ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಚಾರ್ಜಿಂಗ್ ಘಟಕ'

ಮುಂದಿನ ಐದು ವರ್ಷಗಳಲ್ಲಿ ಬೆಂಗಳೂರಿನಲ್ಲಿ ಕನಿಷ್ಠ 5 ಲಕ್ಷ ಎಲೆಕ್ಟ್ರಿಕಲ್ ವಾಹನಗಳು ಸಂಚರಿಸಲಿವೆ. ಹೀಗಾಗಿ, ಅಗತ್ಯವಿರುವ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದು ಅಗತ್ಯವಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ತಿಳಿಸಿದರು.

ದೇಶದ ಮೊದಲ ಸರ್ಕಾರಿ ಸ್ವಾಮ್ಯದ ವಿದ್ಯುತ್ ವಿತರಣಾ ಕಂಪನಿಯು, ಬೃಹತ್ ಪ್ರಮಾಣದಲ್ಲಿ ಇವಿ ಚಾರ್ಜಿಂಗ್ ಘಟಕಗಳನ್ನು ನಿರ್ವಹಿಸುತ್ತಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರತಿ ಒಂದು ಕಿ.ಮಿ. ವ್ಯಾಪ್ತಿ ಒಳಗೆ ಒಂದು ಚಾರ್ಜಿಂಗ್ ಘಟಕ ಸ್ಥಾಪಿಸುವ ಗುರಿಯನ್ನು ಬೆಸ್ಕಾಂ ಹೊಂದಿದೆ ಎಂದು ಅವರು ತಿಳಿಸಿದರು.

ಆರೋಪಿ ವಕೀಲರಿಗೆ ಹೈಕೋರ್ಟ್ ಜಾಮೀನು

ಸ್ನೇಹಿತನ ಹತ್ಯೆ ಆರೋಪ ಪ್ರಕರಣ

ಬೆಂಗಳೂರು: ಇಬ್ಬರು ಸಾಫ್ಟ್‌ವೇರ್ ಎಂಜಿನಿಯರ್ ಮತ್ತು ವಕೀಲರೊಬ್ಬರ ಮಧ್ಯೆ ನಡೆದ ಹಲ್ಲೆ-ಪ್ರತಿಹಲ್ಲೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಸಾವಿಗೀಡಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆ ಆರೋಪದಡಿ ನ್ಯಾಯಾಂಗ ಬಂಧನದಲ್ಲಿದ್ದ ವಕೀಲರಿಗೆ ಹೈಕೋರ್ಟ್ ಜಾಮೀನು ನೀಡಿದೆ.



ಈ ಕುರಿತಂತೆ ನಗರದ ವಕೀಲ ಎಲ್.ಮಹೇಂದ್ರ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ ಯ ಮೂ ರ್ತಿ ಪಿ.ಮೊಹಮ್ಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿ ಜಾಮೀನು ಮಂಜೂರು ಮಾಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಚ್.ಪವನಚಂದ್ರ ಶೆಟ್ಟಿ, 'ಕಾನೂನಿನ ಪ್ರಕಾರ ಪ್ರತಿಯೊಬ್ಬ ನಾಗರಿಕನಿಗೂ ಆತ್ಮರಕ್ಷಣೆಯ ಹಕ್ಕಿದೆ ಎಂಬುದನ್ನು 1971ರ ವಿದ್ಯಾಸಿಂಗ್ ಪ್ರಕರಣದ ತೀರ್ಪಿನಲ್ಲಿ ವ್ಯಾಖ್ಯಾನಿಸಲಾಗಿದೆ. ಹೀಗಾಗಿ, ಈ ಪ್ರಕರಣದಲ್ಲೂ ಅರ್ಜಿದಾರರು ತಮ್ಮ ಆತ್ಮರಕ್ಷಣೆಗಾಗಿ ಪ್ರತಿಹಲ್ಲೆ ನಡೆಸಿದಾಗ ವ್ಯಕ್ತಿ ಸಾವನ್ನಪ್ಪಿದ್ದಾರೆ. ಆದ್ದರಿಂದ, ಇದು ಉದ್ದೇಶಪೂರ್ವಕ ಕೊಲೆ ಅಲ್ಲವಾದ್ದರಿಂದ ಜಾಮೀನು ಮಂಜೂರು ಮಾಡಬೇಕು' ಎಂದು ಮನವಿ ಮಾಡಿದರು. ವಾದ ವನ್ನು ಮಾನ್ಯ ಮಾಡಿದ ನ್ಯಾಯಪೀಠ ಮಹೇಂದ್ರ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿ ಆದೇಶಿಸಿತು.

ಪ್ರಕರಣವೇನು?: ಮಹೇಂದ್ರ ತಮ್ಮ ಪತ್ನಿ ಮತ್ತು ಎರಡು ವರ್ಷದ ಮಗನ ಜೊತೆ ಹಳೆ ಚಂದಾಪುರದ ಜೆಪಿಆರ್ ಲೇಔಟ್‌ನಲ್ಲಿ 2019ರಿಂದ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಬಾಡಿಗೆಗೆ ಇದ್ದ ಮನೆಯ ಮಾಲೀಕನ ಮಗ ಸಂತೋಷ್ ಕುಮಾರ್ ಮಹೇಂದ್ರ ಅವರ ಪತ್ನಿಯ ಜೊತೆ ಸಲುಗೆ ಬೆಳೆಸಿದ್ದ. ಇದರಿಂದ ಬೇಸತ್ತ ಮಹೇಂದ್ರ ಮನೆಯನ್ನು ಬೇರೆಡೆಗೆ ವರ್ಗಾಯಿಸಿದ್ದರು.

ಈ ಮಧ್ಯೆ ಫ್ರಾನ್ಸ್‌ಗೆ ವ್ಯಾಸಂಗಕ್ಕಾಗಿ ತೆರಳಿದ್ದ ಸಂತೋಷ್ ಕುಮಾರ್ 2022ರ ಏಪ್ರಿಲ್‌ನಲ್ಲಿ ಬೆಂಗಳೂರಿಗೆ ಮರಳಿದಾಗ ಪುನಃ ಮಹೇಂದ್ರ ಅವರ ಪತ್ನಿಯನ್ನು ಭೇಟಿ ಮಾಡಲು ಪ್ರಯತ್ನಿಸಿದ್ದ. ಈ ಉದ್ದೇಶದಿಂದ ತನ್ನ ಸ್ನೇಹಿತ ಅರುಣ್ ಎಂಬ ಮತ್ತೊಬ್ಬ ಸಾಫ್ಟ್‌ವೇರ್ ಎಂಜಿನಿಯರ್ ಜೊತೆ 2022ರ ಏಪ್ರಿಲ್ 13ರಂದು ಮದೀನಾ ಮಸೀದಿ ಬಳಿ ವಾಸವಿದ್ದ ಮಹೇಂದ್ರ ಅವರ ಮನೆಗೆ ಬೆಳಗ್ಗೆಯೇ ಹೋಗಿದ್ದಾಗ ಮೂವರ ನಡುವೆ ಪರಸ್ಪರ ಮಾತಿನ ಚಕಮಕಿ, ಹಲ್ಲೆ-ಪ್ರತಿಹಲ್ಲೆ ನಡೆದಿತ್ತು. ಈ ವೇಳೆ, 'ಮಹೇಂದ್ರ ನನಗೆ ಚಾಕುವಿನಿಂದ ತಿವಿದಿದ್ದರು' ಎಂದು ಅರುಣ್ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದರು.

ತೀವ್ರ ಗಾಯಗೊಂಡ ಅರುಣ್ ಕ್ಯಾಂಬೆಲ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ ಸಾವನ್ನಪ್ಪಿದ್ದರು. ಈ ಸಂಬಂಧ ಪೊಲೀಸರು ಐಪಿಸಿಯ ಕಲಂ 448, 307 (ಕೊಲೆ ಯತ್ನ), 354 ಜೊತೆಗೆ 34ರ ಅಡಿಯಲ್ಲಿ ಹಾಗೂ ಬಾಲನ್ಯಾಯ ಕಾಯ್ದೆ–2015ರ ಕಲಂ 75ರ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು.

'ಎಲೆಕ್ಟ್ರಿಕಲ್ ವೆಹಿಕಲ್' ಅಭಿಯಾನಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಚಾಲನೆ

ಹೈಡ್ರೋಜನ್ ಇಂಧನ ಉತ್ಪಾದನೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಹೈಡ್ರೋಜನ್ ಇಂಧನ ಉತ್ಪಾದಿಸಲು ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ವತಿಯಿಂದ ನಗರದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಇ.ವಿ (ಎಲೆಕ್ಟ್ರಿಕ್ ವೆಹಿಕಲ್) ಅಭಿಯಾನ ಹಾಗೂ 152 ಚಾರ್ಜಿಂಗ್ ಸ್ಟೇಷನ್‌ಗಳಿಗೆ ಚಾಲನೆ ನೀಡಿ ಮಾತನಾಡಿದರು.

'ಹೈಡ್ರೋಜನ್ ಇಂಧನ ತಯಾರಿಸಲು ಈಗಾಗಲೇ ಎರಡು ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಶೀಘ್ರ ಮೂರು ಘಟಕ ಗಳು ಕರ್ನಾ ಟಕದಲ್ಲಿ ಆರಂಭ ವಾಗಲಿವೆ. ಹೈಡ್ರೋಜನ್ ಇಂಧನ ನವೀಕರಿಸಬಹುದಾದ ಇಂಧನಗಳಲ್ಲೇ ಅತ್ಯುತ್ತಮ ವಾಗಿದೆ. ಇದರಿಂದ, ಇಂಧನ ಉಳಿತಾಯವಾಗಲಿದೆ. ಕೇಂದ್ರ ಸರ್ಕಾರದ ನೆರವಿನಿಂದ ಈ ಯೋಜನೆ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ಸಮುದ್ರದ ನೀರಿನಿಂದ ಅಮೋನಿಯಾ ತಯಾರಿಸಲು ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ. ಡಿಎಪಿ ಗೊಬ್ಬರ ತಯಾರಿಸಲು ಅಮೋನಿಯಾವನ್ನು ಅತಿ ಹೆಚ್ಚು

> **ರಾಜ್ಯದಾದ್ಯಂತ 1008 ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲು ಟೆಂಡರ್ ಕರೆಯಲಾಗಿದೆ. ಬೆಂಗಳೂರಿನಲ್ಲಿ 380 ಕಡೆ ಕೇಂದ್ರ ಆರಂಭಿಸಲಾಗಿದೆ.**
> **ವಿ. ಸುನೀಲ್ ಕುಮಾರ್,** ಇಂಧನ ಸಚಿವ

ಬಳಸಲಾಗುತ್ತಿದೆ. ಅಮೋನಿಯಾ ಉತ್ಪಾದಿಸಲು ಒಪ್ಪಂದಕ್ಕೆ ಸಹಿ ಮಾಡಲಾಗಿದೆ. ಭಾರತ ಮತ್ತು ಕೊಲ್ಲಿ ದೇಶಗಳು ಹೊರತುಪಡಿಸಿದರೆ ಬೇರೆಲ್ಲಿಯೂ ಈ ರೀತಿ ತಂತ್ರಜ್ಞಾನ ಇಲ್ಲ' ಎಂದು ಮುಖ್ಯಮಂತ್ರಿಗಳು ತಿಳಿಸಿದರು.

'ಎಲೆಕ್ಟ್ರಿಕ್ ವಾಹನ ಖರೀದಿ ದರ ಜನಸಾಮಾನ್ಯರಿಗೆ ನಿಲುಕುವಂತಿರಬೇಕು. ಉತ್ಪಾದಕರು ಈ ನಿಟ್ಟಿನಲ್ಲಿ ಚಿಂತಿಸಬೇಕು. ಎಲೆಕ್ಟ್ರಿಕಲ್ ವಾಹನಗಳಿಗಾಗಿ ಹೆಚ್ಚಿನ ಚಾರ್ಜಿಂಗ್ ಸ್ಟೇಷನ್‌ಗಳು ಮತ್ತು ಬ್ಯಾಟರಿಗಳನ್ನು ಬದಲಾಯಿಸುವ ವ್ಯವಸ್ಥೆಯ ಕೇಂದ್ರ ಸ್ಥಾಪಿಸಲು ಮಹತ್ವ ನೀಡುವುದು ಅಗತ್ಯವಿದೆ' ಎಂದರು.

'ರಾಜ್ಯ ಸರ್ಕಾರ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಎಲೆಕ್ಟ್ರಿಕಲ್ ವಾಹನ ಬಳಕೆ ಮಾಡುತ್ತಿದೆ. ಮುಂಬರುವ ದಿನಗಳಲ್ಲಿ ಮಲ್ಟಿ ಎಕ್ಸಲ್ ಎಲೆಕ್ಟ್ರಿಕಲ್ ಟ್ರಕ್ ಸಹ ಮಾರುಕಟ್ಟೆಗೆ ಬಿಡುಗಡೆಯಾಗಲಿವೆ. ಆಗ ಸಾರಿಗೆ ಕ್ಷೇತ್ರದಲ್ಲಿ ಬದಲಾವಣೆಗಳಾಗಬಹುದು' ಎಂದರು.



ಬೆಂಗಳೂರಿನಲ್ಲಿ ಶುಕ್ರವಾರ ಆರಂಭವಾದ 'ಇವಿ ಎಕ್ಸ್‌ಪೋದಲ್ಲಿ ಪ್ರದರ್ಶಿಸಲಾದ ಎಲೆಕ್ಟ್ರಿಕಲ್ ಬೈಸಿಕಲ್ – ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ಆರು ಕಂಪನಿಗಳ ಜತೆ ಒಪ್ಪಂದ

ಎಲೆಕ್ಟ್ರಿಕಲ್ ವಾಹನಗಳ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸುವ ಕುರಿತು ಬೆಸ್ಕಾಂ ಆರು ಪ್ರಮುಖ ಖಾಸಗಿ ಕಂಪನಿಗಳ ಜತೆ ಶುಕ್ರವಾರ ಒಡಂಬಡಿಕೆ ಮಾಡಿಕೊಂಡಿದೆ.

ಬೈಕ್ ಕೆಫೆ, ಮೈಲ್‌ಬಾರ್ಕ್, ಬೋಲ್ಟ್, ಬೆನ್‌ಎಸ್‌ಸಿಎಲ್, ಮೈ ಇ.ವಿ ಸ್ಟೋರ್ ಎಲ್‌ಎಲ್‌ಪಿ, ಮತ್ತು ಚಾಮುಂಡಿ ಹೋಟೆಲ್ ಪ್ರೈವೇಟ್ ಲಿಮಿಟೆಡ್ ಜತೆ ಬೆಸ್ಕಾಂ, ಚಾರ್ಜಿಂಗ್ ಸ್ಟೇಷನ್ ನಿರ್ಮಾಣಕ್ಕೆ ಒಪ್ಪಂದ ಮಾಡಿಕೊಂಡಿದೆ. ಒಪ್ಪಂದದ ಅನ್ವಯ ಖಾಸಗಿ ಕಂಪನಿಗಳು ಚಾರ್ಜಿಂಗ್ ಸ್ಟೇಷನ್ ನಿರ್ಮಾಣಕ್ಕೆ ಜಾಗವನ್ನು ಒದಗಿಸುತ್ತವೆ. ಬೆಸ್ಕಾಂ ತನ್ನ ವೆಚ್ಚದಲ್ಲಿ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಿ ನಿರ್ವಹಿಸುತ್ತದೆ. ಜಾಗದ ಮಾಲೀಕರಿಗೆ ಬಂದ ಆದಾಯದಲ್ಲಿ ಹಂಚಿಕೆ ಮಾಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಎಸ್‌ಟಿ ಸಮರ್ಥ ನಿರ್ವಹಣೆ: ಬೊಮ್ಮಾಯಿ

ಬೆಂಗಳೂರು: 'ಜಿಎಸ್‌ಟಿ ತೆರಿಗೆಯನ್ನು ಸಮರ್ಥವಾಗಿ ನಿಭಾಯಿಸಿರುವ ರಾಜ್ಯ ಎಂದರೆ ಕರ್ನಾಟಕ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಾಣಿಜ್ಯ ತೆರಿಗೆ ಇಲಾಖೆಯಿಂದ ಆಯೋಜಿಸಿದ್ದ ಜಿಎಸ್‌ಟಿ ದಿನಾಚರಣೆ ಉದ್ಘಾಟನೆ ಮತ್ತು ಮುಖ್ಯಮಂತ್ರಿ ಪ್ರಶಸ್ತಿ ಪದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತೆರಿಗೆ ವಿಧಾನದಲ್ಲಿನ ಬದಲಾವಣೆಗೆ ಹೊಂದಿಕೊಳ್ಳುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ್ಯದಲ್ಲಿನ ಸದೃಢ, ಪರಿಣತ ತೆರಿಗೆ ಅಧಿಕಾರಿ ಮತ್ತು ಸಿಬ್ಬಂದಿಯಿಂದ ಇಂತಹ ಹೊಸ ವಿಧಾನವನ್ನು ಅಳವಡಿಸಿಕೊಳ್ಳಲು ಸಾಧ್ಯವಾಯಿತು ಎಂದರು.

'ತೆರಿಗೆ ಹೆಚ್ಚಿಸದೆ, ರಾಜಸ್ವ ಸಂಗ್ರಹ ಹೆಚ್ಚಲಿದೆ ಎಂಬ ಅರಿವಿದ್ದೇ ರಾಜ್ಯ ಆಯವ್ಯಯದಲ್ಲಿ ತೆರಿಗೆ ವಿಧಿಸಲಿಲ್ಲ. ಕೋವಿಡ್ ಸಂದರ್ಭದಲ್ಲಿ 2021ರ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಪರಿಶೀಲನೆ ಮಾಡಿದಾಗ ಗುರಿಗಿಂತ ₹2000 ಕೋಟಿ ಕಡಿಮೆ ಇತ್ತು. ಆರು ತಿಂಗಳಲ್ಲಿ ಗುರಿ ಮೀರಿ ₹15,000 ಕೋಟಿ ಸಂಗ್ರಹಿಸಲಾಯಿತು. ಈ ಪೈಕಿ ₹7 ಸಾವಿರ ಕೋಟಿ ಜಿಎಸ್‌ಟಿಯಿಂದಲೇ ಬಂದಿತ್ತು. ಒಳ್ಳೆಯ ಕೆಲಸ ಮಾಡಿರುವ ಅಧಿಕಾರಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಕೆಲಸವನ್ನು ಈ ವರ್ಷ ಆರಂಭಿಸಲಾಗಿದೆ. ಮುಂದೆ ಪ್ರತಿವರ್ಷ ಪ್ರಶಸ್ತಿ ನೀಡಲಾಗುವುದು' ಎಂದು ಹೇಳಿದರು.

ಬೆಂಗಳೂರು ರೇಸ್

ಅಮ್ರೇಲಿ ಗೆಲ್ಲುವ ನಿರೀಕ್ಷೆ

ಜುವೆನೈಲ್ ಸ್ಪ್ರಿಂಟರ್ಸ್ ಮಿಲಿಯನ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಮ್ರೇಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಒಜಾರ್ಕ್ 1, ಡಾನ್ಸ್ ಡೆನ್ 4, ಮೆಗಾ ಸಕ್ಸಸ್ 5
2ನೇ ರೇಸ್: ಇನ್ ಯು ವಿ ಬಿಲೀವ್ 5, ಸ್ವಾರ್ಮಿ ಓಷನ್ 2, ತ್ರಿಪಿಟಾಕ 12
3ನೇ ರೇಸ್: ಬೆಲ್ಲಾಟರ್ 1, ಟ್ರೂಲಿ ಎಪಿಕ್ 3, ಟೈಮೂರ್ 2
4ನೇ ರೇಸ್: ಅಮ್ರೇಲಿ 5, ಅರ್ಟೆಮಿಸ್ ಇಗ್ನೇಸಿಯಾ 6, ಓ ಹನ್ಸಿನಿ 2
5ನೇ ರೇಸ್: ಸೀಝ್ ಪರಿಲಸ್ 4, ಪಿಸ್ಸಾರೊ 2, ಸಕ್ಸಸ್ 7
6ನೇ ರೇಸ್: ಪಾಲಿಶ್ಡ್ ಗರ್ಲ್ 1, ಯೂಕಾನ್ 2, ನಿಕೋಲಿನ 4
7ನೇ ರೇಸ್: ಆಲ್‌ಟೇರ್ 6, ರೆಡ್ ಲೂಸಿಫರ್ 5, ಪೋರ್ಟ್ ಆಫ್ ಬ್ಯೂಟಿ 4

ಉತ್ತಮ ಬೆಟ್: ಪಾಲಿಶ್ಡ್ ಗರ್ಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಜುಲೈ 6ರವರೆಗೆ ಕರಾವಳಿಯಲ್ಲಿ ಮಳೆ– ಮುನ್ಸೂಚನೆ

ಹಾರಂಗಿಗೆ ಹೆಚ್ಚಿನ ನೀರು, ಪ್ರವಾಹದ ಮುನ್ನೆಚ್ಚರಿಕೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಳೆ ಶುಕ್ರವಾರವೂ ಮುಂದುವರಿದಿದೆ. ಹಾರಂಗಿ ಜಲಾಶಯಕ್ಕೆ 5,785 ಕ್ಯುಸೆಕ್‌ನಷ್ಟು ನೀರು ಹರಿದು ಬರುತ್ತಿರುವುದರಿಂದ ಯಾವುದೇ ಕ್ಷಣದಲ್ಲೂ ನೀರನ್ನು ಹೊರಬಿಡಬಹುದಾಗಿದ್ದು, ತಗ್ಗು ಪ್ರದೇಶದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ಜಿಲ್ಲಾಡಳಿತ ಮುನ್ನೆಚ್ಚರಿಕೆ ನೀಡಿದೆ. ಸದ್ಯ, 2,859 ಗರಿಷ್ಠ ಅಡಿಯ ಜಲಾಶಯದಲ್ಲಿ ಈಗಾಗಲೇ 2,855.48 ಅಡಿಗಳಷ್ಟು ನೀರು ತುಂಬಿದೆ.

ಗಾಳಿ ರಭಸದಿಂದ ಬೀಸುತ್ತಿರುವುದರಿಂದ ಮಡಿಕೇರಿ– ಮಂಗಳೂರು ರಸ್ತೆಯಲ್ಲಿ ಕಾಟಕೇರಿ ಸಮೀಪ ಮರವೊಂದು ಉರುಳಿ ಬಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತ್ತು. ಮಡಿಕೇರಿಯಲ್ಲಿ ದಿನವಿಡಿ ಮಂಜು ಕವಿದ ವಾತಾವರಣವಿದ್ದು, ವಾಹನಗಳು ಮಧ್ಯಾಹ್ನದ ವೇಳೆಯಲ್ಲೂ ದೀಪಗಳನ್ನು ಹಾಕಿಕೊಂಡು ಸಂಚರಿಸಿದವು. ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ, ಗೋಣಿಕೊಪ್ಪಲು, ಶನಿವಾರಸಂತೆ ಭಾಗಗಳಲ್ಲಿ ಮಳೆ ಮುಂದುವರಿದಿದೆ.

ಕಡಲ್ಕೊರೆತದ ಭೀತಿ (ಮಂಗಳೂರು ವರದಿ): ಕರಾವಳಿಯಲ್ಲಿ ಮಳೆಯ ಅಬ್ಬರ ಶುಕ್ರವಾರ ತುಸು ಕಡಿಮೆಯಾಗಿದೆ. ಆದರೆ, ಮುಂಗಾರು ಚುರುಕಾಗುತ್ತಿದ್ದಂತೆಯೇ ಅರಬ್ಬೀ ಸಮುದ್ರವು ಪ್ರಕ್ಷುಬ್ಧಗೊಂಡಿದ್ದು, ಕಡಲ್ಕೊರೆತದ ಭೀತಿ ಎದುರಾಗಿದೆ. ಜುಲೈ 6ರವರೆಗೂ ನಿತ್ಯವೂ ಕರಾವಳಿ ಪ್ರದೇಶದಲ್ಲಿ ಭಾರಿ ಮಳೆಯಾಗಲಿದೆ ಹವಾಮಾನ ಇಲಾಖೆ ಹೇಳಿದೆ.

'ಬಾದಾಮಿಯಿಂದ ಸಿದ್ದರಾಮಯ್ಯ ಸ್ಪರ್ಧೆ ಕಷ್ಟ'

ಬಾದಾಮಿ (ಬಾಗಲಕೋಟೆ ಜಿಲ್ಲೆ): 'ತಂದೆಯವರಿಗೆ ಬಾದಾಮಿ ಕ್ಷೇತ್ರ ದೂರವಾಗುತ್ತದೆ. ಸಾರ್ವಜನಿಕರನ್ನು ಭೇಟಿಯಾಗಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬಾದಾಮಿ ಕ್ಷೇತ್ರದಿಂದ ಮತ್ತೆ ಸ್ಪರ್ಧಿಸುವುದು ಕಷ್ಟ' ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿದರು.

ಮುಖಂಡರೊಂದಿಗೆ ಪಕ್ಷ ಸಂಘಟನೆ ಬಗ್ಗೆ ಚರ್ಚಿಸಿ ಅವರು ಮಾತನಾಡಿದರು. 'ಮುಂದಿನ ವಿಧಾನಸಭೆ ಚುನಾವಣೆಯಲ್ಲಿಯೂ ಇಲ್ಲಿಂದಲೇ ಸ್ಪರ್ಧಿಸಲಿ' ಎಂದು ಮುಖಂಡ ಎಂ.ಬಿ. ಹಂಗರಗಿ, ಹೊಳೆಬಸು ಶೆಟ್ಟರ್ ಒತ್ತಾಯಿಸಿದರು.'ಕಷ್ಟವಾದರೂ ಬಾದಾಮಿಯಲ್ಲಿಯೇ ಸ್ಪರ್ಧಿಸಲು ಹೇಳುವೆ' ಎಂದು ಯತೀಂದ್ರ ಉತ್ತರಿಸಿದರು.

ಸಂತ ಜೋಸೆಫರ ಬಾಲಕರ ಪ್ರೌಢಶಾಲೆಯಲ್ಲಿ ಕಾರ್ಯಕ್ರಮ

ಹುತಾತ್ಮ ಯೋಧರಿಗೆ ಗೌರವ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತ ಜೋಸೆಫರ ಬಾಲಕರ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳಾಗಿದ್ದ, ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಭಾರತೀಯ ವಾಯುಪಡೆಯ ಲೆಫ್ಟಿನೆಂಟ್ ಬಾಬುಲ್ ಗುಹಾ ಮತ್ತು ಲೆಫ್ಟಿನೆಂಟ್ ಕೃಷ್ಣಕುಮಾರ್ ಮೋಹನ್ ಅವರಿಗೆ ಶುಕ್ರವಾರ ಗೌರವ ನಮನ ಸಲ್ಲಿಸಲಾಯಿತು.

ಸಂತ ಜೋಸೆಫರ ಪ್ರೌಢಶಾಲೆ ಮತ್ತು ಹಳೆ ವಿದ್ಯಾರ್ಥಿಗಳ ಸಂಘದಿಂದ ಹುತಾತ್ಮ ಯೋಧರಿಗೆ ಗೌರವ ಸಮರ್ಪಿಸಲಾಯಿತು. ಲೆಫ್ಟಿನೆಂಟ್ ಗುಹಾ 1952ರಲ್ಲಿ, ಲೆಫ್ಟಿನೆಂಟ್ ಮೋಹನ್ 1959ರಲ್ಲಿ ಸಂತ ಜೋಸೆಫರ ಶಾಲೆಯ ವಿದ್ಯಾರ್ಥಿಗಳಾಗಿದ್ದರು. ಪ್ರಸ್ತುತ ಶಾಲೆಯ 15 ಹಳೆಯ ವಿದ್ಯಾರ್ಥಿಗಳು ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಸಂಘದ ಅಧ್ಯಕ್ಷ ಡಾ.ಪ್ರವೀಣ್ ರಾಡ್ರಿಗ್ಸ್ ಮಾಹಿತಿ ನೀಡಿದರು.


ಸಂತ ಜೋಸೆಫರ ಪ್ರೌಢಶಾಲೆ ಮತ್ತು ಹಳೆ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರವೀಣ್ ರಾಡ್ರಿಗ್ಸ್ ಅವರು ಲೆಫ್ಟಿನೆಂಟ್ ಗುಹಾ ಪುತ್ರ ನ್ಯಾಯಮೂರ್ತಿ ಅರಿಂದಮ್ ಸಿನ್ಹಾ ಅವರಿಗೆ ನೆನಪಿನ ಕಾಣಿಕೆ ನೀಡಿದರು –ಪ್ರಜಾವಾಣಿ ಚಿತ್ರ

ಶಾಲೆಯಲ್ಲಿ 1921ರಲ್ಲಿ ಯುದ್ಧ ಸ್ಮಾರಕವನ್ನು ಉದ್ಘಾಟಿಸಲಾಗಿತ್ತು. ಇದರಲ್ಲಿ ಹುತಾತ್ಮರಾದ ಎಲ್ಲಾ ವಿದ್ಯಾರ್ಥಿಗಳ ಹೆಸರುಗಳಿವೆ ಎಂದು ಹೇಳಿದರು.

ಲೆಫ್ಟಿನೆಂಟ್ ಬಾಬುಲ್ ಗುಹಾ ಅವರ ಮಗ, ಒಡಿಶಾ ಹೈಕೋರ್ಟ್ ನ್ಯಾಯಮೂರ್ತಿ ಅರಿಂದಮ್ ಸಿನ್ಹಾ ಮಾತನಾಡಿ, ವಾಯುಪಡೆ ಪಯಣದಲ್ಲಿ ತಮ್ಮ ತಂದೆ ಸೇವೆಯನ್ನು ಹೆಮ್ಮೆಯಿಂದ ಹೇಳಿಕೊಂಡರು. 68ನೇ ಪೈಲಟ್‌ಗಳ ತಂಡದಲ್ಲಿ ತರಬೇತಿ ಪಡೆದು, ಅದಂಪುರದ ಸ್ಕ್ವಾಡ್ರನ್ 1ರಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದರು.

1965ರ ಯುದ್ಧದಲ್ಲಿ ನಾಲ್ಕು ವಿಮಾನಗಳು ಭಾಗವಹಿಸಬೇಕಾಗಿತ್ತು. ಆದರೆ ತಾಂತ್ರಿಕ ಸಮಸ್ಯೆಯಿಂದ ಕೇವಲ ಎರಡು ಯುದ್ಧ ವಿಮಾನಗಳು ಪಾಕಿಸ್ತಾನದ ಸರ್ಗೋಧಾ ವಾಯುನೆಲೆ ಮೇಲೆ ದಾಳಿ ಮಾಡಿದವು. ಆಗ ಕ್ಷಿಪಣಿ ದಾಳಿಯಿಂದ ಬಾಬುಲ್ ಗುಹಾ ಹುತಾತ್ಮರಾದರು ಎಂದು ಸ್ಮರಿಸಿದರು.

ಏರ್ ಮಾರ್ಷಲ್ ರಾಜಕುಮಾರ್ ಮಾತನಾಡಿದರು. ಲೆಫ್ಟಿನೆಂಟ್ ಕೃಷ್ಣಕುಮಾರ್ ಮೋಹನ್ ಅವರ ಪತ್ನಿ ಕವಿತಾ ಮೋಹನ್ ಮತ್ತು ಅವರ ಮಗ ಇದ್ದರು.



ಮೂತ್ರದ ಅಸಂಯಮ

ಮಾಡಿ ಕೆಗೆಲ್ಸ್ ವ್ಯಾಯಾಮ

ಡಾ. ವೀಣಾ ಎಸ್. ಭಟ್

ಮಂಗಳಾಗೆ 38 ವರ್ಷ, 2 ಹೆರಿಗೆ ಸಹಜವಾಗಿ ಆಗಿದೆ. ಈಗ ಅವಳಿಗೆ ಕೆಮ್ಮಿದರೆ, ಸೀನಿದರೆ ಮೂತ್ರ ತೊಟ್ಟಿಕ್ಕುತ್ತದೆ. ಎಲ್ಲಿಗೆ ಹೋಗುವುದಕ್ಕೂ ಮುಜುಗರ. ಹೇಳಿಕೊಳ್ಳಲು ಸಂಕೋಚ.

ಗೀತಾಳಿಗೆ 42 ವರ್ಷ, ಗರ್ಭಕೋಶದ ಶಸ್ತ್ರಚಿಕಿತ್ಸೆಯಾಗಿ 2 ವರ್ಷಗಳಾಗಿವೆ. ಅವಳಿಗೆ ಪದೇ ಪದೇ ಮೂತ್ರಕ್ಕೆ ಹೋಗಬೇಕೆನಿಸುತ್ತದೆ. ಒಮ್ಮೊಮ್ಮೆ ಶೌಚಾಲಯಕ್ಕೆ ಹೋಗಿ ಕುಳಿತುಕೊಳ್ಳುವ ಮೊದಲೇ ಮೂತ್ರ ಬಂದೇ ಬಿಡುತ್ತದೆ. ಇದರಿಂದ ಅವಳು ಖಿನ್ನತೆಗೆ ಒಳಗಾಗಿದ್ದಾಳೆ.

ಅಪರ್ಣ 8 ತಿಂಗಳ ಗರ್ಭಿಣಿ. ಅವಳಿಗೆ ಜೋರಾಗಿ ಮಾತನಾಡಿದರೆ, ಕೆಮ್ಮಿದರೆ, ಸೀನಿದರೆ ಮೂತ್ರ ಸೋರುವಿಕೆಯಾಗುತ್ತದೆ. ಹೆರಿಗೆಯ ನಂತರವೂ ಇದು ಹೀಗೆಯೇ ಮುಂದುವರೆಯುತ್ತದೆಯಾ? ಎಂಬ ಆತಂಕದಿಂದ ಕಂಗಾಲಾಗಿದ್ದಾಳೆ.

> ಅನಿಯಂತ್ರಿತ ಮೂತ್ರ ವಿಸರ್ಜನೆ(ಮೂತ್ರದ ಅಸಂಯಮ)– ಬಹಳಷ್ಟು ಮಹಿಳೆಯರಲ್ಲಿ ಕಾಡುವ ಸಮಸ್ಯೆ. ಇದನ್ನು ನಿಯಂತ್ರಿಸಲು ಹಲವು ಚಿಕಿತ್ಸೆಗಳಿವೆ. ಚಿಕಿತ್ಸೆಯಲ್ಲದೇ ಜೀವನಶೈಲಿಯ ಬದಲಾವಣೆ, ಸಮತೂಕ ಕಾಯ್ದುಕೊಳ್ಳುವ ಜೊತೆಗೆ, ನಿರಂತರವಾಗಿ ಕೆಗೆಲ್ಸ್ ವ್ಯಾಯಾಮ ಮಾಡುವುದರಿಂದ ಹೆಚ್ಚಿನ ಸಂದರ್ಭಗಳಲ್ಲಿ ಇದನ್ನು ತಡೆಗಟ್ಟಬಹುದು.

ಬಹಳಷ್ಟು ಮಹಿಳೆಯರು ಈ ರೀತಿಯ ಮೂತ್ರದ ಅಸಂಯಮ ಅಥವಾ ಮೂತ್ರ ವಿಸರ್ಜನೆ ಸಮಸ್ಯೆ ಎದುರಿಸುತ್ತಿದ್ದಾರೆ. ಒಂದಲ್ಲಾ ಒಂದು ಸಂದರ್ಭದಲ್ಲಿ ಇಂಥ ಸಮಸ್ಯೆ ಉಂಟಾಗಿ, ಅದನ್ನು ಹೇಳಿಕೊಳ್ಳಲು ಆಗದೇ, ಅನುಭವಿಸಲೂ ಸಾಧ್ಯವಾಗದೇ ಕೆಲವರು ಖಿನ್ನತೆಗೂ ಒಳಗಾಗುತ್ತಾರೆ.

ಏನಿದು ಮೂತ್ರದ ಅಸಂಯಮ?

ಸಾಮಾನ್ಯವಾಗಿ ಮಹಿಳೆಯು ಹೊರಗಡೆ ಕೆಲಸಕ್ಕೆ ಹೋಗಿದ್ದಾಗ ಮತ್ತು ಬೇರೆ ಕೆಲಸದಲ್ಲಿ ನಿರತರಾಗಿದ್ದಾಗ, ಮೂತ್ರಕೋಶ ತುಂಬಿದರೂ ಸಹಜವಾಗಿ ಸ್ವಲ್ಪ ಹೊತ್ತು ಮೂತ್ರ ವಿಸರ್ಜನೆಯನ್ನು ತಡೆದುಕೊಳ್ಳುತ್ತಾಳೆ. ಇಂತಹ ಮೂತ್ರ ವಿಸರ್ಜನೆ ನಿಯಂತ್ರಣವನ್ನು ಕಾಯ್ದುಕೊಳ್ಳುವ ಕ್ರಿಯೆಯೂ ಪೆಲ್ವಿಕ್ (ಅಸ್ಥಿಕುಹರ), ನರ, ಮಾಂಸ ಖಂಡಗಳ ಮತ್ತು ಇನ್ನಿತರ ಅಂಶಗಳನ್ನೊಳಗೊಂಡ ಸಂಕೀರ್ಣವಾದ ಸಮನ್ವಯವನ್ನು ಹೊಂದಿರುತ್ತವೆ. ಈ ಪ್ರಕ್ರಿಯೆಯಲ್ಲಿ ವ್ಯತ್ಯಾಸವಾದಾಗ ಮೂತ್ರದ ಅಸಂಯಮ(ಅನಿಯಂತ್ರಿತ ಮೂತ್ರ ವಿಸರ್ಜನೆ) ಅಥವಾ ಮೂತ್ರ ಸೋರುವಿಕೆ ಉಂಟಾಗುತ್ತದೆ.



ಶೇ 70ರಷ್ಟು ಸಂದರ್ಭಗಳಲ್ಲಿ ಕೆಮ್ಮಿದಾಗ, ಸೀನಿದಾಗ, ನಕ್ಕಾಗ, ಭಾರ ಎತ್ತಿದಾಗ ಈ ರೀತಿಯ ಮೂತ್ರ ಸೋರುವಿಕೆ ಉಂಟಾಗಬಹುದು. ಇದನ್ನು ಒತ್ತಡದ ಮೂತ್ರದ ಅಸಂಯಮ (ಸ್ಟ್ರೆಸ್ ಇನ್‌ಕಾಂಟಿನೆನ್ಸ್) ಎನ್ನುತ್ತೇವೆ. ಇನ್ನು ಕೆಲವರಲ್ಲಿ ಶೌಚಾಲಯ ತಲುಪುವ ಮೊದಲೇ ಅವಸರವಾಗಿ ಮೂತ್ರ ವಿಸರ್ಜನೆಯಾಗಿಬಿಡುತ್ತದೆ (ಅರ್ಜ್-ಇನ್‌ಕಾಂಟಿನೆನ್ಸ್), ಕೆಲವರಿಗೆ ಇವೆರಡು ಒಟ್ಟಾಗಿಯೂ ಇರಬಹುದು. ಯಾವ ಬಗೆಯ ತೊಂದರೆಯೇ ಇರಲಿ ನರಳುವಿಕೆಯಂತೂ ನಿಶ್ಚಿತ.

ಯಾರಲ್ಲಿ ಇಂಥ ಸಮಸ್ಯೆಗಳು ಹೆಚ್ಚು?

ವಯಸ್ಸಾದ ಹಾಗೆ ಈ ಸಮಸ್ಯೆ ಹೆಚ್ಚಾಗುತ್ತಾ ಹೋಗುತ್ತದೆ. 60ರಿಂದ 80 ವಯೋಮಾನದ ಶೇ 30ಕ್ಕೂ ಹೆಚ್ಚು ಮಹಿಳೆಯರಲ್ಲಿ ಈ ಸಮಸ್ಯೆ ಕಂಡುಬರಬಹುದು. ಅತಿಯಾದ ತೂಕವಿರುವವರಲ್ಲಿ, ಮುಟ್ಟು ನಿಂತವರಲ್ಲಿ ಇದು ಕಂಡುಬರುತ್ತದೆ. ಗರ್ಭಸ್ಥ ಶಿಶು ದೊಡ್ಡದಾಗಿದ್ದು ಸಹಜ ಹೆರಿಗೆ ಕಷ್ಟವಾದಾಗ ಗರ್ಭಕೋಶದ ಬಾಯಿ ಅಗಲವಾಗುವ ಮುನ್ನವೇ ಹೆರಿಗೆಯಲ್ಲಿ ಅತಿಯಾಗಿ ಮುಕ್ಕಿದಾಗ ಹೆರಿಗೆ ಕಷ್ಟಕರವಾಗಿ ಪೆಲ್ವಿಸ್‌ನ ಮಾಸಪೇಶಿಗಳು ಹಾಗೂ ನರವ್ಯೂಹ ಘಾಸಿಗೊಳಗಾಗಿ ಈ ರೀತಿಯ ತೊಂದರೆ ಉಂಟಾಗಬಹುದು. ಕೆಲವರಲ್ಲಿ ಅನುವಂಶೀಯವಾಗಿಯೇ ಈ ಸಮಸ್ಯೆ ಇರಬಹುದು. ಇನ್ನು ಕೆಲವರು ದೀರ್ಘಾವಧಿ ಕೆಮ್ಮು, ಶ್ವಾಸಕೋಶದ ಕಾಯಿಲೆ ಇರುವವರಲ್ಲಿ, ಕೃತಕವಾಗಿ ಗರ್ಭಕೋಶ ತೆಗೆಸಿಕೊಂಡವರಲ್ಲಿ, ಧೂಮಪಾನ ಮಾಡುವವರಲ್ಲಿ, ಹೀಗೆ ಹಲವು ಕಾರಣಗಳು ಮೂತ್ರ ಅಸಂಯಮಕ್ಕೆ ಅಪಾಯಕಾರಿ ಅಂಶಗಳೆಂದು ಗುರುತಿಸಲ್ಪಟ್ಟಿವೆ.

ಈ ಸಮಸ್ಯೆಗೆ ಪರಿಹಾರವೇನು?

ಇತ್ತೀಚೆಗಂತೂ ಮೂತ್ರ ಅಸಂಯಮ(ಅನಿಯಂತ್ರಿತ ಮೂತ್ರ ವಿಸರ್ಜನೆ) ನಿಯಂತ್ರಣಕ್ಕೆ ಬಹಳಷ್ಟು ಚಿಕಿತ್ಸಾ ವಿಧಾನಗಳಿವೆ. ವೈದ್ಯರು ಈ ಬಗ್ಗೆ ಸಮಸ್ಯೆ ಇರುವವರಿಂದ ಸೂಕ್ತ ವಿವರಗಳನ್ನು ಪಡೆದು ಅಗತ್ಯ ಪರೀಕ್ಷೆಗಳನ್ನು ನಡೆಸಿ ಸಲಹೆ ಸೂಚನೆ ಕೊಟ್ಟು ಹಾಗೂ ಚಿಕಿತ್ಸಾ ವಿಧಾನಗಳನ್ನು ನಿರ್ಣಯಿಸುತ್ತಾರೆ.

ಮೊದಲನೆಯದಾಗಿ ಜೀವನಶೈಲಿ ಬದಲಾವಣೆಯಿಂದ ಹೆಚ್ಚಿನ ಸಂದರ್ಭಗಳಲ್ಲಿ ಚಿಕಿತ್ಸೆ ಸಿಗುತ್ತದೆ.

- ನಿಮ್ಮ ತೂಕ ಅಧಿಕವಾಗಿದ್ದರೆ ಅದನ್ನು ಕಡಿಮೆ ಮಾಡಿಕೊಳ್ಳಿ. ಸಮತೂಕ ಹೊಂದುವುದರಿಂದ ಶೇ.70 ರಷ್ಟು ಪರಿಣಾಮವಾಗುತ್ತದೆ.
- ಕಾಫಿ, ಚಹಾ, ಕೋಲಾ, ಕಾರ್ಬನ್‌ಯುಕ್ತ ಪಾನೀಯಗಳನ್ನು ಸೇವಿಸುತ್ತಿದ್ದರೆ, ಅದನ್ನು ಕಡಿಮೆ ಮಾಡಿ. ತ್ಯಜಿಸಿದರೆ ಇನ್ನೂ ಒಳ್ಳೆಯದು.
- ಧೂಮಪಾನ, ಮದ್ಯಪಾನ ಅಭ್ಯಾಸವಿದ್ದರೆ ಬಿಟ್ಟುಬಿಡಿ.
- ಮಲಬದ್ಧತೆಯಂತಹ ಸಮಸ್ಯೆಗಳಿದ್ದರೆ ಹೆಚ್ಚು ನಾರಿನಾಂಶವುಳ್ಳ ಆಹಾರ ಸೇವಿಸಿ ಸರಿಪಡಿಸಿಕೊಳ್ಳಿ.
- ಅಗತ್ಯವಿದ್ದಷ್ಟು ನೀರಿನಂಶವನ್ನು ದೇಹಕ್ಕೆ ಸೇರಿಸಿ. ಕೆಲವರು ಅಗತ್ಯಕ್ಕಿಂತ ಹೆಚ್ಚು ನೀರು ಸೇವಿಸುವವರು ಇದ್ದಾರೆ. ಇಂತಹ ಸಮಸ್ಯೆಯನ್ನು ತಡೆಗಟ್ಟಲು ಪ್ರತಿ ಮಹಿಳೆಯರು ದಿನ ನಿತ್ಯ ಕೆಗೆಲ್ಸ್(Kegels) ವ್ಯಾಯಾಮ ಮಾಡಬೇಕು.

ಪ್ರತಿ ಮಹಿಳೆ ಗರ್ಭಧಾರಣೆಗೆ ಮೊದಲೇ ಪೆಲ್ವಿಸ್ ಮಾಂಸಖಂಡಗಳ ಬಲ ಪಡಿಸುವ ಕೆಗೆಲ್ಸ್ ವ್ಯಾಯಾಮ ಆರಂಭಿಸಿ ಹೆರಿಗೆಯ ನಂತರವೂ (ಸಿಝೇರಿಯನ್ ಆದರೂ ಕೂಡ 24 ಗಂಟೆಗಳೊಳಗಾಗಿ ವ್ಯಾಯಾಮ ಮಾಡಿ) ನಿಯಮಿತವಾಗಿ ಮುಂದುವರಿಸಬೇಕು. ಇದರಿಂದ ಪೆಲ್ವಿಕ್ ಸ್ನಾಯುಗಳು ಬಲಗೊಳ್ಳುತ್ತವೆ.

ಕೆಗೆಲ್ಸ್ ವ್ಯಾಯಾಮ ಮಾಡುವುದು ಹೇಗೆಂದರೆ; ಮೊದಲು ಮೂತ್ರವಿಸರ್ಜನೆ ಮಾಡಿ, ನಂತರ ಮಲಮೂತ್ರವಿಸರ್ಜನೆ ಕ್ರಿಯೆಯನ್ನು ಮಾಡುವ ಹಾಗೆ ಮುಕ್ಕಿ ನಂತರ ಮೂತ್ರದ್ವಾರ, ಯೋನಿದ್ವಾರ ಹಾಗೂ ಗುದದ್ವಾರ ಈ ಮೂರನ್ನು ಒಂದೇ ಬಾರಿಗೆ ಬಿಗಿಯಾಗಿ ಒಳಗೆ ಹಿಡಿದಿಟ್ಟುಕೊಂಡು (ಕನಿಷ್ಠ 5 ಸೆಕೆಂಡಾದರೂ) ನಂತರ ಮಾಂಸಖಂಡಗಳನ್ನು ಸಡಿಲಿಸಬೇಕು. ಹೀಗೆ ಮಾಡುವಾಗ ತೊಡೆಯ ಹಾಗೂ ಹೊಟ್ಟೆಯ ಮಾಂಸಖಂಡಗಳನ್ನು ಉಪಯೋಗಿಸಬಾರದು. ಪ್ರತಿಬಾರಿಯೂ ಮೂತ್ರಮಾಡಿದ ನಂತರ ಈ ರೀತಿ 10 ರಿಂದ 15 ಬಾರಿಯಾದರೂ ಮಾಡಬೇಕು. ಒಟ್ಟು ದಿನಕ್ಕೆ 50 ರಿಂದ 100 ಬಾರಿ ಮಾಡಬೇಕು. ಇದನ್ನು ಕೂತಾಗ, ನಿಂತಾಗ ಯಾವಾಗಬೇಕಾದರೂ ಮಾಡಬಹುದು. ಟಿ.ವಿ ನೋಡಬೇಕಾದರೆ, ಅಡುಗೆ ಮನೆಯಲ್ಲೂ, ಕಚೇರಿಗಳಲ್ಲಿ, ಎಲ್ಲಿ ಬೇಕಾದರೂ ಮಾಡಬಹುದು. ಪರಿಣಾಮ ತಿಳಿಯಬೇಕಾದರೆ ಕನಿಷ್ಠ 12 ವಾರಗಳಾದರೂ ಆಗಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಮೂತ್ರ ಸೋರುವಿಕೆ ಸರಿಹೋಗುತ್ತದೆ. ಪ್ರಾಣಾಯಾಮದಲ್ಲಿ ಮೂಲಬಂಧ ಮಾಡಿದಾಗಲೂ ಇದೇ ಪರಿಣಾಮವಾಗುತ್ತದೆ.

ಬ್ಲಾಡರ್ ಟ್ರೈನಿಂಗ್ ಶಾಲೆ /ಡ್ರಿಲ್ ಥೆರಪಿಯಲ್ಲಿ ಸಮಯವನ್ನು ನೋಡಿಕೊಂಡು ಮೂತ್ರವಿಸರ್ಜನೆಯ ನಡುವಿನ ಅಂತರವನ್ನು ಡೈರಿಯಲ್ಲಿ ಬರೆದಿಟ್ಟುಕೊಂಡು ವಾರ ವಾರ ಅದನ್ನು ಹೆಚ್ಚಿಸುತ್ತಾ ಹೋಗುತ್ತಾರೆ. ಕೆಗೆಲ್ಸ್ ವ್ಯಾಯಾಮದ ಜೊತೆಗೆ ಈ ಚಿಕಿತ್ಸೆಯೂ ಅರ್ಜ್ ಇನ್‌ಕಾಂಟಿನೆನ್‌ಲ್ಲಿ (ಅವಸರದ ಮೂತ್ರ ಅಸಂಯಮ) ಇದು ಸಹಾಯವಾಗುತ್ತದೆ. ಇಂತಹ ಚಿಕಿತ್ಸೆಗಳಿಗೂ ಬಗ್ಗದೇ ಹೋದಾಗ ವೈದ್ಯರು ಕೆಲವು ಮಹಿಳೆಯರಿಗೆ ಮುಟ್ಟು ನಿಂತಮೇಲೆ ಸ್ಥಳೀಯವಾಗಿ ಈಸ್ಟ್ರೋಜನ್ ಕ್ರೀಮ್ ಬಳಸಲು ಸೂಚಿಸುತ್ತಾರೆ. ಇನ್ನು ಕೆಲವರಿಗೆ ಸೂಕ್ತ ಮಾತ್ರೆಗಳನ್ನು ಬಳಸಲು ಹೇಳುತ್ತಾರೆ. ಮಾತ್ರೆಗಳಿಗೂ ಬಗ್ಗದಾಗ ಕೆಲವೊಮ್ಮೆ ಶಸ್ತ್ರಚಿಕಿತ್ಸೆಯನ್ನೂ ಬೇಕಾಗಬಹುದು. ಅದನ್ನು ತಜ್ಞವೈದ್ಯರು ಸೂಕ್ತಪರೀಕ್ಷೆ ಮಾಡಿ ನಿರ್ಧರಿಸುತ್ತಾರೆ.

ಇವುಗಳಲ್ಲದೆ ಇತ್ತೀಚೆಗೆ ಎಲೆಕ್ಟ್ರೋ ಅಕ್ಯೂಪಂಕ್ಚರ್, ಇಂಟ್ರಾವೆಸೈಕಲ್ ಬಲೂನ್ ಡಿವೈಸ್, ಎಲೆಕ್ಟ್ರಿಕಲ್, ಪಲ್ಸ್ಡ್ ಮ್ಯಾಗ್ನೆಟಿಕ್ ಸ್ಟಿಮುಲೇಶನ್... ಹೀಗೆ ಹಲವು ವಿಧಾನಗಳು ಬಳಕೆಗೆ ಬರುತ್ತಿವೆ.

ಅದೇನೇ ಇರಲಿ ಮುಂಜಾಗ್ರತೆಯೇ ಮದ್ದು ಎನ್ನುವ ಹಾಗೆ ಪ್ರತಿ ಮಹಿಳೆ ತನ್ನ ಜೀವನಶೈಲಿಯನ್ನು ಸುಧಾರಿಸಿಕೊಳ್ಳುತ್ತಾ, ಸಮತೂಕ ಕಾಯ್ದುಕೊಳ್ಳುತ್ತಾ, ಗರ್ಭಧಾರಣೆಗೂ ಮುನ್ನ ಮತ್ತು ಹೆರಿಗೆಯ ನಂತರವೂ ಪ್ರತಿನಿತ್ಯ ತಪ್ಪದೇ ಕೆಗೆಲ್ಸ್ ವ್ಯಾಯಾಮವನ್ನು ಮಾಡಿದಾಗ ಮೂತ್ರದ ಅಸಂಯಮ ತಡೆಗಟ್ಟುವುದಷ್ಟೇ ಅಲ್ಲ, ಮೂತ್ರ ಕೋಶ ಜಾರದ ಹಾಗೆಯೂ ಸಹಾಯವಾಗುತ್ತದೆ. ಹಾಗಾದರೆ ತಡ ಮಾಡಬೇಡಿ. ಪ್ರತಿಯೊಬ್ಬ ಮಹಿಳೆಯೂ ಕೆಗೆಲ್ಸ್ ಮಾಡುವ ನಿರ್ಧಾರವನ್ನು ಈಗಲೇ ಮಾಡಿ.

(ಲೇಖಕರು ಪ್ರಸೂತಿ ತಜ್ಞರು)



ಎವರೆಸ್ಟ್ ಮ್ಯಾರಥಾನ್ ವೇಳೆ ಅಶ್ವಿನಿ

ಮ್ಯಾರಥಾನ್ ಬಲ; ಸಾಧನೆಯ 'ಶಿಖರ'ವೇರುವ ಛಲ

ಬಸವರಾಜ ದಳವಾಯಿ

ಹವ್ಯಾಸವಾಗಿ ಆರಂಭಿಸಿದ ಮ್ಯಾರಥಾನ್‌ನ ತುಡಿತ ಐಟಿ ಕಂಪೆನಿಯ ವೃತ್ತಿ ತೊರೆಯುವಂತೆ ಮಾಡಿತು. ದೂರ ಅಂತರದ ಓಟದಲ್ಲಿ ಮಿನುಗುತ್ತಿರುವ ಪ್ರತಿಭೆ ಅಶ್ವಿನಿ ಗಣಪತಿ ಭಟ್ ಅವರಿಗೆ ಈ ಕ್ರೀಡೆಯಲ್ಲಿ ಶ್ರೇಷ್ಠ ಸಾಧನೆಯ ತವಕ.

ನೇಪಾಳದಲ್ಲಿ ಇದೇ ವರ್ಷದ ಮೇ 29ರಂದು ನಡೆದ ಎವರೆಸ್ಟ್ ಮ್ಯಾರಥಾನ್‌ನ 60 ಕಿ.ಮೀ. ಸ್ಪರ್ಧೆಯಲ್ಲಿ ಪಾಲ್ಗೊಂಡ ಏಕೈಕ ಮಹಿಳೆ ಎಂಬ ಶ್ರೇಯ ಅಶ್ವಿನಿ ಅವರದು. 15 ಗಂಟೆ 40 ನಿಮಿಷಗಳಲ್ಲಿ ನಿಗದಿತ ಗುರಿ ಮುಟ್ಟಿದ್ದ ಅವರು, ನಾಲ್ಕನೇ ಶ್ರೇಷ್ಠ ಸಮಯ ದಾಖಲಿಸಿದ್ದರು. ಒಟ್ಟು 15 ಜನ ಪಾಲ್ಗೊಂಡಿದ್ದ ಈ ಸ್ಪರ್ಧೆಯಲ್ಲಿ ಅಶ್ವಿನಿ ಒಂಬತ್ತನೇ ಸ್ಥಾನ ಗಳಿಸಿದ್ದರು.



ಅಶ್ವಿನಿ

ಅಶ್ವಿನಿ ಮೂಲತಃ ಮಲೆನಾಡಿನವರು. ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ತಾಳಗುಪ್ಪ ಅವರೂರು. ತಂದೆ ಬಿ.ಕೆ.ಗಣಪತಿ ಉದ್ಯೋಗ ಅರಸಿ ಉದ್ಯಾನನಗರಿಗೆ ಬಂದವರು. ಬಾಲ್ಯದಿಂದಲೇ ಕ್ರೀಡೆಯ ಕುರಿತು ಆಸಕ್ತಿ ಬೆಳೆಸಿಕೊಂಡಿದ್ದ ಅಶ್ವಿನಿ ಅವರಿಗೆ ತಂದೆ ಪ್ರೋತ್ಸಾಹದ ನೀರೆರೆದರು. ಆಟೊ ರಿಕ್ಷಾ ಚಾಲನೆ, ಎಸ್ಟೇಟ್ ಏಜೆನ್ಸಿ, ವಿಮಾ ಏಜೆನ್ಸಿ ಮತ್ತಿತರ ಉದ್ಯೋಗಗಳ ಮೂಲಕ ಬದುಕು ಕಟ್ಟಿಕೊಂಡು ಮಗಳಿಗೆ ಎಂಜಿನಿಯರಿಂಗ್ ಪದವಿ ಓದಿಸಿದರು.

'ಬೇಸ್ ಕ್ಯಾಂಪ್‌ನಿಂದ ಪ್ರಾರಂಭವಾಗುವ ಎವರೆಸ್ಟ್ ಓಟಕ್ಕೆ ಮಾರ್ಗದರ್ಶಿ ಅಥವಾ ಪೋರ್ಟರ್ ಬೆಂಬಲವಿಲ್ಲದೆ ಏಕಾಂಗಿಯಾಗಿ ತೆರಳಿದ್ದೆ. 14 ದಿನಗಳಲ್ಲಿ 130 ಕಿ.ಮೀ. ಟ್ರೆಕ್ಕಿಂಗ್ ಮಾಡಿಕೊಂಡು ಮೇ 27ಕ್ಕೆ ಕ್ಯಾಂಪ್ ತಲುಪಿದೆ. 29ನೇ ತಾರೀಖು ಬೆಳಿಗ್ಗೆ 6 ಗಂಟೆಗೆ ಓಟ ಶುರುವಾಯಿತು' ಎಂದು ಅಶ್ವಿನಿ ನೆನಪಿಸಿಕೊಳ್ಳುತ್ತಾರೆ. 2016ರಲ್ಲಿ ಬಹುರಾಷ್ಟ್ರೀಯ ಕಂಪೆನಿಯ ಪ್ರೊಗ್ರಾಮ್ ಮ್ಯಾನೇಜರ್ ಹುದ್ದೆ ತೊರೆದು ಮ್ಯಾರಥಾನ್‌ನಲ್ಲೇ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

10 ಕಿ.ಮೀ ಓಟದಿಂದ ಆರಂಭಿಸಿದ 36 ವರ್ಷದ ಅಶ್ವಿನಿ, ಇಲ್ಲಿಯವರೆಗೆ 100ಕ್ಕೂ ಹೆಚ್ಚು ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ.

ಪ್ರಮುಖ ಸಾಧನೆಗಳು: 2019ರಲ್ಲಿ ಲೇಹ್‌ನಲ್ಲಿ ನಡೆದ ಖರ್ದುಂಗ್ಲಾ ಚಾಲೆಂಜ್ (72 ಕಿ.ಮೀ) ಮತ್ತು ಲಡಾಖ್ ಮ್ಯಾರಥಾನ್ (42 ಕಿ.ಮೀ.) ಎರಡರಲ್ಲೂ ಪೋಡಿಯಂ ಫಿನಿಶ್ ಮಾಡಿದ್ದಾರೆ. 2020ರ ಫೆಬ್ರುವರಿಯಲ್ಲಿ ಚಂಡಿಗಡದಲ್ಲಿ ನಡೆದ ಸ್ಪರ್ಧೆಯಲ್ಲಿ 12 ತಾಸುಗಳಲ್ಲಿ 112 ಕಿ.ಮೀ. ಕ್ರಮಿಸಿ ರಾಷ್ಟ್ರೀಯ ಶ್ರೇಷ್ಠ ಸಮಯದ ದಾಖಲೆ, 2019ರ ನವೆಂಬರ್‌ನಲ್ಲಿ 110 ಕಿ.ಮೀ ಮಲ್ನಾಡ್ ಅಲ್ಟ್ರಾ ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದ್ದು ಅವರ ಪ್ರಮುಖ ಸಾಧನೆಗಳಾಗಿವೆ.

'ಪತಿ ಸಂದೀಪ್ ಸತ್ಯನಾರಾಯಣ ಅವರ ಅಪಾರ ಬೆಂಬಲವೂ ನನ್ನ ಸಾಧನೆಗೆ ಕಾರಣ' ಎಂದು ಅಶ್ವಿನಿ ಹೇಳುತ್ತಾರೆ.

ಕಠಿಣ ಅಭ್ಯಾಸ: ಮ್ಯಾರಥಾನ್ ಯಶಸ್ಸಿಗಾಗಿ ಪ್ರತಿದಿನ ಬೆಳಿಗ್ಗೆ 5 ಗಂಟೆಗೆ ಏಳುವ ಅಶ್ವಿನಿ, ವಾರದಲ್ಲಿ ಮೂರು ದಿನಗಳನ್ನು ಅಭ್ಯಾಸಕ್ಕೆ ಮೀಸಲಿಡುತ್ತಾರೆ. ದಿನಕ್ಕೆ 20 ರಿಂದ 30 ಕಿ.ಮೀ ಓಟದ ತಾಲೀಮು ನಡೆಸುತ್ತಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಇಂದು (ಶನಿವಾರ) ಮತ್ತು ನಾಳೆ ನಡೆಯಲಿರುವ ಏಷ್ಯಾ ಒಷಿಯಾನಿಯಾ ಚಾಂಪಿಯನ್‌ಷಿಪ್‌ನಲ್ಲಿ ಅವರು ಪಾಲ್ಗೊಳ್ಳಲಿದ್ದು, ಉತ್ತಮ ಸಾಮರ್ಥ್ಯ ತೋರುವ ಹಂಬಲದಲ್ಲಿದ್ದಾರೆ.

28 ದಿನಕ್ಕೊಮ್ಮೆ ಋತುಚಕ್ರವಾಗುವುದು ಸರಿಯೇ?

1. ನನಗೀಗ 26 ವರ್ಷ. 28 ದಿನಕ್ಕೊಮ್ಮೆ ಋತುಚಕ್ರ ಆಗುತ್ತದೆ. ನನಗೆ ಮದುವೆ ಆಗಿ 2 ವರ್ಷ ಆಯಿತು. ಮಗು ಪಡೆಯುವ ಆಸೆ. ಎಷ್ಟು ಪ್ರಯತ್ನ ಪಟ್ಟರೂ ಇನ್ನೂ ಗರ್ಭ ನಿಲ್ಲುತ್ತಿಲ್ಲ. ಈ 28 ದಿನದ ಋತುಚಕ್ರ ಏನಾದರೂ ಮಗು ಪಡೆಯುವುದಕ್ಕೆ ಸಮಸ್ಯೆ ಆಗುವುದೇ? ತಿಳಿಸಿ.

ಹೆಸರು, ಊರು ತಿಳಿಸಿಲ್ಲ



ಸ್ಪಂದನ

ಡಾ. ವೀಣಾ ಎಸ್. ಭಟ್

28 ದಿನದ ಋತುಚಕ್ರ ಸರಿಯಾದದ್ದೇ. ಅಂದರೆ ನಿಮಗೆ ಅಂಡಾಶಯದಿಂದ ಅಂಡೋತ್ಪತ್ತಿ ಸರಿಯಾಗಿ ಆಗುತ್ತಿದೆ ಎಂದು ಅರ್ಥ. ಆದರೆ ನಿಮ್ಮ ಗರ್ಭನಾಳಗಳು ಸರಿಯಾಗಿದೆಯೇ ಎಂಬುದನ್ನು ಟ್ಯೂಬಲ್ ಪೇಟೆಂನ್ಸಿ ಪರೀಕ್ಷೆಗಳನ್ನು ಮಾಡಿಸಬೇಕು. ಜೊತೆಗೆ ನಿಮ್ಮ ಪತಿಯ ವೀರ್ಯ ತಪಾಸಣೆಯನ್ನು ಕೂಡ ಮಾಡಿಸಿ. ಸೂಕ್ತ ತಜ್ಞವೈದ್ಯರ ಸಲಹೆಯನ್ನು ಪಡೆಯಿರಿ. ನಿತ್ಯ ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು ಸೇವಿಸುತ್ತಿರಿ. ಸಂತಾನೋತ್ಪತ್ತಿ ಬಯಸುವ ಪ್ರತಿ ಮಹಿಳೆಯರು ಗರ್ಭಧರಿಸುವ ಮೊದಲೇ ಫೋಲಿಕ್ ಆ್ಯಸಿಡ್ ಮಾತ್ರಗಳನ್ನು ದಿನವೂ ಸೇವಿಸುತ್ತಿರಬೇಕು. ಪೌಷ್ಟಿಕ ಆಹಾರ ಸೇವನೆ ಮಾಡಿ. ಋತುಫಲಪ್ರದ ದಿನಗಳಲ್ಲಿ ಅಂದರೆ ಮುಟ್ಟಾದ ಎಂಟನೇ ದಿನದಿಂದ ಹದಿನೆಂಟು ದಿನಗಳವರೆಗೆ ದಿನಬಿಟ್ಟು ದಿನ ಪತಿಯೊಡನೆ ಲೈಂಗಿಕ ಸಂಪರ್ಕ ಬೆಳಸಿ, ನಿಮಗೆ ಖಂಡಿತ ಮಗುವಾಗುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomi@prajavani.co.in ಗೆ ಕಳಿಸಬಹುದು.

ನಳಪಾಕ

ಚಿಕನ್ ಖಾದ್ಯ ವೈವಿಧ್ಯ

ಸುಲಭ, ಸರಳ ವಿಧಾನ ಹಾಗೂ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ವಿಶಿಷ್ಟ ಚಿಕನ್ ಖಾದ್ಯಗಳ ರೆಸಿಪಿಗಳು ಇಲ್ಲಿವೆ.

ದೀಪಕ್ ಎನ್.

ಚಿಕನ್ ಗ್ರೇವಿ

ಬೇಕಾಗುವ ಸಾಮಗ್ರಿಗಳು: ಚಿಕನ್- 1 ಕೆ.ಜಿ, ಗುಂಟೂರು ಮೆಣಸಿನಕಾಯಿ-20, ಈರುಳ್ಳಿ- 2, ರುಚಿಗೆ ತಕ್ಕಷ್ಟು ಉಪ್ಪು, ಅಡುಗೆ ಎಣ್ಣೆ- ಅರ್ಧ ಕಪ್, ಕೊತ್ತಂಬರಿ ಸೊಪ್ಪು- ಸ್ವಲ್ಪ, ಸಾಸಿವೆ- ಅರ್ಧ ಚಮಚ, ಅರಿಸಿಣ- ಅರ್ಧ ಚಮಚ, ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಚಕ್ಕೆ– ಲವಂಗ, ಸ್ವಲ್ಪ ಕೊತ್ತಂಬರಿ ಸೊಪ್ಪು, ಸ್ವಲ್ಪ ಕರಿಬೇವಿನ ಸೊಪ್ಪು.

ತಯಾರಿಸುವ ವಿಧಾನ: ಪಾತ್ರೆಗೆ ಸ್ವಲ್ಪ ಅಡುಗೆ ಎಣ್ಣೆ ಹಾಕಿ, ಈರುಳ್ಳಿ, ಕರಿಬೇವು, ಸಾಸಿವೆ, ಅರಿಸಿಣ, ಉಪ್ಪು ಹಾಕಿ ಹಾಕಿ ಫ್ರೈ ಮಾಡಿ ಚಿಕನ್ ಹಾಕಿ ಬೇಯಲು ಬಿಡಬೇಕು. ಗುಂಟೂರು ಮೆಣಸಿನಕಾಯಿ, ಕೊತ್ತಂಬರಿಯನ್ನು ರುಬ್ಬಿಕೊಳ್ಳಬೇಕು. ನಂತರ ಮತ್ತೊಂದು ಬಾಣಲೆಗೆ ಅಡುಗೆ ಎಣ್ಣೆ, ಕರಿಬೇವು, ಸಾಸಿವೆ, ಕೊತ್ತಂಬರಿ, ಚಕ್ಕೆ, ಲವಂಗ, ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಎಲ್ಲವನ್ನು ಹಾಕಿ ಚೆನ್ನಾಗಿ ಬೆರೆಸಿಕೊಡಿ.



ನಂತರ ಈಗಾಗಲೇ ಬೇಯಿಸಿದ ಚಿಕನ್ ಹಾಗೂ ರುಬ್ಬಿದ ಮಿಶ್ರಣವನ್ನು ಹಾಕಿ, ಕುದಿಯಲು ಬಿಡಿ. ನಂತರ ತೆಂಗಿನಕಾಯಿ ತುರಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಚಪ್ಪಾತಿ, ದೋಸೆ, ಮುದ್ದೆ, ಅನ್ನದ ಜೊತೆಗೆ ಈ ಗ್ರೇವಿ ಬೆರೆಸಿಕೊಳ್ಳಬೇಕಾದರೆ ಮಾತ್ರ 2 ಕಪ್ ಚಿಕನ್ ಬೇಯಿಸಿದ ನೀರನ್ನು ಹಾಕಿಕೊಂಡು ಕುದಿಸಬೇಕು. ತಳ ಹಿಡಿಯದಂತೆ ಕೈಯಾಡಿಸುತ್ತಾ ಇರಬೇಕು. ಕೊನೆಯಲ್ಲಿ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಘಮ ಘಮ ಚಿಕನ್ ಗ್ರೇವಿ ಸಿದ್ಧ.

ಚಿಕನ್ ಮಸಾಲ



ಬೇಕಾಗುವ ಸಾಮಗ್ರಿಗಳು: ಚಿಕನ್ – 1 ಕೆಜಿ, ಕೆಂಪು ಮೆಣಸಿನಕಾಯಿ – 8, ಈರುಳ್ಳಿ – 2, ಟೊಮೆಟೊ – 2, ಗೋಡಂಬಿ – 2 ಚಮಚ, ಅರಿಸಿಣ – 1 ಚಮಚ, ಅಡುಗೆ ಎಣ್ಣೆ- 2 ಚಮಚ, ರುಚಿಗೆ ತಕ್ಕಷ್ಟು ಉಪ್ಪು, ದನಿಯಾ ಪುಡಿ- 1 ಚಮಚ ಗರಂಮಸಾಲೆ – 2 ಚಮಚ, ಕಸೂರಿ ಮೇಥಿ- 1 ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಕೆ ವಿಧಾನ: ಕುಕರ್‌ನಲ್ಲಿ 1 ಕೆ.ಜಿ ಚಿಕನ್, 3 ಕಪ್ ನೀರು ಅದಕ್ಕೆ ಸ್ವಲ್ಪ ಉಪ್ಪು ಮತ್ತು ಅರಿಸಿನ ಪುಡಿ ಹಾಕಿ ಬೇಯಿಸಿ ಇಟ್ಟುಕೊಳ್ಳಿ. ಪಕ್ಕದಲ್ಲಿ ಮತ್ತೊಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ಈರುಳ್ಳಿ ಹಾಕಿ, ಬಣ್ಣ ಬದಲಾಗುವವರೆಗೂ ಹುರಿಯಿರಿ. ನಂತರ ಟೊಮೆಟೊ, ಗರಂಮಸಾಲೆ, ಕಸ್ತೂರಿ ಮೇಥಿ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಬೆರೆಸಿ ಹುರಿದುಕೊಳ್ಳಿ.

ಇದಕ್ಕೆ ಅರ್ಧ ಚಮಚ ಅರಿಸಿನ, ಉಪ್ಪು, ಖಾರದಪುಡಿ ಹಾಕಿ ಕಂದು ಬಣ್ಣ ಬರುವರೆಗೆ ಹುರಿದುಕೊಳ್ಳಿ. ಚಿಕನ್ ಅನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಹೋಳುಗಳಿಗೆ ಮಸಾಲೆ ಹಿಡಿಯುವವರೆಗೆ ಕೈಯಾಡಿಸಿ. ನಂತರ ಒಂದು ಕಪ್ ನೀರು ಹಾಕಿ ಮತ್ತೆ ಎಲ್ಲವನ್ನೂ ಮಿಶ್ರಣ ಮಾಡಿ ಸಣ್ಣ ಉರಿಯಲ್ಲಿ ಚಿಕನ್ ಬೇಯುವವರೆಗೆ ಬೇಯಿಸಿ. ಚೆನ್ನಾಗಿ ಕುದ್ದು, ಮಾಂಸ ಬೆಂದು ಮಂದ ಆಗುವವರೆಗೂ ಕುದಿಸಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ. ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಈಗ ಚಿಕನ್ ಮಸಾಲ ಸವಿಯಲು ರೆಡಿ.



ಶಿಲ್ಪಾ ಶೆಟ್ಟಿ

ಫೇಸ್‌ಬುಕ್ ಚಿತ್ರ

ಫ್ಯಾಷನ್

ಕಂಕಣ ತಾಳಿಗೆ ಫ್ಯಾಷನ್ ಸ್ಪರ್ಶ!

ಕೀರ್ತಿಕುಮಾರಿ ಎಂ.

ಬಾಲಿವುಡ್ ನಟಿ ಶಿಲ್ಪಾಶೆಟ್ಟಿ ಕೈಗೊಂದು ಹೊಸ ರೀತಿಯ ಬ್ರೇಸ್ಲೆಟ್ ಹಾಕಿಕೊಂಡಿದ್ದ ಫೋಟೊಗಳು ವೈರಲ್ ಆಗಿದ್ದವು. ಆ ಫೋಟೊಗಳು ವೈರಲ್ ಆಗುತ್ತಿದ್ದಂತೆ ಫ್ಯಾಷನ್ ಜಗತ್ತಿನಲ್ಲಿ ಕೈಗೆ ತೊಟ್ಟುಕೊಳ್ಳುವ 'ಕಂಕಣ ತಾಳಿ'ಯ ಟ್ರೆಂಡ್ ಸೃಷ್ಟಿಯಾಯಿತು.

ಫ್ಯಾಷನ್ ಸೆನ್ಸ್‌ನಿಂದಲೇ ಖ್ಯಾತಿಗಳಿಸಿರುವ ಮತ್ತೋರ್ವ ಬಾಲಿವುಡ್ ನಟಿ ಸೋನಂ ಕಪೂರ್ ಕೂಡ ಬ್ರೇಸ್ಲೆಟ್ ಮಾಂಗಲ್ಯಸೂತ್ರದಲ್ಲಿ ಪತಿಯ ಜನ್ಮ ರಾಶಿ, ಚಿಹ್ನೆಗಳನ್ನು ಧರಿಸಿ ಮಿಂಚಿದ್ದರು. ಈ ಟ್ರೆಂಡ್‌ಗಳು ಆಧುನಿಕ ಮಹಿಳೆಯರನ್ನು ಅಪಾರವಾಗಿ ಸೆಳೆಯಿತು.

ಇತ್ತೀಚೆಗೆ ಸಾಂಪ್ರದಾಯಿಕ ಆಭರಣಗಳು ನಾವೀನ್ಯದ ಸ್ಪರ್ಶ ಪಡೆದು ಫ್ಯಾಷನ್ ಲೋಕವನ್ನು ಪ್ರವೇಶಿಸುತ್ತಿವೆ. ಅದಕ್ಕೆ ಪ್ರಮುಖ ಉದಾಹರಣೆ ಶಿಲ್ಪಾಶೆಟ್ಟಿ ಧರಿಸಿದ 'ಕಂಕಣ ತಾಳಿ ಅಥವಾ ಬ್ರೇಸ್ಲೆಟ್ ಮಂಗಳಸೂತ್ರ'. ಇದು ಸದ್ಯ ಎಲ್ಲ ವಯೋಮಾನದ ಹೆಂಗಳೆಯರ ಮನಗೆದ್ದಿರುವ ಟ್ರೆಂಡಿ ಆಭರಣವಾಗಿದೆ.

ಬಳೆಯಂತೆ ಕೈಯಲ್ಲಿ ಧರಿಸುವ, ಎಲ್ಲಾ ವಿಧದ ವಸ್ತ್ರಗಳಿಗೆ ಹೊಂದಬಲ್ಲ, ಮಾಡರ್ನ್ ಲುಕ್ ನೀಡುವ ಕಂಕಣ ತಾಳಿಯ ಹಲವಾರು ಶೈಲಿಗಳು ಮಾರುಕಟ್ಟೆಯಲ್ಲಿ ಜನಪ್ರಿಯವಾಗಿವೆ. ಈ ಮುಂಚೆ ಕೊರಳಿನಲ್ಲಿ ಮಾತ್ರ ಸ್ಥಾನ ಪಡೆದಿದ್ದ ಕರಿಮಣಿ ಈಗ ಕಂಕಣ ಮಂಗಳಸೂತ್ರದ ಮೂಲಕ ಕೈಗೂ ಮೆರಗು ನೀಡುತ್ತಿದೆ.

ಜೀನ್ಸ್‌ಗೂ ಸೈ, ಸೀರೆಗೂ ಸೈ


ಕೆಲ ಉದ್ಯೋಗಸ್ಥ ಅಥವಾ ವೃತ್ತಿಪರ ಮಹಿಳೆಯರಿಗೆ ಕೆಲಸ ಹಾಗೂ ಇನ್ನಿತರ ಸ್ಥಳಗಳಿಗೆ ತೆರಳಿದ್ದಾಗ ಕೊರಳಲ್ಲಿ ಮಂಗಳಸೂತ್ರ ಧರಿಸುವುದು ತುಸು ಇರಿಸುಮುರಿಸು ಎನ್ನಿಸುತ್ತಿರುತ್ತದೆ. ಇನ್ನೂ ಕೆಲವರಿಗೆ, ತಮ್ಮ ದಿರಿಸಿಗೆ ಮಂಗಳಸೂತ್ರದ ವಿನ್ಯಾಸ ಮ್ಯಾಚ್ ಆಗುತ್ತಿಲ್ಲ ಎಂಬ ಬೇಸರವೂ ಇರುತ್ತದೆ. ಇಂಥವರು ಮಣಿಕಟ್ಟಿನ ಮೇಲೆ ಬಳೆಯಂತೆ ಕಂಕಣ ತಾಳಿ ಧರಿಸಬಹುದು. ಇದರಿಂದ ಒಂದು ಕಡೆ ಸಂಪ್ರದಾಯವನ್ನೂ ಪಾಲಿಸಿದಂತಾಗುತ್ತದೆ, ಇನ್ನೊಂದು ಕಡೆ ಟ್ರೆಂಡಿ ಆಗಿಯೂ ಕಾಣುತ್ತದೆ. ಈ ಬ್ರೇಸ್ಲೆಟ್ ಅನ್ನು ಸೀರೆ ಉಟ್ಟಾಗಲೂ ಧರಿಸಬಹುದು. ಜೀನ್ಸ್ ತೊಟ್ಟಾಗಲೂ ಹಾಕಿಕೊಳ್ಳಬಹುದು.

ಕಾಸ್ಟಿಂಗ್ ದಿ ಇವಿಲ್ ಐ

ಈ ಮಾದರಿಯ ಕಂಕಣ ಸೂತ್ರಗಳ ನಡು ಭಾಗದಲ್ಲಿ 'ಕಣ್ಣಿನ' ರಚನೆಯಿರುತ್ತದೆ. ಈ 'ಇವಿಲ್ ಐ' ಶೈಲಿಯ ತಾಳಿಗಳು ದಂಪತಿಯನ್ನು ಕಂಟಕಗಳಿಂದ ರಕ್ಷಿಸುತ್ತವೆ ಮತ್ತು ಅದೃಷ್ಟ, ಆರೋಗ್ಯವನ್ನು ತರುತ್ತದೆ ಎಂಬ ನಂಬಿಕೆಗಳಿವೆ.

ವಜ್ರ/ ಹರಳಿನ ಬ್ರೇಸ್ಲೆಟ್

ಫ್ಯಾಷನ್ ಇಷ್ಟಪಡುವ ಮಹಿಳೆಯರು ವಜ್ರಖಚಿತ ಅಥವಾ ವಜ್ರದ ಹರಳುಗಳಂತೆ ಕಾಣುವ ಬ್ರೇಸ್ಲೆಟ್ ಧರಿಸುತ್ತಾರೆ. ಮಧ್ಯದಲ್ಲಿ ಮೂರು ವೃತ್ತಾಕಾರದ ಮಣಿಗಳಿಗೆ ಸುತ್ತ ಬಿಗಿಯಲಾದ ಕರಿಮಣಿ ಈ ಕಂಕಣಕ್ಕೆ ರಿಚ್ ಲುಕ್ ನೀಡುತ್ತದೆ. ಬಿಸಿಲು ಬಿದ್ದಾಗ ಫಳ ಫಳ ಹೊಳೆಯುವ ಹರಳುಗಳು ದಿರಿಸಿಗೊಂದು ಹೊಸ ರೂಪ ನೀಡುತ್ತವೆ.



ಚಿತ್ರ: ಭಾವು ಪತ್ತಾರ್

ನಕ್ಷತ್ರ ಕಂಕಣ ತಾಳಿ

ಜೋತಿಷ್ಯದಲ್ಲಿ ನಂಬಿಕೆ ಇರುವವರು ಪತಿಯ ರಾಶಿ, ನಕ್ಷತ್ರಗಳ ಚಿಹ್ನೆ ಅಥವಾ ಅದೃಷ್ಟ ಸಂಖ್ಯೆಯ ಪೆಂಡೆಂಟ್ ಇರುವ ವಿನ್ಯಾಸದ ಕಂಕಣ ತಾಳಿ ಧರಿಸಬಹುದು. ಮಾರುಕಟ್ಟೆಯಲ್ಲಿ ಎಲ್ಲಾ ಚಿಹ್ನೆ ಅಥವಾ ಸಂಖ್ಯೆಗಳ ತಾಳಿಗಳೂ ಲಭ್ಯ ಇವೆ. ಇದರಿಂದ ಶಾಸ್ತ್ರವನ್ನೂ ಪಾಲಿಸಿದಂತಾಯಿತು, ದಿರಿಸಿನ ಅಂದವೂ ಹೆಚ್ಚಿಸಿದಂತಾಯಿತು.

ತಾಳಿಯೊಳಗೆ ಹೂವು!

ಕಂಕಣ ತಾಳಿಯಲ್ಲಿ ಹೆಚ್ಚು ಸಾಂಪ್ರದಾಯಿಕತೆ ಬಯಸುವವರಿಗೆ ಪ್ರಾಚೀನ ಮಾದರಿಯ ಹೂವಿನ ಕೆತ್ತನೆಗಳಿರುವ ಮಂಗಳಸೂತ್ರ ಇಷ್ಟವಾಗಬಹುದು. ಸೂಕ್ಷ್ಮ ಕೆತ್ತನೆ ಬಯಸುವವರಿಗೂ ಇಲ್ಲಿ ಆಯ್ಕೆಗಳುಂಟು. ಬ್ರೇಸ್ಲೆಟ್‌ನಲ್ಲಿ ಬಾಳ ಸಂಗಾತಿ ಹೆಸರಿನ ಪೆಂಡೆಂಟ್ ಸಹ ಬಳಸಬಹುದು. ತೂಗುವ ಪೆಂಡೆಂಟ್‌ಗಳನ್ನು ಧರಿಸುವುದು ಡಿಫರೆಂಟ್ ಲುಕ್ ನೀಡುತ್ತದೆ.

ಉಂಗುರ ತಾಳಿ

ಕಂಕಣ ಮಾಂಗಲ್ಯ ಒಂದೆಡೆ ಟ್ರೆಂಡ್ ಆದರೆ, ಇತ್ತೀಚೆಗೆ ಮಂಗಳಸೂತ್ರದ ರಿಂಗ್‌ಗಳು ಫ್ಯಾಷನ್ ಲೋಕದಲ್ಲಿ ಅಷ್ಟೇ ಸದ್ದು ಮಾಡುತ್ತಿವೆ. ಬೆರಳಿಗೆ ಉಂಗುರ ಧರಿಸುವಂತೆಯೇ ಅಲ್ಲಲ್ಲಿ ಕರಿಮಣಿ ಇರುವ ತಾಳಿಯನ್ನು ಉಂಗುರ ಬೆರಳಿನಲ್ಲಿ ಧರಿಸುವ ಟ್ರೆಂಡ್ ಬೆಳೆದಿದೆ.

ನಿವೃತ್ತ ಎಸ್ಪಿಗೆ ₹1 ಕೋಟಿ ದಂಡ, 4 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರಿಯಲ್ಲಿದ್ದಾಗ ಭ್ರಷ್ಟಾಚಾರ ಎಸಗಿ ₹ 40.60 ಲಕ್ಷ ಮೌಲ್ಯದ ಅಕ್ರಮ ಆಸ್ತಿ ಹೊಂದಿದ್ದ ಪ್ರಕರಣದಲ್ಲಿ ನಿವೃತ್ತ ಎಸ್ಪಿ ಸಿ.ಎ. ಶ್ರೀನಿವಾಸ್ ಅಯ್ಯರ್‌ಗೆ 4 ವರ್ಷಗಳ ಜೈಲು ಶಿಕ್ಷೆ ಹಾಗೂ ₹ 1 ಕೋಟಿ ದಂಡ ವಿಧಿಸಿ ನಗರದ 78ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

ಲೋಕಾಯುಕ್ತ ಪೊಲೀಸರು 2007ರಲ್ಲಿ ದಾಖಲಿಸಿದ್ದ ಪ್ರಕರಣ ವಿಚಾರಣೆ ನಡೆಸಿದ್ದ 78ನೇ ಸಿಸಿಎಚ್ ನ್ಯಾಯಾಧೀಶ ಎಸ್.ವಿ. ಶ್ರೀಕಾಂತ್ ಅವರು ಶ್ರೀನಿವಾಸ್‌ಗೆ ಶಿಕ್ಷೆ ವಿಧಿಸಿ ಜೂನ್ 28ರಂದು ಆದೇಶ ಹೊರಡಿಸಿದ್ದಾರೆ. '₹1 ಕೋಟಿ ದಂಡ ಪಾವತಿಸಲು ವಿಫಲವಾದರೆ, ಹೆಚ್ಚುವರಿಯಾಗಿ ಎರಡು ವರ್ಷ ಶಿಕ್ಷೆ ಅನುಭವಿಸಬೇಕು' ಎಂದೂ ಆದೇಶದಲ್ಲಿ ತಿಳಿಸಿದ್ದಾರೆ. ಪಬ್ಲಿಕ್ ಪ್ರಾಸಿಕ್ಯೂಟರ್ ಸುನೀತಾ ಅವರು ವಾದಿಸಿದ್ದರು.

'1973ರಲ್ಲಿ ಡಿವೈಎಸ್ಪಿ (ಮೀಸಲು) ಆಗಿ ಪೊಲೀಸ್ ಇಲಾಖೆಗೆ ಸೇರಿದ್ದ ಶ್ರೀನಿವಾಸ್, ಹಲವು ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. 2007ರಲ್ಲಿ ಯಲಹಂಕದಲ್ಲಿರುವ ಪೊಲೀಸ್ ತರಬೇತಿ ಶಾಲೆಯಲ್ಲಿ ಪ್ರಾಂಶುಪಾಲರಾಗಿದ್ದರು. ಇದೇ ಸಂದರ್ಭದಲ್ಲೇ ಶ್ರೀನಿವಾಸ್ ಅಕ್ರಮ ಆಸ್ತಿ ಸಂಪಾದನೆ ಮಾಡಿರುವ ಮಾಹಿತಿ ಲೋಕಾಯುಕ್ತಕ್ಕೆ ಸಿಕ್ಕಿತ್ತು' ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಸುನೀತಾ ಹೇಳಿದರು.

'ಶ್ರೀನಿವಾಸ್ ಮನೆ ಮೇಲೆ ದಾಳಿ ಮಾಡಿದ್ದ ಲೋಕಾಯುಕ್ತ ಪೊಲೀಸರು, ಅವರು ₹ 81.92 ಲಕ್ಷ ಮೌಲ್ಯದ ಆಸ್ತಿ ಸಂಪಾದಿಸಿರುವುದನ್ನು ಹಾಗೂ ₹ 34.44 ಲಕ್ಷ ಖರ್ಚು ಮಾಡಿದ್ದನ್ನು ಪತ್ತೆ ಹಚ್ಚಿದ್ದರು. ಕೆಲಸಕ್ಕೆ ಸೇರಿದ ದಿನದಿಂದ ದಾಳಿಯಾಗುವವರೆಗೂ ಶ್ರೀನಿವಾಸ್ ಒಟ್ಟು ₹ 1.16 ಕೋಟಿ ಸಂಪಾದಿಸಿದ್ದರು. ಈ ಪೈಕಿ ₹ 75.77 ಲಕ್ಷ ಸಂಪಾದನೆಗೆ ಮಾತ್ರ ದಾಖಲೆ ಒದಗಿಸಿದ್ದ ಶ್ರೀನಿವಾಸ್, ಉಳಿದ ₹ 40.60 ಲಕ್ಷ ಸಂಪಾದನೆ ಬಗ್ಗೆ ಮಾಹಿತಿ ನೀಡಿರಲಿಲ್ಲ. ಇದು ಅಕ್ರಮ ಆಸ್ತಿ ಎಂಬುದನ್ನು ಪತ್ತೆ ಮಾಡಿದ್ದ ಲೋಕಾಯುಕ್ತ ಡಿವೈಎಸ್ಪಿ ವಿ. ಶೇಖರ್, ಭ್ರಷ್ಟಾಚಾರ ತಡೆ ಕಾಯ್ದೆಯಡಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದೂ ಅವರು ತಿಳಿಸಿದರು.

ಪ್ರಕರಣಕ್ಕೆ ಸಂಬಂಧಪಟ್ಟಂತೆ 15 ವರ್ಷ ಸುದೀರ್ಘ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಇದೀಗ ಆದೇಶ ಹೊರಡಿಸಿದೆ.

21ರಂದು ಬಸವರಾಜಪ್ಪ ಪ್ರಮಾಣ ವಚನ

ದಾವಣಗೆರೆ: 'ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಎಲ್ಲ ರೈತ ಮುಖಂಡರು, 22 ಜಿಲ್ಲೆಗಳ ಸಂಘದ ಪದಾಧಿಕಾರಿಗಳು ರಾಜ್ಯ ಘಟಕದ ಅಧ್ಯಕ್ಷನಾಗಿ ನನ್ನನ್ನು ಆಯ್ಕೆ ಮಾಡಿದ್ದಾರೆ. ಜುಲೈ 21ರಂದು ನವಲಗುಂದದಲ್ಲಿ ಮತ್ತೊಮ್ಮೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದೆ' ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಎಲ್ಲ ರೈತ ಸಂಘಟನೆಗಳನ್ನು ಒಂದೇ ವೇದಿಕೆಯಡಿ ತರಲು ಪ್ರಯತ್ನ ನಡೆದಿದೆ. ಇದರ ಭಾಗವಾಗಿ ನವಲಗುಂದದಲ್ಲಿ ಜುಲೈ 21ರಂದು ರೈತ ಹುತಾತ್ಮ ದಿನ ಆಚರಿಸಲಾಗುವುದು. ಅಲ್ಲಿ ಎಲ್ಲ ರೈತ ಮುಖಂಡರು ಸೇರಿ ಚರ್ಚೆ ನಡೆಸಲಿದ್ದೇವೆ' ಎಂದು ಶುಕ್ರವಾರ ಅವರು ತಿಳಿಸಿದರು.

ಟ್ರ್ಯಾಕ್ಟರ್ ಹಗ್ಗಜಗ್ಗಾಟ ಸ್ಪರ್ಧೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಅಥಣಿ (ಬೆಳಗಾವಿ ಜಿಲ್ಲೆ): ಯಾವುದೇ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೆ ತಾಲ್ಲೂಕಿನ ಚಮಕೇರಿ ಗ್ರಾಮದಲ್ಲಿ 'ಟ್ರ್ಯಾಕ್ಟರ್ ಹಗ್ಗಜಗ್ಗಾಟ' ಸ್ಪರ್ಧೆ ನಡೆಸಿದ ಆಯೋಜಕರ ವಿರುದ್ಧ ಇಲ್ಲಿನ ಐಗಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಾಯಕಾರಿ ಅನಿಸುವ 'ಟ್ರ್ಯಾಕ್ಟರ್ ಹಗ್ಗಜಗ್ಗಾಟ' ಸ್ಪರ್ಧೆಯ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆ ಪೊಲೀಸರು ಶುಕ್ರವಾರ ಕ್ರಮ ಕೈಗೊಂಡಿದ್ದಾರೆ.



ಅಥಣಿ ತಾಲ್ಲೂಕಿನ ಚಮಕೇರಿಯಲ್ಲಿ ನಡೆದ 'ಟ್ರ್ಯಾಕ್ಟರ್ ಹಗ್ಗಜಗ್ಗಾಟ' ಸ್ಪರ್ಧೆ ದೃಶ್ಯ

ಗ್ರಾಮದ ಅಥಣಿ–ಚಮಕೇರಿ ರಸ್ತೆಯಲ್ಲಿ ಬೀರಲಿಂಗೇಶ್ವರ ಜಾತ್ರೆ ಅಂಗವಾಗಿ ಇದೇ ಮೊದಲ ಬಾರಿ ಜಾತ್ರಾ ಕಮಿಟಿ ವತಿಯಿಂದ 'ಟ್ರ್ಯಾಕ್ಟರ್ ಹಗ್ಗಜಗ್ಗಾಟ ಸ್ಪರ್ಧೆ' ಆಯೋಜಿಸಲಾಗಿತ್ತು. ಜಿಲ್ಲೆಯ ವಿವಿಧೆಡೆಯಿಂದ ಬಂದಿದ್ದ ಸ್ಪರ್ಧಾಳುಗಳು ಅಪಾಯವನ್ನೂ ಲೆಕ್ಕಿಸದೆ ಭಾಗವಹಿಸಿದ್ದರು. ಸ್ಪರ್ಧೆ ವೀಕ್ಷಿಸಲು ಸಾವಿರಾರು ಜನರು ಸೇರಿದ್ದರು.ಇದರಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ₹10 ಸಾವಿರ, ದ್ವಿತೀಯ ಸ್ಥಾನಕ್ಕೆ ₹7 ಸಾವಿರ ನಗದು ಬಹುಮಾನ ಇಡಲಾಗಿತ್ತು. 10 ಟ್ರ್ಯಾಕ್ಟರ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಅಥಣಿ ಸಿಪಿಐ ಶಂಕರಗೌಡ ಬಸನಗೌಡರ, ಪಿಎಸ್ಐ ಪಿ.ಪವಾರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

'ಮುಂಬರುವ ದಿನಗಳಲ್ಲಿ ಇಂತಹ ಸ್ಪರ್ಧೆಗಳನ್ನು ಯಾವುದೇ ಕಾರಣಕ್ಕೂ ಆಯೋಜಿಸಬಾರದು' ಎಂದು ಆಯೋಜಕರಿಗೆ ಪೊಲೀಸರು ಎಚ್ಚರಿಕೆ ಕೊಟ್ಟಿದ್ದಾರೆ.

ಕೊಡಗು: ಕೆಲವೆಡೆ ಮತ್ತೆ ಭೂಕಂಪನ

ಮಡಿಕೇರಿ: ಕೊಡಗು ಜಿಲ್ಲೆಯ ಕೆಲವೆಡೆ ಶುಕ್ರವಾರ 2 ಬಾರಿ ಭೂಕಂಪನ ವಾಗಿದ್ದು, ಜನ ಆತಂಕಗೊಂಡಿದ್ದಾರೆ.

ನಸುಕಿನ 1.15ರ ಸಮಯದಲ್ಲಿ ಮಡಿಕೇರಿ ತಾಲ್ಲೂಕಿನ ಚೆಂಬು ಗ್ರಾಮ ಸಮೀಪ, ಭೂಮಿಯ 10 ಕಿ.ಮೀ. ಆಳದಲ್ಲಿ 1.8 ತೀವ್ರತೆಯಲ್ಲಿ ಭೂಮಿ ಕಂಪಿಸಿತ್ತು. ಮತ್ತೆ ಬೆಳಿಗ್ಗೆ 10.47ರಲ್ಲಿ 2.1 ತೀವ್ರತೆಯಲ್ಲಿ ಕಂಪಿಸಿತ್ತು. ಈ ವೇಳೆ ಭೂಮಿಯಿಂದ ವಿಚಿತ್ರ ಶಬ್ದಗಳು ಕೇಳಿ ಬಂದಿವೆ. ಜೂನ್ 23, 28ರಂದು ಭೂಮಿ ಕಂಪಿಸಿತ್ತು. ಕಂಪನ ಅಧ್ಯಯನ ಮಾಡಲು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಚೆಂಬು ಗ್ರಾಮದಲ್ಲಿ ಮಾಪನ ಉಪಕೇಂದ್ರ ಸ್ಥಾಪಿಸಿದೆ.

ಸಂಕ್ಷಿಪ್ತ ಸುದ್ದಿ

ಮನೆ ಕೆಲಸಗಾರನಿಂದ ಜೋಡಿ ಕೊಲೆ

ಶಿರಹಟ್ಟಿ (ಗದಗ ಜಿಲ್ಲೆ): ಕೆಲಸ ಮಾಡಿ ಸಾಲ ತೀರಿಸುವಂತೆ ಬಲವಂತ ಮಾಡಿದ್ದರಿಂದ ಮನೆಯೊಡತಿಯ ಮಗ ಹಾಗೂ ಅವರ ಸಂಬಂಧಿಯೊಬ್ಬರನ್ನು ಮನೆಯ ಕೆಲಸಗಾರ ಹೊಡೆದು ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಕೆರಹಳ್ಳಿ ಗ್ರಾಮದಲ್ಲಿ ನಡೆದಿದೆ.

ಮಹಾಂತೇಶ ಮಾಚೇನಹಳ್ಳಿ (28), ಫಕೀರೇಶ ಮಾಚೇನಹಳ್ಳಿ (17) ಕೊಲೆಯಾದವರು. ಆರೋಪಿ ಅಲಗಿಲವಾಡ ಗ್ರಾಮದ ನಿವಾಸಿ ಮಂಜುನಾಥ (40) ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೃಷಿ ವಿವಿ ಕುಲಪತಿ ವಿರುದ್ಧ ತನಿಖೆಗೆ ಸಮಿತಿ

ರಾಯಚೂರು: ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಕೆ.ಎನ್.ಕಟ್ಟಿಮನಿ ಅವರು ಎಸಗಿದ್ದಾರೆ ಎನ್ನಲಾದ ಅಕ್ರಮ ಮತ್ತು ಅವ್ಯವಹಾರದ ಕುರಿತು ವಿಚಾರಣೆ ನಡೆಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕೆ.ಸುಧೀಂದ್ರರಾವ್ ಅವರನ್ನು ಏಕ ಸದಸ್ಯ ಸತ್ಯಶೋಧನಾ ಸಮಿತಿಯ ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಸರ್ಕಾರ ಜೂನ್ 30ರಂದು ಆದೇಶ ಹೊರಡಿಸಿದೆ.

ಈ ಕುರಿತು ಒಂದು ತಿಂಗಳ ಒಳಗಾಗಿ ತನಿಖೆ ನಡೆಸಿ ವರದಿ ಸಲ್ಲಿಸಲು ಆದೇಶದಲ್ಲಿ ತಿಳಿಸಲಾಗಿದೆ.

ಮಂತ್ರಾಲಯ ಮಠ: ₹2.52 ಕೋಟಿ ಸಂಗ್ರಹ

ರಾಯಚೂರು: ಮಂತ್ರಾಲಯದ ರಾಘವೇಂದ್ರಸ್ವಾಮಿ ಮಠದ ಹುಂಡಿಗಳಲ್ಲಿದ್ದ ಭಕ್ತರ ಕಾಣಿಕೆಗಳ ಎಣಿಕೆ ಕಾರ್ಯ ಶುಕ್ರವಾರ ನಡೆಯಿತು. ಜೂನ್ ತಿಂಗಳಲ್ಲಿ ಒಟ್ಟು ₹2.52 ಕೋಟಿ ನಗದು ಸಂಗ್ರಹವಾಗಿದೆ. ಇದರೊಂದಿಗೆ 164 ಗ್ರಾಂ ಚಿನ್ನ ಮತ್ತು 1,098 ಗ್ರಾಂ ಬೆಳ್ಳಿಯನ್ನು ಭಕ್ತರು ಸಮರ್ಪಿಸಿದ್ದಾರೆ. ಮೇ ತಿಂಗಳಲ್ಲಿ ಹುಂಡಿಯಲ್ಲಿ ₹2.27 ಕೋಟಿ ನಗದು ಸಂಗ್ರಹವಾಗಿತ್ತು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ನೌಕರಿ ಕಾಯಂಗೆ ಸ್ವಚ್ಛತಾ ಕಾರ್ಮಿಕರ ಆಗ್ರಹ • ವಿವಿಧ ಸಂಘಟನೆಗಳ ನೇತೃತ್ವದಲ್ಲಿ ರಾಜ್ಯವ್ಯಾಪಿ ಪ್ರತಿಭಟನೆ

ಕೆಲಸಕ್ಕೆ ಗೈರಾಗಿ ಪೌರಕಾರ್ಮಿಕರ ಮುಷ್ಕರ

ಪ್ರಜಾವಾಣಿ ವಾರ್ತೆ



'ಸ್ವಚ್ಛತಾ ಕಾರ್ಮಿಕರ ಕೆಲಸವನ್ನು ಕಾಯಂಗೊಳಿಸಬೇಕು' ಎಂದು ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಆರಂಭಗೊಂಡ ಮುಷ್ಕರದಲ್ಲಿ ಪಾಲ್ಗೊಂಡಿದ್ದ ಪೌರಕಾರ್ಮಿಕರು– ಪ್ರಜಾವಾಣಿ ಚಿತ್ರ

ಬೆಂಗಳೂರು: 'ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಸ್ವಚ್ಛತಾ ಕಾರ್ಮಿಕರನ್ನು ಕಾಯಂಗೊಳಿಸಬೇಕು' ಎಂದು ಆಗ್ರಹಿಸಿ ಪೌರಕಾರ್ಮಿಕರು ರಾಜ್ಯವ್ಯಾಪಿ ಶುಕ್ರವಾರ ಮುಷ್ಕರ ಆರಂಭಿಸಿದ್ದಾರೆ.

ಪೌರಕಾರ್ಮಿಕರ ಸಂಘಟನೆಗಳ ಜಂಟಿ ಹೋರಾಟ ಸಮಿತಿ, ರಾಜ್ಯ ನಗರ ಪಾಲಿಕೆ–ಪುರಸಭೆ–ನಗರಸಭೆ ಪೌರ ಕಾರ್ಮಿಕರ ಮಹಾ ಸಂಘ ಹಾಗೂ ಬಿಬಿಎಂಪಿ ಪೌರ ಕಾರ್ಮಿಕರ ಸಂಘದ ಸಹಯೋಗದಲ್ಲಿ ಕೆಲಸಕ್ಕೆ ಗೈರಾಗಿ ಪೌರಕಾರ್ಮಿಕರು ಮುಷ್ಕರ ಹಮ್ಮಿಕೊಂಡಿದ್ದಾರೆ. ಇದರಿಂದಾಗಿ ಬೆಂಗಳೂರು ಸೇರಿದಂತೆ ಹಲವು ನಗರಗಳಲ್ಲಿ ಕಸ ವಿಲೇವಾರಿ ಸಮಸ್ಯೆ ಉಂಟಾಗಿದೆ.

ಜಿಲ್ಲಾವಾರು ಪ್ರತಿಭಟನೆ ಜೊತೆಯಲ್ಲೇ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ವೇದಿಕೆಯಲ್ಲಿ ಮುಷ್ಕರ ಆರಂಭವಾಗಿದೆ.

ಮುಷ್ಕರ ವೇಳೆ 'ಕಾಯಂಮಾತಿ ನಮ್ಮ ಹಕ್ಕು' ಎಂಬ ಘೋಷಣಾ ಫಲಕ ಪ್ರದರ್ಶಿಸಿದ ಪ್ರತಿಭಟನಕಾರರು, 'ರಾಜ್ಯ ಎಲ್ಲ ನೇರ ಪಾವತಿ, ಗುತ್ತಿಗೆ ಪೌರಕಾರ್ಮಿಕರು, ಕಸ ಸಾಗಣೆ ವಾಹನದ ಚಾಲಕರು ಹಾಗೂ ಸಿಬ್ಬಂದಿ, ಒಳಚರಂಡಿ ಸ್ವಚ್ಛಗೊಳಿಸುವವರು ಸೇರಿದಂತೆ ಎಲ್ಲ ಬಗೆಯ ಸ್ವಚ್ಛತಾ ಕಾರ್ಮಿಕರನ್ನು ಕಾಯಂಗೊಳಿಸಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ 54,512 ಗುತ್ತಿಗೆ ಪೌರ ಕಾರ್ಮಿಕರಿದ್ದು, ಈ ಪೈಕಿ 10,775 ಕಾರ್ಮಿಕರನ್ನು ಮಾತ್ರ ಕಾಯಂಗೊಳಿಸಲಾಗಿದೆ. ಕಾಯಂಗೊಂಡಿರುವ ಕಾರ್ಮಿಕರಿಗೆ ಉತ್ತಮ ವೇತನ ಬರುತ್ತಿದೆ. ಗುತ್ತಿಗೆ ಹಾಗೂ ಇತರೆ ಪ್ರಕಾರದ ಕಾರ್ಮಿಕರಿಗೆ ಕೇವಲ ₹14,000 ಮಾಸಿಕ ವೇತನ ದೊರೆಯುತ್ತಿದೆ. ಇಂದಿನ ಬೆಲೆ ಏರಿಕೆ ಕಾಲದಲ್ಲಿ ಜೀವನ ನಿರ್ವಹಣೆ ಕಷ್ಟವಾಗಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಲು ಸಹ ಆಗುತ್ತಿಲ್ಲ' ಎಂದು ಅಳಲು ತೋಡಿಕೊಂಡರು.

'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ, ಎಲ್ಲ ಪೌರ–ಕಾರ್ಮಿಕರನ್ನು ಕಾಯಂಗೊಳಿಸುವ ಪ್ರಸ್ತಾವಕ್ಕೆ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. ಆದರೆ, ಪ್ರಸ್ತಾವ ಅನುಷ್ಠಾನಕ್ಕೆ ಅಂದಿನ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಇದೀಗ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಸಹ ಪೌರಕಾರ್ಮಿಕರ ಕಾಯಂ ಬಗ್ಗೆ ಗಮನ ಹರಿಸುತ್ತಿಲ್ಲ' ಎಂದೂ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಿಗದ ಲಿಖಿತ ಭರವಸೆ, ಮುಷ್ಕರ ಮುಂದುವರಿಕೆ: 'ಪೌರಕಾರ್ಮಿಕರ ಬೇಡಿಕೆ ಈಡೇರಿಸುವ ಬಗ್ಗೆ ರಾಜ್ಯ ಸರ್ಕಾರ ಲಿಖಿತ ಭರವಸೆ ನೀಡಿಲ್ಲ. ಹೀಗಾಗಿ, ಸ್ವಾತಂತ್ರ್ಯ ಉದ್ಯಾನದಲ್ಲೇ ಅನಿರ್ದಿಷ್ಟಾವಧಿ ಮುಷ್ಕರ ಮುಂದುವರಿಸಲಾಗುವುದು' ಎಂದು ಮುಖಂಡರು ತಿಳಿಸಿದ್ದಾರೆ.

ಪ್ರಮುಖ ಬೇಡಿಕೆಗಳು

- ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ ಹಾಗೂ ಭತ್ಯೆ ನೀಡಬೇಕು. ಶೌಚಾಲಯ, ಕುಡಿಯುವ ನೀರು ಸೇರಿ ಮೂಲ ಸೌಕರ್ಯ ಒದಗಿಸಬೇಕು
- ಗೃಹ ಭಾಗ್ಯ ಯೋಜನೆಯನ್ನು ಎಲ್ಲ ಕಾರ್ಮಿಕರಿಗೆ ವಿಸ್ತರಿಸಬೇಕು
- ಪೌರಕಾರ್ಮಿಕರ ಮಕ್ಕಳು ಖಾಸಗಿ ಶಾಲೆ–ಕಾಲೇಜುಗಳಲ್ಲಿ ವ್ಯಾಸಂಗ ಮಾಡಲು ಅಗತ್ಯವಿರುವ ಹಣಕಾಸು ನೆರವು ಒದಗಿಸಬೇಕು
- 60 ವಯಸ್ಸಿನವರೆಗೆ ಕೆಲಸ ಮಾಡಿ ನಿವೃತ್ತರಾದವರಿಗೆ ₹ 10 ಲಕ್ಷ ಇಡುಗಂಟು ಹಾಗೂ ₹ 10ಸಾವಿರ ಪಿಂಚಣಿ ನೀಡಬೇಕು.

₹ 2 ಸಾವಿರ ಸಂಕಷ್ಟ ಭತ್ಯೆ

ಬೆಂಗಳೂರು: ಬಿಬಿಎಂಪಿ ಸೇರಿ ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿರುವ ಪೌರ ಕಾರ್ಮಿಕರಿಗೆ ತಿಂಗಳಿಗೆ ₹2,000 ಸಂಕಷ್ಟ ಭತ್ಯೆ ನೀಡಲು ಸರ್ಕಾರ ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಕಾಯಂ ಮತ್ತು ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಪೌರ ಕಾರ್ಮಿಕರಿಗೆ ಸಂಕಷ್ಟ ಭತ್ಯೆ ನೀಡಲಾಗುವುದು. ಪೌರಕಾರ್ಮಿಕರ ಹೋರಾಟಕ್ಕೂ ಈ ಘೋಷಣೆಗೂ ಸಂಬಂಧವಿಲ್ಲ ಎಂದರು

ಎನ್‌ಐಎಎಸ್, ಆಳ್ವಾಸ್ ನಡುವೆ ಒಪ್ಪಂದ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಬೆಂಗಳೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ನಡುವೆ ಒಪ್ಪಂದಕ್ಕೆ ಬೆಂಗಳೂರಿನಲ್ಲಿ ಶುಕ್ರವಾರ ಸಹಿ ಹಾಕಲಾಯಿತು.

'ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪಾಂಡಿತ್ಯ, ಸಂಶೋಧನೆ ಉತ್ತೇಜಿಸುವುದು, ಸಂಶೋಧನೆಗೆ ಬೇಕಾದ ಮಾಹಿತಿ ವಿನಿಮಯ, ತಾಂತ್ರಿಕ ನೆರವು, ಸಮಕಾಲೀನ ತಂತ್ರಜ್ಞಾನಗಳ ಪರಿಚಯ 5 ವರ್ಷ ಅವಧಿಯ ಈ ಒಪ್ಪಂದದ ಮುಖ್ಯ ಉದ್ದೇಶ' ಎಂದು ಎನ್‌ಐಎಎಸ್ ನಿರ್ದೇಶಕ ಡಾ. ಶೈಲೇಶ್ ನಾಯಕ್ ಹೇಳಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ, ಎನ್‌ಐಎಎಸ್ ಇಸ್ರೊ ಚೇರ್ ಪ್ರೊಫೆಸರ್ ಡಾ.ಪಿ.ಜಿ.ದಿವಾಕರ್, ಪಿ. ಶ್ರೀನಿವಾಸ್ ಐತಾಳ್, ಆಳ್ವಾಸ್ ಎಂಜಿನಿಯರಿಂಗ್ ಕಾಲೇಜಿನ ಪ್ಲಾನಿಂಗ್ ಡೀನ್ ಡಾ. ದತ್ತಾತ್ರೇಯ ಹಾಗೂ ನಿತಿನ್ ಕೆ. ಆರ್ ಇದ್ದರು.

'ಕನಿಷ್ಠ ವೇತನ'ದತ್ತ ಕಾರ್ಮಿಕರ ಕಣ್ಣು!

ವಲಯ–1ರಲ್ಲಿ ಕೌಶಲರಹಿತರಿಗೆ ಕನಿಷ್ಠ ವೇತನ ₹31,566 ನೀಡಲು ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ಕಾಯ್ದೆಯ ವ್ಯಾಪ್ತಿಯಲ್ಲಿರುವ ಕಾರ್ಮಿಕರಿಗೆ ಕನಿಷ್ಠ ವೇತನ ಪರಿಷ್ಕರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ರಾಜ್ಯ ಸರ್ಕಾರ ನಿಗದಿಪಡಿಸಬಹುದಾದ ಪರಿಷ್ಕೃತ ವೇತನ ಪ್ರಮಾಣದ ಕಡೆಗೆ ಕಾರ್ಮಿಕ ಸಮುದಾಯ ನಿರೀಕ್ಷೆಯಿಂದ ಕಾಯುತ್ತಿದೆ.

ಸದ್ಯದ ಬೆಲೆ ಆಧರಿಸಿ ಲೆಕ್ಕಾಚಾರ ಮಾಡಿರುವ ಕಾರ್ಮಿಕ ಸಂಘಟನೆಗಳ ಒಕ್ಕೂಟ, ಬೆಂಗಳೂರು ಸೇರಿ ಎಂಟು ನಗರಗಳನ್ನು ಒಳಗೊಂಡ ವಲಯ– 1 ರಲ್ಲಿ ಕೌಶಲರಹಿತ ಕಾರ್ಮಿಕರಿಗೆ ಕನಿಷ್ಠ ವೇತನ ₹ 31,566 ವೇತನ ನಿಗದಿಪಡಿಸಬೇಕೆಂದು ಪಟ್ಟು ಹಿಡಿದಿದೆ.

ಈ ಮಧ್ಯೆ, ಕನಿಷ್ಠ ವೇತನ ಹೆಚ್ಚಳಕ್ಕೆ ಸಂಬಂಧಿಸಿದಂತೆ 2016ರ ಲೆಕ್ಕಾಚಾರವನ್ನು ಪರಿಗಣಿಸಿ ಕೌಶಲರಹಿತ, ಅರೆಕೌಶಲ, ಕೌಶಲ ಮತ್ತು ಅತಿ ಕೌಶಲ ಹೊಂದಿದ ಕಾರ್ಮಿಕರಿಗೆ ಸರಾಸರಿ ಶೇ 10ರಷ್ಟು ಪರಿಷ್ಕರಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಇತ್ತೀಚೆಗೆ ನಡೆದ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯಲ್ಲಿ ವೇತನ ಹೆಚ್ಚಿಸಬೇಕಾದ ಅನಿವಾರ್ಯವನ್ನು ಕಾರ್ಮಿಕ ಸಂಘಟನೆಗಳ ಒಕ್ಕೂಟಗಳ ಜಂಟಿ ಸಮಿತಿ ಪ್ರತಿಪಾದಿಸಿದೆ. ಆದರೆ, ಕಂಪನಿಗಳ ಮಾಲೀಕರು ಕಾರ್ಮಿಕರ ಬೇಡಿಕೆಗಳನ್ನು ಒಪ್ಪಲು ತಯಾರಿಲ್ಲ.

ಕನಿಷ್ಠ ವೇತನ ಕಾಯ್ದೆಯಂತೆ ಪ್ರತಿ ಐದು ವರ್ಷಗಳ ಒಳಗೆ ವೇತನವನ್ನು ಪರಿಷ್ಕರಿಸಬೇಕು. ಅನುಸೂಚಿತ 82 ಉದ್ಯೋಗಗಳಿಗೆ ಕನಿಷ್ಠ ವೇತನ ನಿಗದಿಯಾಗಬೇಕು. ಕಾರ್ಮಿಕ ಇಲಾಖೆ ಆಯುಕ್ತರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಕನಿಷ್ಠ ವೇತನ ಸಲಹಾ ಮಂಡಳಿ ಸಭೆಯಲ್ಲಿ ಆರು ಅನುಸೂಚಿತ ಉದ್ಯೋಗಗಳ ವೇತನ ಪರಿಷ್ಕರಣೆ ಬಗ್ಗೆ ತ್ರಿಪಕ್ಷೀಯ (ಕಾರ್ಮಿಕ, ಮಾಲೀಕರ ಮತ್ತು ಸರ್ಕಾರದ ತಲಾ 9 ಪ್ರತಿನಿಧಿಗಳು) ಸಭೆ ನಡೆದಿದೆ.

'ಸರ್ಕಾರ 2016ರಲ್ಲಿ ಕನಿಷ್ಠ ವೇತನವನ್ನು ಕೊನೆಯದಾಗಿ ಪರಿಷ್ಕರಿಸಿದೆ. ಅದೇ ಲೆಕ್ಕಾಚಾರವನ್ನು ತೆಗೆದುಕೊಂಡು ಶೇ 10ರಷ್ಟು ಹೆಚ್ಚಿಸಲು ಈಗ ಚಿಂತನೆ ನಡೆಸಿದೆ. ಆಗ ₹ 10 ಸಾವಿರ ತುಟ್ಟಿಭತ್ಯೆ ಸೇರಿ ₹ 13 ಸಾವಿರದಿಂದ ₹ 15 ಸಾವಿರವರೆಗೆ ಕನಿಷ್ಠ ವೇತನ ಸಿಗುತ್ತಿದೆ. ಈ ರೀತಿ ಕನಿಷ್ಠ ವೇತನ ಲೆಕ್ಕಾಚಾರ ಅವೈಜ್ಞಾನಿಕ ಕ್ರಮ. ಮೇ ತಿಂಗಳಲ್ಲಿ ಹಣದುಬ್ಬರ ಶೇ 7ರಷ್ಟಿದ್ದರೆ ಕಳೆದ ತಿಂಗಳು ಅದು ಶೇ 7.8ರಷ್ಟಾಗಿದೆ. ಹೀಗಿರುವಾಗ ಶೇ 10ರಷ್ಟು ಹೆಚ್ಚಿಸುವುದು ಸಮಂಜಸವಲ್ಲ. ವೇತನ ಪರಿಷ್ಕರಿಸಲು ಸರ್ಕಾರಕ್ಕೆ ಮನಸ್ಸಿದೆ. ಆದರೆ, ಲೆಕ್ಕಾಚಾರ ಮಾಡಲು ತಯಾರಿಲ್ಲ' ಎಂದು ಎಐಟಿಯುಸಿ ರಾಜ್ಯ ಕಾರ್ಯದರ್ಶಿ ಎಂ. ಸತ್ಯಾನಂದ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಸಂಪರ್ಕಕ್ಕೆ ಸಿಗದ ಆಯುಕ್ತ: ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಂ ಪಾಷಾ ಅವರಿಗೆ ಕರೆ ಮಾಡಿದರೂ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಕಾರ್ಮಿಕ ಸಮುದಾಯದ ಬೇಡಿಕೆ

'ವೈಜ್ಞಾನಿಕವಾಗಿ ಲೆಕ್ಕಾಚಾರ ಮಾಡಿ ವೇತನ ಪರಿಷ್ಕರಿಸಬೇಕು. ಒಂದು ಕುಟುಂಬದಲ್ಲಿ ನಾಲ್ಕು ಜನ ಇದ್ದರೆ, ಮೂರು ಜನಕ್ಕೆ ದವಸಧಾನ್ಯ, ತರಕಾರಿ, ಮೊಟ್ಟೆ, ಬಟ್ಟೆ, ವಸತಿ, ಬಾಡಿಗೆ, ಶಿಕ್ಷಣ, ವೈದ್ಯಕೀಯ, ಸಾರಿಗೆಗೆ ತಿಂಗಳಿಗೆ ಎಷ್ಟು ಬೇಕಾಗುತ್ತದೆ ಲೆಕ್ಕ ಹಾಕಿಕೊಂಡು ಕನಿಷ್ಠ ವೇತನ ಲೆಕ್ಕಾಚಾರ ಮಾಡಲಾಗುತ್ತದೆ. ಜನತಾ ಬಜಾರ್, ಹಾಪ್ ಕಾಮ್ಸ್‌ನಲ್ಲಿ ಇವತ್ತಿನ ಬೆಲೆ ಗಣನೆಗೆ ತೆಗೆದುಕೊಂಡು ವೈಜ್ಞಾನಿಕವಾಗಿ ಲೆಕ್ಕಮಾಡಿ ಕನಿಷ್ಠ ವೇತನ ಪರಿಷ್ಕರಿಸುವಂತೆ ನಾವು ಬೇಡಿಕೆ ಇಟ್ಟಿದ್ದೇವೆ' ಎಂದು ಎಐಟಿಯುಸಿ ರಾಜ್ಯ ಕಾರ್ಯದರ್ಶಿ ಎಂ. ಸತ್ಯಾನಂದ ಹೇಳಿದರು.

'ಕರ್ನಾಟಕಕ್ಕೆ ಹೋಲಿಸಿದರೆ ನೆರೆ ರಾಜ್ಯಗಳಲ್ಲಿ ಕನಿಷ್ಠ ವೇತನ ಕಡಿಮೆ ಇದೆ. ಕನಿಷ್ಠ ವೇತನ ಹೆಚ್ಚಿಸಿದರೆ ಸಣ್ಣ ಕೈಗಾರಿಕೆಗಳು ನೆರೆಯ ರಾಜ್ಯಗಳಿಗೆ ಸ್ಥಳಾಂತರಗೊಳ್ಳುವ ಆತಂಕವಿದೆ

ಬಿ.ಸಿ. ಪ್ರಭಾಕರ, ಅಧ್ಯಕ್ಷ, ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಷನ್

ಕೋವೊವ್ಯಾಕ್ಸ್ ರಫ್ತಿಗೆ ಅನುಮತಿ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ಕೋವೊವ್ಯಾಕ್ಸ್‌ನ 32.4 ಲಕ್ಷ ಡೋಸ್‌ಗಳನ್ನು 'ನುವಾಕ್ಸೊವಿಡ್' ಹೆಸರಿನಲ್ಲಿ ಅಮೆರಿಕಕ್ಕೆ ರಫ್ತು ಮಾಡಲು ಕೇಂದ್ರ ಸರ್ಕಾರವು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಕ್ಕೆ ಶುಕ್ರವಾರ ಅನುಮತಿ ನೀಡಿದೆ.

ಜುಲೈ 3ರಂದು ಲಸಿಕೆ ರವಾನೆಯಾಗುವ ಸಾಧ್ಯತೆ ಇದೆ. ರಫ್ತಿಗೆ ಅನುಮೋದನೆ ನೀಡುವಂತೆ ಎಸ್‌ಐಐನ ಸರ್ಕಾರಿ ಮತ್ತು ನಿಯಂತ್ರಣ ವ್ಯವಹಾರಗಳ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಸರ್ಕಾರಕ್ಕೆ ಪತ್ರ ಬರೆದಿದ್ದರು.

ಕ್ಷಮೆಯಾಚಿಸಿದ ಕಾಂಗ್ರೆಸ್ ಮುಖಂಡ ಕೆ.ಎನ್. ರಾಜಣ್ಣ

ದೇವೇಗೌಡರ ವಿರುದ್ಧ ಆಕ್ಷೇಪಾರ್ಹ ಮಾತು

ಪ್ರಜಾವಾಣಿ ವಾರ್ತೆ

ತುಮಕೂರು: 'ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಈಗ ಇಬ್ಬರ ಮೇಲೆ ಕೈ ಹಾಕಿಕೊಂಡು ಹೋಗುತ್ತಿದ್ದಾರೆ. ನಾಲ್ವರ ಮೇಲೆ ಹೋಗುವುದು ಹತ್ತಿರದಲ್ಲೇ ಇದೆ' ಎಂದು ಕಾಂಗ್ರೆಸ್ ಮುಖಂಡ ಹಾಗೂ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್. ರಾಜಣ್ಣ ನೀಡಿರುವ ಹೇಳಿಕೆ ವಿವಾದಕ್ಕೆ ಈಡಾಗಿದೆ.

ಮಧುಗಿರಿ ತಾಲ್ಲೂಕಿನ ಕಾವಣದಾಲ ಗ್ರಾಮದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರೊಂದಿಗೆ ಮಾತನಾಡುವಾಗ ಅವರು ಈ ಹೇಳಿಕೆ ನೀಡಿದ್ದಾರೆ.

ರಾಜಣ್ಣ ಹೇಳಿಕೆಗೆ ಸಾಮಾಜಿಕ ಜಾಲ ತಾಣಗಳಲ್ಲಿ ವಿರೋಧ ವ್ಯಕ್ತವಾಗಿದೆ. ಈ ಮಾತುಗಳಿರುವ ವಿಡಿಯೊವನ್ನು ನೆಟ್ಟಿಗರು ಹಂಚಿಕೊಂಡಿದ್ದು, ಕಿಡಿಕಾರಿದ್ದಾರೆ.

ಇಂತಹ ಹೇಳಿಕೆ ನೀಡುವುದು ಸರಿಯೇ ಎಂದು ಪ್ರಶ್ನಿಸಿದ್ದಾರೆ. ಇದು ಅವರ ಮನಸ್ಥಿತಿಯನ್ನು ತೋರಿಸುತ್ತದೆ ಎಂದು ಟೀಕಿಸಿದ್ದಾರೆ.

ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ ಶುಕ್ರವಾರ ತುರ್ತು ಪತ್ರಿಕಾ ಗೋಷ್ಠಿ ನಡೆಸಿದ ರಾಜಣ್ಣ, 'ನನ್ನ ಮಾತಿನಿಂದ ದೇವೇಗೌಡ, ಅವರ ಅಭಿಮಾನಿಗಳಿಗೆ ಬೇಸರವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ. ಕ್ಷಮೆಯನ್ನೂ ಕೋರುತ್ತೇನೆ. ಗೌಡರ ಮನೆಗೆ ಹೋಗಿ ಮಾತನಾಡುತ್ತೇನೆ. ಯಾವ ಸಂದರ್ಭದಲ್ಲಿ ಮಾತನಾಡಿದ್ದೇನೆ ಎಂಬುದನ್ನು ಮನದಟ್ಟು ಮಾಡಿಕೊಡುತ್ತೇನೆ. ಅವರ ಸಾವನ್ನು ಬಯಸುವವನಲ್ಲ. ದೇಶ, ರಾಜ್ಯಕ್ಕೆ ಅವರ ಕೊಡುಗೆ ಮರೆಯುವಂತಿಲ್ಲ' ಎಂದು ಹೇಳಿದರು.

ಪಿತೂರಿ ನಡೆದಿವೆ: 'ತಳಸಮುದಾಯಗಳು ಅಧಿಕಾರಕ್ಕೆ ಬರಬಾರದು ಎಂಬ ಪಿತೂರಿಗಳು ನಡೆದಿವೆ. ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ವಿರುದ್ಧ ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಸದಾ ಟೀಕೆ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಅಂಗವಾಗಿ ಆಗಸ್ಟ್ 3ರಂದು ದಾವಣಗೆರೆಯಲ್ಲಿ ಸಿದ್ದರಾಮೋತ್ಸವಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇದಕ್ಕೆ ಹಿನ್ನಡೆ ಉಂಟು ಮಾಡಲು ಪಿತೂರಿ ನಡೆದಿದೆ' ಎಂದು ಆರೋಪಿಸಿದರು.

ರಾಜಣ್ಣಗೆ ಅಪ್ಪ ಇಲ್ವಾ: ಇಬ್ರಾಹಿಂ

ಬೆಂಗಳೂರು: 'ದೇವೇಗೌಡರು ರಾಜ್ಯದ ಪಿತಾಮಹ, ಕರ್ನಾಟಕದ ಆರೂವರೆ ಕೋಟಿ ಜನರ ತಂದೆ ಇದ್ದಂತೆ. ಕೆ.ಎನ್.ರಾಜಣ್ಣ, ನಿಮಗೆ ಅಪ್ಪ ಇಲ್ಲವಾ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಪ್ರಶ್ನಿಸಿದರು.

'ದೇವೇಗೌಡರು ಅಜರಾಮರ, ಅವರಿಗೆ ಸಾವಿಲ್ಲ. ಸೂರ್ಯ, ಚಂದ್ರ ಇರುವ ತನಕವೂ ಅವರ ಹೆಸರು ಶಾಶ್ವತವಾಗಿರುತ್ತದೆ. ಕೆಂಪುಕೋಟೆ ಮೇಲೆ ಧ್ವಜ ಹಾರಿಸಿದ ಏಕೈಕ ಕನ್ನಡಿಗ ಎಂಬ ಹೆಗ್ಗಳಿಕೆ ಅವರಿಗಿದೆ. ರಾಜಣ್ಣ ಕೂಡಲೇ ದೇವೇಗೌಡರ ಮನೆಗೆ ಬಂದು ಕ್ಷಮೆ ಯಾಚಿಸಬೇಕು' ಎಂದು ಅವರು ಆಗ್ರಹಿಸಿದರು.

ದೇವೇಗೌಡರ ಕಾಲಿನ ದೂಳಿಗೂ ಸಮನಲ್ಲದ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್.ರಾಜಣ್ಣ, ಇದೇ ರೀತಿ ಹುಚ್ಚಾಟದ ಹೇಳಿಕೆ ನೀಡಿದರೆ, ಜನರು ನಾಯಿಗೆ ಹೊಡೆದಂತೆ ಹೊಡೆಯುತ್ತಾರೆ

–ಪ್ರಜ್ವಲ್ ರೇವಣ್ಣ, ಸಂಸದ

ಅಪಹಾಸ್ಯ ಬೇಡ– ಹೋರಾಡುವ ಶಕ್ತಿ ಇದೆ: ದೇವೇಗೌಡ ಪ್ರತ್ಯುತ್ತರ

ಬೆಂಗಳೂರು: 'ಕೂತರೆ ಎದ್ದೇಳಲು ಆಗಲ್ಲ. ನನ್ನಲ್ಲಿ ಶಕ್ತಿ ಇಲ್ಲ ಎಂದು ಕೆಲವರು ಅಪಹಾಸ್ಯ ಮಾಡುತ್ತಿದ್ದಾರೆ. ಶಕ್ತಿ ಇದೆ ಎಂಬುದನ್ನು ಹೋರಾಟದ ಮೂಲಕ ತೋರಿಸುತ್ತೇನೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಕೆ.ಎನ್.ರಾಜಣ್ಣ ಅವರ ಹೇಳಿಕೆಗೆ ಪರೋಕ್ಷವಾಗಿ ಪ್ರತ್ಯುತ್ತರ ನೀಡಿದರು.

ಜೆಡಿಎಸ್ ಬೆಂಗಳೂರು ನಗರ ಘಟಕ ಜೆ.ಪಿ. ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಜನತಾ ಮಿತ್ರ' ವಾಹನಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಭಗವಂತನ ಅನುಗ್ರಹ, ದೈವಶಕ್ತಿ ನಮ್ಮ ಮೇಲೆ ಇದೆ. ಹೋರಾಟದ ಬದುಕಿನಲ್ಲಿ ಎಂದಿಗೂ ಎದೆಗುಂದಿಲ್ಲ. ಮುಂದೆಯೂ ಎದೆಗುಂದುವುದಿಲ್ಲ' ಎಂದರು.

'ಹಳ್ಳಿ ರೈತನ ಮಗ, ಇವನೇನು ಸಾಧಿಸಬಲ್ಲ ಎಂದು ಹೇಳಿದ್ದ ಮಹಾನಾಯಕರೂ ಇದ್ದಾರೆ. ಪಕ್ಷವನ್ನು ಇಲ್ಲದಂತೆ ಮಾಡಬೇಕು ಎಂದು ಹೊರಟವರೂ ಇದ್ದಾರೆ. ಅದು ಆಗುವುದಿಲ್ಲ ಎಂಬುದು ಈಗ ಗೊತ್ತಾಗಿದೆ. ಕಾರ್ಯಕರ್ತರು ಆ ಶಕ್ತಿಯನ್ನು ಉಳಿಸಿಕೊಂಡಿದ್ದಾರೆ' ಎಂದು ಹೇಳಿದರು.

ಮಧುಗಿರಿ ಚುನಾವಣೆಯಲ್ಲಿ ರಾಜಣ್ಣಗೆ ತಕ್ಕ ಶಾಸ್ತಿ: ಕುಮಾರಸ್ವಾಮಿ ಎಚ್ಚರಿಕೆ

ಬೆಂಗಳೂರು: 'ದೇವೇಗೌಡರ ಬಗ್ಗೆ ಅತ್ಯಂತ ಅನಾಗರಿಕವಾಗಿ, ವಿಕೃತವಾಗಿ ಮಾತನಾಡಿರುವ ಕೆ.ಎನ್.ರಾಜಣ್ಣ ಅವರ ದುರಹಂಕಾರದ ಮಾತುಗಳಿಗೆ ಮಧುಗಿರಿಯ ಕಾರ್ಯಕರ್ತರು ಮುಂದಿನ ಚುನಾವಣೆಯಲ್ಲಿ ತಕ್ಕ ಶಾಸ್ತಿ ಮಾಡಲಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಎಂದು ಎಚ್ಚರಿಸಿದರು.

ಜೆಡಿಎಸ್ ಬೆಂಗಳೂರು ನಗರ ಘಟಕ ಜೆ.ಪಿ.ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಜನತಾ ಮಿತ್ರ' ವಾಹನಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, 'ದೇವೇಗೌಡರ ಆಯುಸ್ಸು ಬರೆಯಲು ನೀನು ಬ್ರಹ್ಮ ಅಲ್ಲ, ಹುಲು ಮಾನವ. ಅವರು ಶತಾಯುಷಿ ಆಗಿ ಬದುಕುತ್ತಾರೆ. 2004ರ ಚುನಾವಣೆಯಲ್ಲಿ ಕೊನೆಯ ದಿನ ದೇವೇಗೌಡರು ಪ್ರಚಾರ ಮಾಡದಿದ್ದರೆ ರಾಜಣ್ಣ ವಿಧಾನಸೌಧದ ಮೆಟ್ಟಿಲು ಹತ್ತಲು ಸಾಧ್ಯವೇ ಆಗುತ್ತಿರಲಿಲ್ಲ. ಅಂದು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ದೇವೇಗೌಡರು ಪ್ರಚಾರ ಮಾಡಿದ್ದರು. ಅವರ ಆರೋಗ್ಯದ ಬಗ್ಗೆ ಕೇವಲವಾಗಿ ಮಾತನಾಡುವುದೇ' ಎಂದು ಪ್ರಶ್ನಿಸಿದರು.

ಹಾವೇರಿ, ಯಾದಗಿರಿ, ತುಮಕೂರು, ವಿಜಯಪುರ ಜಿಲ್ಲೆಗಳ ಜನವಸತಿ ಪ್ರದೇಶ

ಜಲಜೀವನ್ ಮಿಷನ್‌ಗೆ ₹4,000 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಜೀವನ್ ಮಿಷನ್ ಯೋಜನೆಯಡಿ ₹4,000 ಕೋಟಿ ವೆಚ್ಚದಲ್ಲಿ ಯಾದಗಿರಿ, ತುಮಕೂರು, ವಿಜಯಪುರ ಜಿಲ್ಲೆಗಳಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆ ಜಾರಿಗೊಳಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಯಾದಗಿರಿ ಜಿಲ್ಲೆಯ ಎಲ್ಲ ಗ್ರಾಮೀಣ ಜನವಸತಿಗಳಿಗೆ ಹಾಗೂ 3 ನಗರ ಸ್ಥಳೀಯ ಸಂಸ್ಥೆಗಳಾದ ಕಕ್ಕೇರಾ, ಕೆಂಭಾವಿ ಮತ್ತು ಹುಣಸಗಿ ಪಟ್ಟಣಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ₹2,054 ಕೋಟಿ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಎಂದು ಅವರು ಹೇಳಿದರು.

- ತುಮಕೂರು ಜಿಲ್ಲೆ ಚಿಕ್ಕನಾಯಕಹಳ್ಳಿ ತಾಲ್ಲೂಕಿನ ಬೋರನಕಣಿವೆ ಅಣೆಕಟ್ಟಿನಿಂದ ಗಾಣಧಾಳು, ಹೊಯ್ಸಳಕಟ್ಟೆ, ಕೆಂಕೆರೆ, ಬರಕನಾಳು, ದೊಡ್ಡ ಬಿದರೆ ಮತ್ತು ದಸೂಡಿ ಗ್ರಾಮ ಪಂಚಾಯಿತಿಗಳ 147 ಜನ ವಸತಿಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ₹115 ಕೋಟಿ ಅಂದಾಜು ವೆಚ್ಚದಲ್ಲಿ ಜಾರಿಗೆ ಒಪ್ಪಿಗೆ.
- ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ 398 ಜನವಸತಿಗಳಿಗೆ ಹೇಮಾವತಿ ನದಿಯಿಂದ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯನ್ನು ₹435 ಕೋಟಿ ಅಂದಾಜು ವೆಚ್ಚದಲ್ಲಿ ಜಾರಿಗೆ ಅನುಮೋದನೆ.
- ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಮತ್ತು ಸಿಂದಗಿ ಪಟ್ಟಣಗಳು ಹಾಗೂ ಇವೆರಡೂ ತಾಲ್ಲೂಕುಗಳಲ್ಲಿನ ಎಲ್ಲಾ ಗ್ರಾಮೀಣ ಜನವಸತಿಗಳು, ದೇವರ ಹಿಪ್ಪರಗಿ, ಆಲಮೇಲ, ತಾಳಿಕೋಟೆ ಮತ್ತು ನಲತವಾಡ್‌ಗಳಲ್ಲಿ ಬಹುಗ್ರಾಮ ಯೋಜನೆಯಡಿ ಕುಡಿಯುವ ನೀರು ಪೂರೈಕೆಗೆ ₹1,358 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ.
- ಹಾವೇರಿ ಜಿಲ್ಲೆಯ 285 ಜನವಸತಿಗಳಿಗೆ ₹837 ಕೋಟಿ ವೆಚ್ಚದಲ್ಲಿ ಬಹುಗ್ರಾಮ ಕುಡಿಯುವ ನೀರು ಯೋಜನೆ ಜಾರಿಗೆ ಒಪ್ಪಿಗೆ.
- ಚಳ್ಳಕೆರೆ ತಾಲ್ಲೂಕಿನ ಮೈಲನಹಳ್ಳಿ ಗ್ರಾಮದ ಬಳಿ ವೇದಾವತಿ ನದಿಗೆ ಅಡ್ಡಲಾಗಿ ₹19.90 ಕೋಟಿ ವೆಚ್ಚದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ.
- ಮಂಗಳೂರಿನ ಉಳ್ಳಾಲ ನಗರಸಭಾ ವ್ಯಾಪ್ತಿ ಕೋಟೆಕಾರ್ ಪಟ್ಟಣ ಪಂಚಾಯಿತಿ, ಸೋಮೇಶ್ವರ ಪುರಸಭೆ ವ್ಯಾಪ್ತಿಯ 24 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಯ ₹249.98 ಕೋಟಿ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ.
- ಶಿರಸಿ ತಾಲ್ಲೂಕಿನ ಖಾನಾಪುರ–ತಾಳಗುಪ್ಪ ರಸ್ತೆಯ ರಾಜ್ಯ ಹೆದ್ದಾರಿ 93ರ ಐದು ರಸ್ತೆ, ವೃತ್ತಗಳ ಸುಧಾರಣೆಗೆ ₹14.72 ಕೋಟಿ ವೆಚ್ಚದಲ್ಲಿ ಭೂಸ್ವಾದೀನಪಡಿಸಿಕೊಳ್ಳಲು ಅನುದಾನ ಬಿಡುಗಡೆಗೆ ಆಡಳಿತಾತ್ಮಕ ಅನು ಮೋದನೆ ಒಪ್ಪಿಗೆ.
- ವಿಧಾನಮಂಡಲದ ಉಭಯ ಸದನಗಳ ಅಧಿವೇಶನ ಈ ತಿಂಗಳು (ಜುಲೈ) ನಡೆಸುವುದಿಲ್ಲ, ಆಗಸ್ಟ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ನ್ಯಾಯಾಲಯಗಳಿಗೆ ಕಟ್ಟಡ ನಿರ್ಮಾಣ

ಬೆಳಗಾವಿ, ಚಿಕ್ಕಮಗಳೂರು, ಕೋಲಾರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನ್ಯಾಯಾಲಯ ಕಟ್ಟಡಗಳ ನಿರ್ಮಾಣಕ್ಕೆ ಒಪ್ಪಿಗೆ ನೀಡಲಾಯಿತು ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

- ಬೆಳಗಾವಿ ಜಿಲ್ಲೆ ಚಿಕ್ಕೋಡಿಯಲ್ಲಿ ಪ್ರಿನ್ಸಿಪಲ್ ಸಿವಿಲ್ ಜಡ್ಜ್ ಕೋರ್ಟ್ ಸಂಕೀರ್ಣ ಕಟ್ಟಡವನ್ನು ₹32 ಕೋಟಿ ಅಂದಾಜಿನಲ್ಲಿ ನಿರ್ಮಿಸಲು ಒಪ್ಪಿಗೆ
- ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ಪಟ್ಟಣದಲ್ಲಿ ₹11 ಕೋಟಿ ವೆಚ್ಚದಲ್ಲಿ ನ್ಯಾಯಾಲಯ ಸಂಕೀರ್ಣ ನಿರ್ಮಿಸಲು ಅನುಮೋದನೆ. ಚಿಕ್ಕಮಗಳೂರು ನಗರದಲ್ಲಿ ಮಾದರಿ ನ್ಯಾಯಾಲಯ ಸಂಕೀರ್ಣದ 2 ನೇ ಹಂತದ ಕಟ್ಟಡವನ್ನು ₹28 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಒಪ್ಪಿಗೆ.
- ಕೋಲಾರದಲ್ಲಿ ₹25 ಕೋಟಿ ವೆಚ್ಚದಲ್ಲಿ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಅನುಮೋದನೆ. ಇದೇ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ₹15 ಕೋಟಿ ವೆಚ್ಚದಲ್ಲಿ ಹೊಸ ನ್ಯಾಯಾಲಯ ಕಟ್ಟಡ ನಿರ್ಮಿಸಲು ಒಪ್ಪಿಗೆ
- ಬಳ್ಳಾರಿ ನಗರದ ಪಾರ್ವತಿ ನಗರ ಬಡಾವಣೆಯಲ್ಲಿ ನ್ಯಾಯಾಲಯ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ₹121 ಕೋಟಿಗೆ ಅನುಮೋದನೆ.
- ಕಲಬುರ್ಗಿಯಲ್ಲಿ ರಾಷ್ಟ್ರೋತ್ಥಾನ ಸಂಸ್ಥೆಯ ಶಾಲಾ ಕಟ್ಟಡದ ಜಮೀನಿಗೆ ನಗರ ಪ್ರಾಧಿಕಾರ ನೀಡುವ ಶುಲ್ಕದಲ್ಲಿ ಶೇ 25 ರಷ್ಟು ವಿನಾಯಿತಿ.
- ಶಿವಮೊಗದಲ್ಲಿ ನಿರ್ಮಿಸುತ್ತಿರುವ ವಿಮಾನ ನಿಲ್ದಾಣದಲ್ಲಿ ರಾತ್ರಿ ವೇಳೆ ಲ್ಯಾಂಡಿಂಗ್ ವ್ಯವಸ್ಥೆ ಮಾಡಲು ₹65.5 ಕೋಟಿ ಹೆಚ್ಚುವರಿ ಮೊತ್ತ ನೀಡಲು ತೀರ್ಮಾನ.
- ಪಾಂಡವಪುರ ನಿರಾಣಿ ಶುಗರ್ಸ್ ಪಾವತಿ ಮಾಡಬೇಕಿರುವ ₹20 ಕೋಟಿ ಸ್ಟಾಂಪ್ ಡ್ಯೂಟಿಯನ್ನು ಸರ್ಕಾರವೇ ಪಾವತಿಸಲಿದೆ. ಕಂಪನಿಯು 10 ವರ್ಷಗಳಲ್ಲಿ ಮರುಪಾವತಿ ಮಾಡುವ ಷರತ್ತನ್ನು ವಿಧಿಸಲಾಗಿದೆ.

ಭಾರತ ತನ್ನ ಮೌಲ್ಯಕ್ಕೆ ಬದ್ಧವಾಗಲಿ: ರಷದ್

ವಾಷಿಂಗ್ಟನ್ (ಪಿಟಿಐ): 'ಭಾರತದಲ್ಲಿ ಹಲವು ಧಾರ್ಮಿಕ ಸಮುದಾಯಗಳನ್ನು ನಡೆಸಿಕೊಳ್ಳುತ್ತಿರುವ ರೀತಿ ಅತ್ಯಂತ ಕಳವಳಕಾರಿ. ಈ ಸಮಸ್ಯೆಗಳನ್ನು ಪರಿಹರಿಸಲು ಭಾರತದ ಅಧಿಕಾರಿಗಳೊಂದಿಗೆ ಅಮೆರಿಕ ನೇರವಾಗಿ ವ್ಯವಹರಿಸುತ್ತಿದೆ' ಎಂದು ವಿಶ್ವದೆಲ್ಲೆಡೆ ಧಾರ್ಮಿಕ ಸ್ವಾತಂತ್ರ್ಯದ ಮೇಲೆ ನಿಗಾ ವಹಿಸುವ ಅಮೆರಿಕದ ವಿದೇಶಾಂಗ ಇಲಾಖೆಯ ರಾಯಭಾರಿ ರಷದ್ ಹುಸೇನ್ ಹೇಳಿದ್ದಾರೆ.

ಗುರುವಾರ ಇಲ್ಲಿ ನಡೆದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ (ಐಆರ್‌ಎಫ್) ಶೃಂಗಸಭೆಯಲ್ಲಿ ಅವರು ಮಾತನಾಡಿದರು.

ವಿಶ್ವದಲ್ಲಿ ನಡೆಯುತ್ತಿರುವ ಸಾಮೂಹಿಕ ಹತ್ಯೆ ಕುರಿತು ಹಾಲೊಕಾಸ್ಟ್ ಮ್ಯೂಸಿಯಂನ ಮುನ್ನೆಚ್ಚರಿಕೆ ಯೋಜನೆಯ ವರದಿಯ ಪಟ್ಟಿಯಲ್ಲಿ ಭಾರತವು ಎರಡನೇ ಸ್ಥಾನದಲ್ಲಿರುವುದನ್ನು ಅವರು ಉಲ್ಲೇಖಿಸಿದರು.

'ನನ್ನ ತಂದೆ 1969ರಲ್ಲಿ ಭಾರತದಿಂದ ಅಮೆರಿಕಕ್ಕೆ ವಲಸೆ ಬಂದವರು. ಈ ದೇಶ ಅವರಿಗೆ ಎಲ್ಲವನ್ನೂ ನೀಡಿದೆ. ಆದರೆ, ಅವರು ಭಾರತವನ್ನು ತುಂಬಾ ಪ್ರೀತಿಸುತ್ತಾರೆ. ಭಾರತದಲ್ಲಿನ ಮೌಲ್ಯಗಳಿಗೆ ತಕ್ಕಂತೆ ಬದುಕಲು ಬಯಸುತ್ತಾರೆ. ಹೆತ್ತವರು ಮತ್ತು ನಾನು ಅಲ್ಲಿನ ಪ್ರತಿ ಬೆಳವಣಿಗೆಯ ಬಗ್ಗೆಯೂ ಚರ್ಚಿಸುತ್ತೇವೆ' ಎಂದರು.

ಆರ್‌ಟಿಒಗೆ ₹1,000 ಪಾವತಿಸಿ ಬೈಕ್‌ಗೆ ಫ್ಯಾನ್ಸಿ ಸಂಖ್ಯೆ ಪಡೆದಿದ್ದ ಹಂತಕ ರಿಯಾಜ್ ಅನ್ಸಾರಿ

ಕನ್ಹಯ್ಯ ಹತ್ಯೆ: ಮತ್ತಿಬ್ಬರ ಬಂಧನ

ಉದಯಪುರ (ಪಿಟಿಐ): ಟೇಲರ್ ಕನ್ಹಯ್ಯ ಲಾಲ್ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಮತ್ತಿಬ್ಬರು ಆರೋಪಿಗಳನ್ನು ಗುರುವಾರ ತಡರಾತ್ರಿ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



ರಿಯಾಜ್ ಅನ್ಸಾರಿ

ಬಂಧಿತರನ್ನು ಮೊಹ್ಸಿನ್ ಮತ್ತು ಆಸಿಫ್ ಎಂದು ಗುರುತಿಸಲಾಗಿದೆ. 'ಈ ಇಬ್ಬರು ಆರೋಪಿಗಳು ಅನ್ಸಾರಿ ಮತ್ತು ಗೌಸ್ ಜತೆಗೆ ಕನ್ಹಯ್ಯ ಹತ್ಯೆಯ ಸಂಚಿನಲ್ಲಿ ಭಾಗಿಯಾಗಿದ್ದಾರೆ. ಆರೋಪಿಗಳ ವಿಚಾರಣೆ ನಡೆಯುತ್ತಿದೆ' ಎಂದು ಪೊಲೀಸ್ ಅಧಿಕಾರಿಗಳು ಶುಕ್ರವಾರ ತಿಳಿಸಿದರು.

ಕನ್ಹಯ್ಯ ಲಾಲ್ ಅವರನ್ನು ಮಂಗಳವಾರ ಅವರ ಅಂಗಡಿಯಲ್ಲಿ ಹಂತಕರಾದ ರಿಯಾಜ್ ಅನ್ಸಾರಿ ಮತ್ತು ಗೌಸ್ ಮಹಮ್ಮದ್ ಕ್ರೂರವಾಗಿ ಶಿರಚ್ಛೇದ ಮಾಡಿದ್ದರು. ಘಟನೆ ನಡೆದ ಕೆಲವೇ ಗಂಟೆಯಲ್ಲಿ ಈ ಇಬ್ಬರು ಆರೋಪಿಗಳನ್ನು ರಾಜಸ್ಥಾನ ಪೊಲೀಸರು ಬಂಧಿಸಿದ್ದರು.

ಐಜಿ, ಎಸ್‌ಪಿ ವರ್ಗಾವಣೆ (ಜೈಪುರ ವರದಿ): ದೇಶದಾದ್ಯಂತ ಆಕ್ರೋಶ, ಪ್ರತಿಭಟನೆಗೆ ಕಾರಣವಾಗಿರುವ ಉದಯಪುರದ ಘಟನೆ ಬಳಿಕ ಇಡೀ ಪೊಲೀಸ್ ಇಲಾಖೆಗೆ ರಾಜಸ್ಥಾನದ ಸರ್ಕಾರ ದೊಡ್ಡ ಸರ್ಜರಿ ಮಾಡಿದೆ.

ಉದಯಪುರದ ಪೊಲೀಸ್ ಮಹಾನಿರೀಕ್ಷಕ (ಐಜಿ) ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಹಿತ 32 ಐಪಿಎಸ್ ಅಧಿಕಾರಿಗಳನ್ನು ರಾಜ್ಯದ ಸಿಬ್ಬಂದಿ ಇಲಾಖೆ ಎತ್ತಂಗಡಿ ಮಾಡಿದೆ. ಹಿಂಗ್ಲಾಜ್ ದನ್ ಅವರನ್ನು ಐಜಿ ಹುದ್ದೆಯಿಂದ ತೆಗೆದು, ನಾಗರಿಕ ಹಕ್ಕುಗಳ ಐಜಿ ಹುದ್ದೆಗೆ ವರ್ಗಾಯಿಸಲಾಗಿದೆ. ಉಗ್ರ ನಿಗ್ರಹ ದಳದ (ಎಟಿಎಸ್) ಐಜಿ ಪ್ರಫುಲ್ ಕುಮಾರ್ ಅವರನ್ನು ನೂತನ ಐಜಿಯಾಗಿ ನೇಮಕ ಮಾಡಲಾಗಿದೆ.

ಉದಯಪುರದ ಎಸ್‌ಪಿಯಾಗಿದ್ದ ಮನೋಜ್ ಕುಮಾರ್ ಅವರನ್ನು ಕೋಟಾದ ರಾಜಸ್ಥಾನ ಸಶಸ್ತ್ರ ಪಡೆಯ (ಆರ್‌ಪಿಎ) ಎರಡನೇ ಬೆಟಾಲಿಯನ್‌ಗೆ ವರ್ಗಾವಣೆ ಮಾಡಲಾಗಿದೆ. ಇವರ ಸ್ಥಾನಕ್ಕೆ ಅಜ್ಮೀರದಲ್ಲಿ ಎಸ್‌ಪಿಯಾಗಿದ್ದ ವಿಕಾಸ್ ಕುಮಾರ್ ಅವರನ್ನು ತರಲಾಗಿದ್ದು, ಅವರು ಸದ್ಯ ಅಧಿಕಾರ ವಹಿಸಿಕೊಂಡಿದ್ದಾರೆ.

ಭದ್ರತೆ ಕೇಳಿದ ಜೈನರು: ಕನ್ಹಯ್ಯ ಹತ್ಯೆಯ ನಂತರ ಪ್ರಾಣ ಭೀತಿಯಲ್ಲಿರುವ ಉದಯಪುರದ ಸ್ಥಳೀಯ ಜೈನ ಸಮುದಾಯದ ಕುಟುಂಬಗಳು ಹೆಚ್ಚಿನ ಭದ್ರತೆ ಒದಗಿಸುವಂತೆ ಶುಕ್ರವಾರ ಬೇಡಿಕೆ ಇಟ್ಟಿದ್ದಾರೆ.


ಜಿಲ್ಲಾಧಿಕಾರಿಯನ್ನು ಭೇಟಿ ಮಾಡಿ ಜೈನ ಸಮುದಾಯದ ಪರವಾಗಿ ಮನವಿ ಪತ್ರ ಸಲ್ಲಿಸಿರುವ ಟೈರ್ ವ್ಯಾಪಾರಿ ನಿತಿನ್ ಜೈನ್ ಅವರು, ಸೆಕ್ಟರ್ 11ರಲ್ಲಿ ವಾಸವಿರುವ ಜೈನರ ಮನೆಗಳಿಗೆ ಭದ್ರತೆಯನ್ನು ಇನ್ನಷ್ಟು ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ.

'ದಾವತ್ -ಎ- ಇಸ್ಲಾಮಿಗೆ ಹಂತಕರ ನಂಟಿಲ್ಲ' (ಕರಾಚಿ/ಲಾಹೋರ್ ವರದಿ): ಭಾರತದ ರಾಜಸ್ಥಾನದ ಟೈಲರ್ ಕನ್ಹಯ್ಯ ಲಾಲ್ ಹತ್ಯೆಯ ಹಂತಕರೊಂದಿಗೆ ಸಂಪರ್ಕ ಇರುವುದನ್ನು ಪಾಕಿಸ್ತಾನ ಮೂಲದ ದಾವತ್ -ಎ- ಇಸ್ಲಾಮಿ ಸಂಘಟನೆ ಶುಕ್ರವಾರ ನಿರಾಕರಿಸಿದೆ.

'2611' ಬೈಕ್ ಬಳಕೆ– ಮುಂಬೈ ದಾಳಿ ಸಂಕೇತ

ಕನ್ಹಯ್ಯ ಲಾಲ್ ಅವರ ಶಿರಚ್ಛೇದ ಮಾಡಿದ ನಂತರ ಆರೋಪಿಗಳು '2611' ನೋಂದಣಿ ಸಂಖ್ಯೆಯ ಬೈಕ್‌ನಲ್ಲಿ ಪರಾರಿಯಾಗಿದ್ದರು. ಆರ್‌ಜೆ 27 ಎಎಸ್ 2611 ನೋಂದಣಿಯ ಬೈಕಿನಲ್ಲಿರುವ '2611' ಸಂಖ್ಯೆಯು 2008ರಲ್ಲಿ ಪಾಕಿಸ್ತಾನದ ಉಗ್ರರು ನಡೆಸಿದ 26/11ರ ಮುಂಬೈ ದಾಳಿಯನ್ನು ಸಂಕೇತಿಸುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಹಂತಕ ರಿಯಾಜ್ ಅನ್ಸಾರಿ 2013ರಲ್ಲಿ ಬೈಕ್ ಖರೀದಿಸಿದಾಗ ಆರ್‌ಟಿಒಗೆ ₹1,000 ಶುಲ್ಕ ಪಾವತಿಸಿ '2611' ನೋಂದಣಿ ಸಂಖ್ಯೆ (ಫ್ಯಾನ್ಸಿ ನಂಬರ್) ಪಡೆದುಕೊಂಡಿದ್ದಾನೆ. ಬೈಕ್ ಅನ್ನು ಮುಂದಿನ ಕ್ರಮಕ್ಕಾಗಿ ಎಸ್‌ಐಟಿಗೆ ಹಸ್ತಾಂತರಿಸಲಾಗಿದೆ' ಎಂದು ರಾಜ್‌ಸಮಂದ್ ಪೊಲೀಸ್ ಠಾಣಾಧಿಕಾರಿ ತಿಳಿಸಿದ್ದಾರೆ.



'ಶಿವಸೈನಿಕನ ಸಿ.ಎಂ ಮಾಡಿದ್ದೇಕೆ?'

ಪ್ರಜಾವಾಣಿ ವಾರ್ತೆ

ಮುಂಬೈ: 'ಶಿವಸೇನಾ, ಬಿಜೆಪಿ ಸರದಿಯಂತೆ ಮುಖ್ಯಮಂತ್ರಿ ಸ್ಥಾನವನ್ನು ಹಂಚಿಕೊಳ್ಳುವ ಪ್ರಸ್ತಾವವನ್ನು 2019ರಲ್ಲಿ ತಿರಸ್ಕರಿಸಿದ್ದ ಬಿಜೆಪಿ ಈಗ ಶಿವ ಸೈನಿಕ ಎಂದು ಹೇಳಿಕೊಳ್ಳುತ್ತಿರುವ ವ್ಯಕ್ತಿಯನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದೇಕೆ' ಎಂದು ಶಿವಸೇನಾ ಅಧ್ಯಕ್ಷ, ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಪ್ರಶ್ನಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನವನ್ನು ಶಿವಸೇನಾಗೆ ನೀಡಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಮಾತನ್ನು ಈಗ ಉಳಿಸಿಕೊಂಡಿದ್ದಾರೆ ಎಂದು ಉದ್ಧವ್ ವ್ಯಂಗ್ಯವಾಡಿದ್ದಾರೆ.

'ಮುಖ್ಯಮಂತ್ರಿ ಹುದ್ದೆಯನ್ನು ಸಮಾನ ಅವಧಿಗೆ ಹಂಚಿಕೊಳ್ಳುವ ಒಪ್ಪಂದ ಶಿವಸೇನಾ–ಬಿಜೆಪಿ ನಡುವೆ ಆಗಿತ್ತು. ಈ ಒಪ್ಪಂದವನ್ನು ಬಿಜೆಪಿ ಪಾಲಿಸಿದ್ದರೆ ಈಗ ಮಹಾರಾಷ್ಟ್ರದಲ್ಲಿ ಬಿಜೆಪಿ ತನ್ನ ಮುಖ್ಯಮಂತ್ರಿಯನ್ನು ಹೊಂದಿರುತ್ತಿತ್ತು. ಮಹಾ ವಿಕಾಸ ಆಘಾಡಿ ರಚನೆಯೂ ಆಗುತ್ತಿರಲಿಲ್ಲ' ಎಂದು ಉದ್ಧವ್ ಠಾಕ್ರೆ ಹೇಳಿದ್ದಾರೆ.

ಶಿವಸೇನಾ ನಾಯಕ ಏಕನಾಥ ಶಿಂಧೆ ಅವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉದ್ಧವ್, 'ಶಿವ ಸೈನಿಕ ಎಂದು ಕರೆದುಕೊಳ್ಳುವ ವ್ಯಕ್ತಿಯೊಬ್ಬನನ್ನು ಬಿಜೆಪಿ ಮುಖ್ಯಮಂತ್ರಿಯನ್ನಾಗಿ ಮಾಡಿದೆ. ಶಿಂಧೆ ಶಿವಸೇನಾ ಮುಖ್ಯಮಂತ್ರಿ ಅಲ್ಲ. ಸರ್ಕಾರದಲ್ಲಿ ಶಿವಸೇನಾ ಇಲ್ಲದಿರುವುದರಿಂದ ಅದು ಶಿವಸೇನಾ ಮುಖ್ಯಮಂತ್ರಿಯೂ ಇರಲು ಸಾಧ್ಯವಿಲ್ಲ' ಎಂದಿದ್ದಾರೆ.

2019ರ ಫೆಬ್ರುವರಿಯಲ್ಲಿ ಕೇಂದ್ರ ಸಚಿವ, ಬಿಜೆಪಿ ಅಂದಿನ ಅಧ್ಯಕ್ಷ ಅಮಿತ್ ಶಾ ಅವರು ಮುಂಬೈಗೆ ಬಂದು ಉದ್ಧವ್ ನಿವಾಸದಲ್ಲಿ ಚರ್ಚೆ ನಡೆಸಿದ್ದರು. ಲೋಕಸಭೆ ಮತ್ತು ರಾಜ್ಯಸಭೆ ಚುನಾವಣೆಯಲ್ಲಿ ಒಟ್ಟಿಗೆ ಸ್ಪರ್ಧಿಸುವ, ಸ್ಥಾನ ಹಂಚಿಕೆ ಮತ್ತು ಸಮಾನವಾದ ಅಧಿಕಾರ ಹಂಚಿಕೆ ಮಾಡಿಕೊಳ್ಳುವ ಪ್ರಸ್ತಾವಕ್ಕೆ ಅಮಿತ್ ಶಾ ಅವರು ಒಪ್ಪಿಗೆ ನೀಡಿದ್ದರು. ಬಳಿಕ, ಅಂದಿನ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಅಮಿತ್ ಶಾ ಘೋಷಿಸಿದರು ಎಂದು ಉದ್ಧವ್ ಹೇಳಿದ್ದಾರೆ.

ಸಂಸದರ ಸ್ಥಿತಿ ಇನ್ನೂ ಅನಿಶ್ಚಿತ

ಶಿವಸೇನಾದ ಕನಿಷ್ಠ 12 ಸಂಸದರು ತಮ್ಮೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಬಿಜೆಪಿ ಮುಖಂಡರು ಹೇಳಿಕೊಳ್ಳುತ್ತಿದ್ದಾರೆ. ಆದರೆ, ಶಿವಸೇನಾದ ಸಂಸದರು ಏಕನಾಥ ಶಿಂಧೆ ಪಾಳಯ ಸೇರುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ ಎಂದು ಹೇಳಲಾಗಿದೆ. ಒಟ್ಟು 19 ಸಂಸದರ ಪೈಕಿ 12 ಮಂದಿ ಶಿಂಧೆ ಜತೆಗೆ ಹೋಗಲಿದ್ದಾರೆ ಎಂದು ಕೇಂದ್ರ ಸಚಿವರೊಬ್ಬರು ಹೇಳಿದ್ದಾರೆ.

ಏಕನಾಥ ಶಿಂಧೆ ಅವರ ಮಗ ಶ್ರೀಕಾಂತ್ ಅವರು ಸಂಸತ್ ಸದಸ್ಯ. ಅವರು ತಂದೆಯನ್ನು ಬೆಂಬಲಿಸಿದ್ದಾರೆ. ಯವತ್ಮಾಲ್‌ನ ಸಂಸತ್ ಸದಸ್ಯೆ ಭಾವನಾ ಗವಳಿ ಅವರು ಬಂಡಾಯ ಎದ್ದಿರುವ ಶಾಸಕರ ಬೇಡಿಕೆ ಆಲಿಸಬೇಕು ಎಂದು ಉದ್ಧವ್‌ಗೆ ಈ ಹಿಂದೆ ಪತ್ರ ಬರೆದಿದ್ದರು. ಠಾಣೆಯ ಸಂಸದ ರಾಜನ್ ವಿಚಾರೆ ಅವರು ಶಿಂಧೆ ಅವರಿಗೆ ಆಪ್ತರಾಗಿದ್ದಾರೆ. ವಿಧಾನಸಭೆಯಲ್ಲಿ ಬಿಜೆಪಿ ಸರ್ಕಾರವು ವಿಶ್ವಾಸಮತ ಸಾಬೀತುಪಡಿಸಿದ ಬಳಿಕ ಈ ವಿಚಾರ ಪ್ರಾಧಾನ್ಯ ಪಡೆಯಲಿದೆ. ತಮ್ಮ ಕ್ಷೇತ್ರದ ಹಲವು ಶಾಸಕರು ಶಿಂಧೆ ಅವರಿಗೆ ಬೆಂಬಲ ನೀಡಿರುವುದು ಹಲವು ಸಂಸದರಿಗೆ ಚಿಂತೆ ಮೂಡಿಸಿದೆ.

ಫಡಣವೀಸ್ ಗೈರು ಹಾಜರು

ಬಿಜೆಪಿ ಮಹಾರಾಷ್ಟ್ರ ಘಟಕದ ಕಚೇರಿಯಲ್ಲಿ ಶುಕ್ರವಾರ ನಡೆದ ವಿಜಯೋತ್ಸವದಲ್ಲಿ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಗೈರುಹಾಜರಾಗಿದ್ದರು. ಹೈದರಾಬಾದ್‌ನಲ್ಲಿ ನಡೆಯಲಿರುವ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿಯೂ ಫಡಣವೀಸ್ ಭಾಗವಹಿಸುವುದಿಲ್ಲ ಎಂದು ಮೂಲಗಳು ಹೇಳಿವೆ. ವಿಧಾನಸಭೆಯ ವಿಶೇಷ ಅಧಿವೇಶನಕ್ಕೆ ಸಂಬಂಧಿಸಿದ ಸಭೆಗಳು ಇದ್ದ ಕಾರಣ ಫಡಣವೀಸ್ ಅವರು ವಿಜಯೋತ್ಸವದಲ್ಲಿ ಭಾಗವಹಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಉಕ್ರೇನ್ ಬಿಕ್ಕಟ್ಟು: ಮೋದಿ– ವ್ಲಾಡಿಮಿರ್ ಪುಟಿನ್ ಮಾತುಕತೆ

ನವದೆಹಲಿ (ಪಿಟಿಐ): ಉಕ್ರೇನ್ ಬಿಕ್ಕಟ್ಟು ಶಮನಗೊಳಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮತ್ತೊಂದು ಸುತ್ತಿನ ಮಹತ್ವದ ಮಾತುಕತೆ ನಡೆಸಿದ್ದಾರೆ.

ಪುಟಿನ್ ಜತೆಗಿನ ದೂರವಾಣಿ ಸಂಭಾಷಣೆಯ ವೇಳೆ ಮೋದಿ ಅವರು, ಉಕ್ರೇನ್ ವಿಚಾರದಲ್ಲಿ ಭಾರತ ಅನುಸರಿಸಿಕೊಂಡು ಬಂದಿರುವ ದೀರ್ಘಕಾಲದ ನಿಲುವನ್ನು ಪುನರುಚ್ಚರಿಸಿದರು. ಬಿಕ್ಕಟ್ಟು ಶಮನಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಒಲವು ತೋರಿದರು. 2021ರ ಡಿಸೆಂಬರ್‌ನಲ್ಲಿ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಿದಾಗ ತೆಗೆದುಕೊಳ್ಳಲಾಗಿದ್ದ ನಿರ್ಧಾರಗಳ ಅನುಷ್ಠಾನದ ಕುರಿತು ಇಬ್ಬರೂ ನಾಯಕರು ಚರ್ಚಿಸಿದರು ಎಂದು ಪ್ರಧಾನಿ ಕಚೇರಿಯು ಹೇಳಿಕೆಯಲ್ಲಿ ತಿಳಿಸಿದೆ.

ಒಡೆಸಾ ಮೇಲೆ ಕ್ಷಿಪಣಿ ದಾಳಿ:21 ಸಾವು

ಕೀವ್ (ಎಪಿ/ರಾಯಿಟರ್ಸ್): ಉಕ್ರೇನಿನ ಒಡೆಸಾ ಬಂದರು ನಗರ ಸಮೀಪದ ಕರಾವಳಿಯ ಪಟ್ಟಣವೊಂದರ ವಸತಿ ಪ್ರದೇಶದ ಮೇಲೆ ಶುಕ್ರವಾರ ನಸುಕಿನಲ್ಲಿ ರಷ್ಯಾ ಪಡೆಗಳು ಕ್ಷಿಪಣಿಗಳ ಸುರಿಮಳೆ ಗರೆದಿದ್ದು, ಇಬ್ಬರು ಮಕ್ಕಳು ಸೇರಿ 21 ನಾಗರಿಕರು ಮೃತಪಟ್ಟಿದ್ದಾರೆ. ಕಪ್ಪು ಸಮುದ್ರದ ಸ್ನೇಕ್ ಐಲೆಂಡ್‌ನಿಂದ ರಷ್ಯಾ ತನ್ನ ಸೇನೆಯನ್ನು ಹಿಂತೆಗೆದುಕೊಂಡ ಮರುದಿನವೇ, ಒಡೆಸಾದಿಂದ ಸುಮಾರು 50 ಕಿ.ಮೀ ದೂರದ ಕರಾವಳಿಯ ಸೆರ್ಹಿವ್ಕಾ ಪಟ್ಟಣದ ಬಹುಮಹಡಿಯ ವಸತಿ ಸಮುಚ್ಚಯಕ್ಕೆ ಮತ್ತು ರೆಸಾರ್ಟ್ ಪ್ರದೇಶಕ್ಕೆ ಕ್ಷಿಪಣಿಗಳು ಅಪ್ಪಳಿಸಿವೆ. 9 ಮಹಡಿಗಳ ಅಪಾರ್ಟ್‌ಮೆಂಟ್ ಸಂಪೂರ್ಣ ಧ್ವಂಸವಾಗಿದೆ. ಕ್ಷಿಪಣಿಗಳ ಸ್ಫೋಟದ ರಭಸಕ್ಕೆ ಹತ್ತಿರದ 14 ಮಹಡಿಗಳ ಅಪಾರ್ಟ್‌ಮೆಂಟ್ ಸಮುಚ್ಚಯಕ್ಕೂ ಹಾನಿಯಾಗಿದೆ.

'ದೇಶಕ್ಕೇ ಬೆಂಕಿ ಹಚ್ಚಿದ ನೂಪುರ್'

ಒಂದನೇ ಪುಟದಿಂದ

'ಅವರಿಗೆ ಮಾತಿನ ಮೇಲೆ ಹಿಡಿತವಿಲ್ಲ. ಸುದ್ದಿ ವಾಹಿನಿ ಕಾರ್ಯಕ್ರಮದಲ್ಲಿ ಸಡಿಲವಾದ ಮಾತುಗಳನ್ನಾಡಿದರು ಮತ್ತು ದೇಶಕ್ಕೆಲ್ಲಾ ಬೆಂಕಿ ಹಚ್ಚಿದರು. ಅದರ ಜತೆಯಲ್ಲೇ, ತಾನು ಹತ್ತು ವರ್ಷ ವಕೀಲೆಯಾಗಿದ್ದೆ ಎಂದು ಹೇಳಿಕೊಂಡಿದ್ದಾರೆ. ನಾಚಿಕೆಗೇಡು' ಎಂದು ಪೀಠವು ಹೇಳಿತು. ಜತೆಗೆ, 'ಆ ಹೇಳಿಕೆ ಕುರಿತು ಅವರು ತಕ್ಷಣವೇ ದೇಶದ ಕ್ಷಮೆಯಾಚಿಸಬೇಕಿತ್ತು' ಎಂದು ಪೀಠವು ಅಭಿಪ್ರಾಯಪಟ್ಟಿತು.

ಆಗ ನೂಪುರ್ ಪರ ವಕೀಲರು, 'ಅವರು ಈಗಾಗಲೇ ಕ್ಷಮೆ ಕೇಳಿದ್ದಾರೆ' ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ಅವರು ಕ್ಷಮೆ ಕೇಳಿದ್ದು ತಡವಾಯಿತು. ಅದೂ 'ಯಾರ ಭಾವನೆಗಾದರೂ ನೋವಾಗಿದ್ದರೆ' ಎಂಬ ಷರತ್ತಿನೊಂದಿಗೆ ಕ್ಷಮೆ ಕೇಳಿದ್ದು. ಅವರು ಸುದ್ದಿವಾಹಿನಿಯ ಚರ್ಚೆಯಲ್ಲೇ ಕ್ಷಮೆ ಕೇಳಬೇಕಿತ್ತು ಮತ್ತು ದೇಶದ ಕ್ಷಮೆಯಾಚಿಸಬೇಕಿತ್ತು' ಎಂದು ಪೀಠವು ಮತ್ತೆ ಹೇಳಿತು.

'ಆ ಹೇಳಿಕೆಗಳು ತಲ್ಲಣಕಾರಿಯಾಗಿದ್ದವು ಮತ್ತು ದುರಹಂಕಾರದಿಂದ ಕೂಡಿದ್ದವು. ಅಂತಹ ಹೇಳಿಕೆ ನೀಡುವ ಅಗತ್ಯವೇನಿತ್ತು? ಆ ಹೇಳಿಕೆಗಳಿಂದ ದೇಶದಲ್ಲಿ ಅಹಿತಕರ ಘಟನೆಗಳು ನಡೆದಿವೆ. ಅವರು ಧಾರ್ಮಿಕರಲ್ಲ, ಅವರಿಗೆ ಬೇರೆ ಧರ್ಮಗಳ ಬಗ್ಗೆ ಗೌರವವಿಲ್ಲ. ಕೀಳು ಪ್ರಚಾರಕ್ಕಾಗಿ ಅಥವಾ ರಾಜಕೀಯ ಕಾರ್ಯಸೂಚಿಗಾಗಿ ಅಥವಾ ಹೀನ ಕಾರ್ಯಸೂಚಿಗಾಗಿ ಆ ಹೇಳಿಕೆ ನೀಡಲಾಗಿದೆ' ಎಂದು ಪೀಠವು ಅಭಿಪ್ರಾಯಪಟ್ಟಿತು.

'ಒಂದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡೆರಡು ಎಫ್‌ಐಆರ್‌ಗಳು ಇರಲು ಸಾಧ್ಯವಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ಈ ಹಿಂದೆ ಬೇರೆ ಪ್ರಕರಣಗಳಲ್ಲಿ ಆದೇಶಿಸಿದೆ' ಎಂದು ನೂಪುರ್ ಪರ ವಕೀಲರು ಹೇಳಿದರು. ನಿರೂಪಕ ಅರ್ನಬ್ ಗೋಸ್ವಾಮಿ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದ ಆದೇಶವನ್ನು ಅವರು ಉಲ್ಲೇಖಿಸಿದರು.

ಆಗ ಪೀಠವು, 'ಒಬ್ಬ ಪತ್ರಕರ್ತ ಒಂದು ವಿಷಯದ ಬಗ್ಗೆ ಮಾತನಾಡುವುದಕ್ಕೂ, ರಾಜಕೀಯ ಪಕ್ಷವೊಂದರ ವಕ್ತಾರರು ತಾವು ಆಡುವ ಮಾತಿನಿಂದ ಏನಾಗುತ್ತದೆ ಎಂಬುದನ್ನು ಯೋಚಿಸದೆ ಇನ್ನೊಬ್ಬರನ್ನು ದೂಷಿಸುವುದಕ್ಕೂ ವ್ಯತ್ಯಾಸವಿದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಮಾತನಾಡುವ ಹಕ್ಕಿದೆ. ಹುಲ್ಲಿಗೆ ಬೆಳೆಯುವ ಹಕ್ಕಿದೆ. ಕತ್ತೆಗೆ ತಿನ್ನುವ ಹಕ್ಕಿದೆ' ಎಂದು ಹೇಳಿತು.

'ನಿಮ್ಮ ಕಕ್ಷಿದಾರರ ಅರ್ಜಿಯಲ್ಲಿ ದುರಹಂಕಾರವೇ ತುಂಬಿದೆ. ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಅವರಿಗಿಂತ ಚಿಕ್ಕದು ಎಂದು ಅವರು ಭಾವಿಸಿದಂತಿದೆ. ನಿಮ್ಮ ಮನವಿಯನ್ನು ಪುರಸ್ಕರಿಸಲು ಸಾಧ್ಯವಿಲ್ಲ' ಎಂದು ಹೇಳಿತು. ಆಗ ನೂಪರ್ ಶರ್ಮಾ ಅವರು ತಮ್ಮ ಅರ್ಜಿಯನ್ನು ವಾಪಸ್ ಪಡೆದರು.

ಮಣಿಪುರ ಭೂಕುಸಿತ: 20 ಶವ ಹೊರಕ್ಕೆ

ಇಂಫಾಲ (ಪಿಟಿಐ): ಮಣಿಪುರದ ನೊನಿ ಜಿಲ್ಲೆಯ ರೈಲ್ವೆ ಕಾಮಗಾರಿ ಪ್ರದೇಶದಲ್ಲಿ ಭಾರಿ ಭೂಕುಸಿತದಿಂದಾಗಿ ಅವಶೇಷಗಳ ಅಡಿ ಸಿಲುಕಿದ್ದ 20 ಶವಗಳನ್ನು ಶುಕ್ರವಾರ ಹೊರಕ್ಕೆ ತೆಗೆಯಲಾಗಿದ್ದು, ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) ಮೂರು ತಂಡ, ಸ್ಥಳೀಯ ಆಡಳಿತ, ರಾಜ್ಯ ಪೊಲೀಸ್, ಭಾರತೀಯ ಸೇನೆ ಜಂಟಿ ರಕ್ಷಣಾ ಕಾರ್ಯಾಚರಣೆ ನಡೆಸಿ, ಅವಶೇಷಗಳ ಅಡಿ ಸಿಲುಕಿದ್ದ 20 ಮೃತದೇಹಗಳನ್ನು ಹೊರಕ್ಕೆ ತೆಗೆದಿವೆ. ಎನ್‌ಡಿಆರ್‌ಎಫ್ ತಂಡ ಆಗಮನಕ್ಕೂ ಮುನ್ನ ಗಾಯಗೊಂಡಿದ್ದ 18 ಜನರನ್ನು ರಕ್ಷಿಸಿ, ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಅಸ್ಸಾಂ ಪ್ರವಾಹ: ಮತ್ತೆ ಎಂಟು ಮಂದಿ ಸಾವು (ಗುವಾಹಟಿ ವರದಿ): ಅಸ್ಸಾಂನಲ್ಲಿ ಪ್ರವಾಹ ಸ್ಥಿತಿ ಗಂಭೀರವಾಗಿದ್ದು, ಶುಕ್ರವಾರ ಮತ್ತೆ ಎಂಟು ಜನರು ಮೃತಪಟ್ಟಿದ್ದಾರೆ. 29 ಲಕ್ಷ ಜನರು ಸಂಕಷ್ಟದಲ್ಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸುಭಾಷಿತ
ಎಲ್ಲವನ್ನೂ ಕಳೆದುಕೊಂಡಾಗ, 'ಭರವಸೆ' ಮಾತ್ರ ಬಲಿಷ್ಠ ಆಯುಧ ಎಂಬುದನ್ನು ಸದಾ ನೆನಪಿನಲ್ಲಿಡಿ.
-ನೆಲ್ಸನ್ ಮಂಡೇಲಾ

ಮಹಾರಾಷ್ಟ್ರದ ರಾಜಕೀಯ ಪ್ರಹಸನ: ಅನಿರೀಕ್ಷಿತ ತಿರುವು

ಮಹಾರಾಷ್ಟ್ರ ಅಧಿಕಾರ ರಾಜಕಾರಣದ ಪ್ರಹಸನವು ಅನಿರೀಕ್ಷಿತ ತಿರುವಿನೊಂದಿಗೆ ಕೊನೆಗೊಂಡಿದೆ. ಶಿವಸೇನಾದ ಮುಖ್ಯಸ್ಥ, ಮುಖ್ಯಮಂತ್ರಿಯಾಗಿದ್ದ ಉದ್ಧವ್ ಠಾಕ್ರೆ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಉದ್ಧವ್ ವಿರುದ್ಧ ಬಂಡೆದ್ದ ಶಾಸಕರ ನಾಯಕ ಏಕನಾಥ ಶಿಂಧೆ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. 'ಅಧಿಕಾರಕ್ಕೆ ಜೋತುಬೀಳಲು ಬಯಸುವುದಿಲ್ಲ' ಎಂದು ಹೇಳಿ ಉದ್ಧವ್ ರಾಜೀನಾಮೆ ಕೊಟ್ಟಿದ್ದಾರೆ. ಆದರೆ, ರಾಜೀನಾಮೆ ಕೊಡುವುದು ಅಥವಾ ವಿಧಾನಸಭೆಯಲ್ಲಿ ವಿಶ್ವಾಸಮತ ಕಳೆದುಕೊಂಡು ಅಧಿಕಾರ ಬಿಟ್ಟುಕೊಡುವುದಲ್ಲದೆ ಬೇರೆ ಆಯ್ಕೆಗಳು ಅವರ ಮುಂದೆ ಇರಲಿಲ್ಲ. ಇದು ಹೀಗೆಯೇ ಆಗಬಹುದು ಎಂಬುದು ಶಿಂಧೆ ಬೆಂಬಲಿಗರು ಬಂಡಾಯದ ಕಹಳೆ ಊದಿದಾಗಲೇ ಗೊತ್ತಾಗಿತ್ತು. ಶಿವಸೇನಾದ ಮೂರನೇ ಎರಡರಷ್ಟು ಶಾಸಕರು ಶಿಂಧೆ ಬೆನ್ನಿಗೆ ನಿಂತಾಗ ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟ ಸರ್ಕಾರವು ಉಳಿಯುವ ಸಾಧ್ಯತೆ ಅತ್ಯಂತ ಕ್ಷೀಣವಾಗಿತ್ತು. ಬಂಡಾಯ ಎದ್ದ ಶಾಸಕರಲ್ಲಿ ಕೆಲವರು ಉದ್ಧವ್ ಬಳಿಗೆ ಮರಳಿದ್ದರೆ, ಉಳಿದವರನ್ನು ಅನರ್ಹಗೊಳಿಸುವ ಸಾಧ್ಯತೆ ಇತ್ತು. ಅಥವಾ ವಿಶ್ವಾಸಮತ ಕೋರಿಕೆಯನ್ನು ವಿಳಂಬ ಮಾಡಬಹುದಿತ್ತು. ಇದರಲ್ಲಿ ಯಾವುದೂ ಕಾರ್ಯರೂಪಕ್ಕೆ ಬರಲಿಲ್ಲ. ರಾಜೀನಾಮೆ ಕೊಡುವುದಲ್ಲದೆ ಉದ್ಧವ್‌ಗೆ ಬೇರೆ ವಿಧಿಯೇ ಇರಲಿಲ್ಲ ಎಂಬುದು ನಿಜ. ಆದರೆ, ವಿಶ್ವಾಸಮತ ಕೋರಿಕೆಗೆ ನಿಗದಿಯಾಗಿದ್ದ ಗುರುವಾರದ ಮುನ್ನಾದಿನವೇ ಅವರು ಏಕೆ ರಾಜೀನಾಮೆ ಕೊಟ್ಟರು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಜಟಿಲ. ಸದನದಲ್ಲಿ ಭಾಷಣ ಮಾಡಿ, ಸರ್ಕಾರ ಏಕೆ ಉರುಳಿತು ಎಂಬುದನ್ನು ವಿವರಿಸಿ ರಾಜೀನಾಮೆ ಕೊಟ್ಟಿದ್ದರೆ ರಾಜಕೀಯವಾಗಿ ಇನ್ನೂ ಬಲವಾದ ಸಂದೇಶ ರವಾನೆ ಆಗುತ್ತಿತ್ತು.



ಶಿವಸೇನಾವನ್ನು ಒಡೆಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಸೇನಾದ ನಾಯಕನಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟದ್ದು ಬಿಜೆಪಿಯ ಅತ್ಯಂತ ಚಾಣಾಕ್ಷ ನಡೆ

ಪರಸ್ಪರ ಭಿನ್ನ ಸಿದ್ಧಾಂತಗಳನ್ನು ಪ್ರತಿಪಾದಿಸುವ ಶಿವಸೇನಾ ಮತ್ತು ಎನ್‌ಸಿಪಿ-ಕಾಂಗ್ರೆಸ್ ಮೈತ್ರಿಯು ಅಸಹಜ ಎಂದು 30 ತಿಂಗಳ ಅಧಿಕಾರದ ಅವಧಿಯಲ್ಲಿ ಎಂದೂ ತೋರಲಿಲ್ಲ. ಹಲವು ಸವಾಲುಗಳ ನಡುವೆಯೂ ಸರ್ಕಾರ ಮತ್ತು ಮೈತ್ರಿಕೂಟ ಸುಲಲಿತವಾಗಿಯೇ ಸಾಗಿದ್ದವು. ಹಾಗಾಗಿ, ಸೈದ್ಧಾಂತಿಕ ಭಿನ್ನತೆಯ ವಿರೋಧಾಭಾಸಗಳಿಗೆ ಸರ್ಕಾರ ಉರುಳಿತು ಎನ್ನಲಾಗದು. ಮಹಾರಾಷ್ಟ್ರ ರಾಜಕಾರಣದಲ್ಲಿ ಈಗ ನಡೆದಿರುವ ಪ್ರಹಸನವು ಭಾರತದ ರಾಜಕಾರಣದ ಅಧಃಪತನವನ್ನೂ ತೋರಿಸುತ್ತದೆ. ದೇಶದ ವಿವಿಧ ರಾಜ್ಯಗಳಲ್ಲಿ 'ಆಪರೇಷನ್ ಕಮಲ' ಎಂಬ ವಾಮಮಾರ್ಗದ ಮೂಲಕ ಬಿಜೆಪಿಯೇತರ ಸರ್ಕಾರಗಳನ್ನು ಉರುಳಿಸಿ, ಅಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಸ್ಥಾಪಿಸಿದ ಅನೈತಿಕ ರಾಜಕಾರಣವನ್ನು ದೇಶದ ಜನರು ಪದೇ ಪದೇ ಕಾಣುತ್ತಿದ್ದಾರೆ. ಶಿವಸೇನಾದಲ್ಲಿ ನಡೆದ ಬಂಡಾಯದಲ್ಲಿ ತನ್ನ ಕೈವಾಡವೇ ಇಲ್ಲ ಎಂದು ಬಿಜೆಪಿ ಉದ್ದಕ್ಕೂ ಹೇಳಿಕೊಂಡು ಬಂದಿದೆ. ಬಂಡಾಯ ಶಾಸಕರು ಮೊದಲು ಗುಜರಾತ್‌ನ ಸೂರತ್‌ಗೆ ಬಳಿಕ ಅಸ್ಸಾಂನ ಗುವಾಹಟಿಗೆ ನಂತರ ಗೋವಾಕ್ಕೆ ಹೋಗಿ ಪಂಚತಾರಾ ಹೋಟೆಲು ಅಥವಾ ರೆಸಾರ್ಟ್‌ಗಳಲ್ಲಿ ತಂಗಿದ್ದರು. ಈ ಮೂರೂ ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಸರ್ಕಾರವೇ ಇದೆ ಎಂಬುದು ಕಾಕತಾಳೀಯವೇ? ಉದ್ಧವ್ ರಾಜೀನಾಮೆ ಕೊಟ್ಟ ತಕ್ಷಣವೇ ಬಿಜೆಪಿ ಬೆಂಬಲದಲ್ಲಿ ಶಿಂಧೆ ಅವರು ಮುಖ್ಯಮಂತ್ರಿಯಾದದ್ದು ಆ ಕ್ಷಣದ ನಿರ್ಧಾರವೇ? ತನ್ನ ಪಾತ್ರವೇ ಇಲ್ಲ ಎಂಬ ಬಿಜೆಪಿ ಹೇಳಿಕೆಯು ಅಸತ್ಯ ಎಂಬುದಕ್ಕೆ ಬೇರೆ ಪುರಾವೆಗಳನ್ನು ಹುಡುಕುವ ಅಗತ್ಯ ಇಲ್ಲ. ಬಂಡಾಯ ಎದ್ದವರಲ್ಲಿ ಹಲವು ಶಾಸಕರು ಜಾರಿ ನಿರ್ದೇಶನಾಲಯದ ಭಯದಿಂದಲೇ ಶಿಂಧೆ ಹಿಂದೆ ಹೋದರು ಎಂಬ ಆರೋಪದಲ್ಲಿಯೂ ಹುರುಳಿಲ್ಲದಿಲ್ಲ. ರಾಜ್ಯ ಸರ್ಕಾರಗಳನ್ನು ಉರುಳಿಸಲು ಅಥವಾ ರಾಜಕೀಯ ಪ್ರತಿಸ್ಪರ್ಧಿಗಳನ್ನು ದಮನಿಸಲು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ಬಿಜೆಪಿ ಬಳಸಿಕೊಳ್ಳುತ್ತಿದೆ ಎಂಬ ಬಿಜೆಪಿಯೇತರ ಪಕ್ಷಗಳ ಆಪಾದನೆಯನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬಹುದು.

ಮುಖ್ಯಮಂತ್ರಿಯಾಗಿ ಶಿಂಧೆ ಅಧಿಕಾರ ವಹಿಸಿಕೊಂಡಿದ್ದರೂ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್‌ಗೆ ಉಪಮುಖ್ಯಮಂತ್ರಿಯಾಗಿ ಹಿಂಬಡ್ತಿಯಾಗಿದ್ದರೂ ನಿಜವಾದ ಗೆಲುವು ದಕ್ಕಿದ್ದು ಬಿಜೆಪಿಗೆ. ಬಿಜೆಪಿ ಮತ್ತು ಶಿವಸೇನಾ ಸುದೀರ್ಘ ಕಾಲ ಮಿತ್ರಪಕ್ಷಗಳಾಗಿದ್ದವು. ಎರಡೂ ಪಕ್ಷಗಳು ಹಿಂದುತ್ವವನ್ನು ಪ್ರತಿಪಾದಿಸುತ್ತವೆ. ಈ ವಿಚಾರದಲ್ಲಿ ಎರಡೂ ಪಕ್ಷಗಳ ನಡುವೆ ಸ್ಪರ್ಧೆ ಇತ್ತು. ಮಹಾರಾಷ್ಟ್ರದಲ್ಲಿ ಬಿಜೆಪಿ ಕಿರಿಯ ಪಾಲುದಾರನಾಗಿಯೇ ಇತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುತ್ತಿದೆ. ತನ್ನ ಅಸ್ತಿತ್ವಕ್ಕೇ ಕುತ್ತು ಬರುತ್ತಿದೆ ಎಂಬುದು ಉದ್ಧವ್ ಅವರು ಬಿಜೆಪಿ ಜೊತೆಗಿನ ಮೈತ್ರಿ ಮುರಿಯಲು ಇದ್ದ ಕಾರಣಗಳಲ್ಲಿ ಒಂದು. ಈಗ, ಶಿವಸೇನಾವನ್ನು ಒಡೆಯುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಸೇನಾದ ನಾಯಕನಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಟ್ಟದ್ದು ಬಿಜೆಪಿಯ ಅತ್ಯಂತ ಚಾಣಾಕ್ಷ ನಡೆ. 39 ಶಾಸಕರ ಬೆಂಬಲ ಹೊಂದಿರುವ ಶಿಂಧೆ ಅವರು 106 ಶಾಸಕರನ್ನು ಹೊಂದಿರುವ ಬಿಜೆಪಿಯ ಆಣತಿಯಂತೆಯೇ ಆಳ್ವಿಕೆ ನಡೆಸುತ್ತಾರೆ. ನಿಜವಾದ ಅಧಿಕಾರ ಬಿಜೆಪಿಯ ಕೈಯಲ್ಲಿಯೇ ಇರುತ್ತದೆ. ಜೊತೆಗೆ, ಮಹಾರಾಷ್ಟ್ರದಲ್ಲಿ ದಟ್ಟವಾಗಿರುವ ಪ್ರಾದೇಶಿಕ ಪ್ರಜ್ಞೆ ಮತ್ತು ಮರಾಠ ಅಸ್ಮಿತೆಗೆ ತಾನು ಗೌರವ ಕೊಟ್ಟಿದ್ದೇನೆ ಎಂದು ಬಿಜೆಪಿ ಬಿಂಬಿಸಿಕೊಳ್ಳಲು ಶಿಂಧೆ ಮುಖ್ಯಮಂತ್ರಿ ಕುರ್ಚಿಯಲ್ಲಿ ಇರುವುದು ಮುಖ್ಯ. ಅದೇನೇ ಇದ್ದರೂ ರಾಜಕೀಯ ಲಾಭಕ್ಕಾಗಿ ಪ್ರಜಾಪ್ರಭುತ್ವವನ್ನು ಅಣಕಿಸುವಂತಹ ನಡೆಗಳು ದೀರ್ಘಾವಧಿಯಲ್ಲಿ ವ್ಯವಸ್ಥೆಯನ್ನು ಶಿಥಿಲಗೊಳಿಸುತ್ತವೆ ಎಂಬ ಪರಿವೆ ರಾಜಕಾರಣಿಗಳಲ್ಲಿ ಇರಬೇಕು.

ದಿನದ ಟ್ವೀಟ್

ಹಲವರ ಕಾರುಣ್ಯ



ನಾವು ವಾಸ ಮಾಡುವ, ಕೆಲಸ ಮಾಡುವ ಕಟ್ಟಡ, ನಾವು ಪ್ರಯಾಣಿಸುವ ರಸ್ತೆಗಳು, ನಾವು ಧರಿಸುವ ಬಟ್ಟೆಗಳು ಅಥವಾ ನಾವು ಸೇವಿಸುವ ಆಹಾರ ನಮಗೆ ಸಿಗುವಂತೆ ಮಾಡಿದ್ದು ಇತರರು ಎಂಬುದನ್ನು ಒಪ್ಪಿಕೊಳ್ಳಬೇಕು. ನಮಗೆ ತಿಳಿಯದ ಹಲವರ ಕಾರುಣ್ಯವಿಲ್ಲದಿದ್ದರೆ ನಮಗೆ ಅನುಭವಿಸಲು, ಬಳಸಲು ಇವೆಲ್ಲ ಸಿಗುತ್ತಿರಲಿಲ್ಲ.

ದಲೈ ಲಾಮಾ, ಟಿಬೆಟಿಯನ್ನರ ಧರ್ಮಗುರು

ಕಿಡಿನುಡಿ

ಎರಡು ದಶಕಗಳ ಹಿಂದೆ ಕೋಮು ಗಲಭೆಗಳು ನಡೆದರೆ ಪರಿಸ್ಥಿತಿ ತಣ್ಣಗಾಗಿಸಲು ಮಾಧ್ಯಮಗಳು ಪ್ರಯತ್ನಿಸುತ್ತಿದ್ದವು. ಈಗ ಮಾಧ್ಯಮಗಳೇ ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿವೆ.



ಮಾಯಾ ಶರ್ಮ, ಪತ್ರಕರ್ತೆ

25 ವರ್ಷಗಳ ಹಿಂದೆ

ಬುಧವಾರ, 2-7-1997

- **ಕಾವೇರಿ ಪ್ರಾಧಿಕಾರ ರಚನೆಗೆ ರಾಜ್ಯ ತಿರಸ್ಕಾರ: ದೆಹಲಿಗೆ ನಿಯೋಗ**

ಬೆಂಗಳೂರು, ಜುಲೈ 1– ರಾಜ್ಯದ ಹಿತಕ್ಕೆ ಧಕ್ಕೆ ಉಂಟು ಮಾಡುವ ಕಾವೇರಿ ಪ್ರಾಧಿಕಾರ ರಚನೆಯ ಕರಡು ಅಧಿಸೂಚನೆಯನ್ನು ಒಪ್ಪಲಾಗುವುದಿಲ್ಲ ಎಂದು ಸಾರಾಸಗಟಾಗಿ ತಿರಸ್ಕರಿಸಿರುವ ಸರ್ವಪಕ್ಷಗಳ ಸಭೆಯು, ರಾಷ್ಟ್ರೀಯ ಜಲ ನೀತಿಗೆ ಮಾರ್ಗಸೂಚಿ ರೂಪಿಸುವಂತೆ ಒತ್ತಾಯಿಸಲು ಪ್ರಧಾನಿ ಐ.ಕೆ. ಗುಜ್ರಾಲ್ ಬಳಿ ನಿಯೋಗ ಹೋಗಲು ಇಂದು ಇಲ್ಲಿ ಒಮ್ಮತದ ನಿರ್ಣಯ ತೆಗೆದುಕೊಂಡಿತು.

ಕಾವೇರಿ ನ್ಯಾಯ ಮಂಡಲಿಯ ಮಧ್ಯಂತರ ವರದಿಯ ಅನುಷ್ಠಾನಕ್ಕಾಗಿ ಕಾವೇರಿ ಪ್ರಾಧಿಕಾರ ರಚಿಸಲು ಕೇಂದ್ರ ಸರ್ಕಾರ ಹೊರಡಿಸಿರುವ ಕರಡು ಅಧಿಸೂಚನೆಯನ್ನು ರಾಜ್ಯವು ಒಪ್ಪಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ಕರೆದಿದ್ದ ಸರ್ವಪಕ್ಷಗಳ ಸಭೆಯು ಒಮ್ಮತದ ನಿರ್ಣಯ ಕೈಗೊಂಡು ಕಾವೇರಿ ವಿಚಾರದಲ್ಲಿ ಏಕ ನಿಲುವು ವ್ಯಕ್ತಪಡಿಸಿದೆ.

- **ಕರ್ನಾಟಕ, ಬಿಹಾರದಲ್ಲಿ ಜನತಾ ದಳ ಅಧ್ಯಕ್ಷ ಚುನಾವಣೆಗೆ ಲಾಲೂ ಬೆಂಬಲಿಗರ ಬಹಿಷ್ಕಾರ**

ಪಟ್ನಾ, ಜುಲೈ 1 (ಪಿಟಿಐ): ಜನತಾದಳ ಅಧ್ಯಕ್ಷ ಸ್ಥಾನಕ್ಕೆ ಮೂರನೇ ಒಮ್ಮತದ ಅಭ್ಯರ್ಥಿ ಆಯ್ಕೆಯಾಗದಿದ್ದರೆ ಯೋಜನಾ ಆಯೋಗದ ಉಪಾಧ್ಯಕ್ಷ ಮಧು ದಂಡವತೆ ಅವರ ಉಸ್ತುವಾರಿಯಲ್ಲಿ ಜುಲೈ ಮೂರರಂದು ನಡೆಯುವ ಚುನಾವಣೆಯನ್ನು ಬಹಿಷ್ಕರಿಸಲು ಬಿಹಾರ ಮತ್ತು ಕರ್ನಾಟಕದಲ್ಲಿರುವ ಲಾಲು ಪ್ರಸಾದ್ ಬೆಂಬಲಿಗರು ನಿರ್ಧರಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 2-7-1972

- **ಅನೇಕ ವಿಷಯಗಳಲ್ಲಿ ಸಿಮ್ಲಾ ಸಭೆ ಒಮ್ಮತ**

ಸಿಮ್ಲಾ, ಜುಲೈ 1– ಭಾರತ ಸೂಚಿಸಿದ್ದ ಶಾಂತಿ ಸಲಹೆಗಳ ಕರಡನ್ನು ಪ್ರಧಾನಿ ಇಂದಿರಾ ಗಾಂಧಿ ಹಾಗೂ ಪಾಕ್ ಅಧ್ಯಕ್ಷ ಭುಟ್ಟೊ ಅವರು ಇಂದು ಮಧ್ಯಾಹ್ನ 100 ನಿಮಿಷಗಳ ಸಭೆಯಲ್ಲಿ ಚರ್ಚಿಸಿದ ನಂತರ ಅದರ ಅನೇಕ ಅಂಶಗಳ ಕುರಿತು ಒಮ್ಮತ ಮೂಡಿತು.

ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಉಭಯ ರಾಷ್ಟ್ರಗಳ ಅಧಿಕಾರಿಗಳು ಇಂದು ಸಂಜೆ ತಮ್ಮ ಮಾತುಕತೆ ಮುಂದುವರಿಸಿದರು. ಕರಡು ಸಲಹೆಗಳಲ್ಲಿ ಭಾರತದ ಅಧಿಕಾರಿಗಳೂ ಇಂದು ಬೆಳಿಗ್ಗೆ ಕೆಲವು ಮಾರ್ಪಾಡುಗಳನ್ನು ಮಾಡಿದ್ದರು.

- **ರಾಷ್ಟ್ರೀಯ ಜಲನೀತಿ ರೂಪಿಸಲು ನೀರಾವರಿ ಸಚಿವರ ಸಭೆಯ ಕರೆ**

ಶ್ರೀನಗರ, ಜುಲೈ 1– ರಾಷ್ಟ್ರದ ಮೂಲಭೂತ ಆಸ್ತಿಗಳಲ್ಲಿ ಒಂದಾದ ನೀರಿನ ಬಗ್ಗೆ ರಾಷ್ಟ್ರೀಯ ನೀತಿಯೊಂದು ಅಗತ್ಯವೆಂದು ನೀರಾವರಿ ಹಾಗೂ ವಿದ್ಯುತ್ ಮಂತ್ರಿಗಳ ಆರನೇ ಸಮ್ಮೇಳನ ಇಂದು ಕರೆ ಇತ್ತಿತು.

ಪ್ರಾದೇಶಿಕ ಪಕ್ಷಗಳನ್ನು ಆಪೋಶನ ತೆಗೆದುಕೊಳ್ಳುವ ತಂತ್ರಗಾರಿಕೆಯ ಭಾಗ

ಶಿಂಧೆಗೆ ಪಟ್ಟ: ಅರ್ಥೈಸಬೇಕಿರುವುದು ಹೀಗೆ



ವಿಶ್ಲೇಷಣೆ

ದಿನೇಶ್ ಅಮಿನ್ ಮಟ್ಟು

ಮಹಾರಾಷ್ಟ್ರದಲ್ಲಿ ಶಿವಸೇನಾದ ಬಂಡುಕೋರ ನಾಯಕ ಏಕನಾಥ ಶಿಂಧೆ ಅವರನ್ನು ಮುಖ್ಯಮಂತ್ರಿಯ ಪಟ್ಟಕ್ಕೇರಿಸಿದ್ದು ಬಿಜೆಪಿಯ ಚಾಣಕ್ಯತಂತ್ರ ಎಂದು ಕೆಲವರು ಹುಬ್ಬೇರಿಸಿದರೆ, ಇದು ಬಿಜೆಪಿ ನಾಯಕರಲ್ಲಿನ ಅಧಿಕಾರ ಮೋಹವಿಲ್ಲದ ಔದಾರ್ಯ ಎಂದು ಇನ್ನು ಕೆಲವರು ಕೊಂಡಾಡತೊಡಗಿದ್ದಾರೆ. ಈ ಎರಡೂ ಬಗೆಯ ವಿಶ್ಲೇಷಣೆಗಳನ್ನು ಮೀರಿದ ರಾಜಕೀಯ ತಂತ್ರವೊಂದು ಈ ದಿಢೀರ್ ರಾಜಕೀಯ ಬೆಳವಣಿಗೆಯ ಹಿಂದೆ ಕೆಲಸ ಮಾಡಿರುವುದು ಬಹಳ ಮಂದಿಗೆ ಅರ್ಥವಾಗಿಲ್ಲ.

ಇಡೀ ಭಾರತವನ್ನು ತನ್ನ ಏಕಚಕ್ರಾಧಿಪತ್ಯವನ್ನಾಗಿ ಮಾಡಲು ಹೊರಟಿರುವ ಬಿಜೆಪಿಯ ಮಹತ್ವಾಕಾಂಕ್ಷೆಗೆ ಅಡ್ಡಿ ಆಗಿರುವುದು ಕಾಂಗ್ರೆಸ್ ಪಕ್ಷ ಅಲ್ಲ, ಬಿಜೆಪಿ ಹೊರತುಪಡಿಸಿದರೆ ಅಖಿಲ ಭಾರತ ಮಟ್ಟದಲ್ಲಿ ಈಗಲೂ ವಿಸ್ತಾರವಾದ ನೆಲೆ ಹೊಂದಿರುವುದು ಕಾಂಗ್ರೆಸ್ ಎನ್ನುವುದು ನಿಜವಾದರೂ ಸದ್ಯೋಭವಿಷ್ಯದಲ್ಲಿ ಕರ್ನಾಟಕವೊಂದನ್ನು ಹೊರತುಪಡಿಸಿ ಬಿಜೆಪಿಯ ಜೈತ್ರಯಾತ್ರೆಗೆ ತಡೆಯೊಡ್ಡುವ ಶಕ್ತಿ ಕಾಂಗ್ರೆಸ್‌ಗೆ ಇಲ್ಲ ಎನ್ನುವುದು ಇಂದಿನ ರಾಜಕೀಯ ವಾಸ್ತವ.

'ಏಕನಾಯಕ- ಏಕಪಕ್ಷ' ಎಂಬ ಈಗಿನ ಬಿಜೆಪಿಯ ರಾಜಕೀಯ ಮಹತ್ವಾಕಾಂಕ್ಷೆಯನ್ನು ಹೊತ್ತಿರುವ ಯಾಗದ ಕುದುರೆಯನ್ನು ಕಟ್ಟಿಹಾಕಿರುವುದು ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರಪ್ರದೇಶ, ತೆಲಂಗಾಣ, ಜಾರ್ಖಂಡ್, ತಮಿಳುನಾಡು, ದೆಹಲಿ, ಪಂಜಾಬ್, ಮಿಜೋರಾಂ, ಮೇಘಾಲಯ ರಾಜ್ಯಗಳಲ್ಲಿರುವ ಪ್ರಾದೇಶಿಕ ಪಕ್ಷಗಳು ಮಾತ್ರ. ಈ ಪಟ್ಟಿಯಲ್ಲಿದ್ದ ಮಹಾರಾಷ್ಟ್ರ ಕಳಚಿಕೊಂಡಿದೆ. ರಾಜಸ್ಥಾನ ಮತ್ತು ಛತ್ತೀಸಗಡದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಕೇರಳದಲ್ಲಿ ಸಿಪಿಎಂ ಅಧಿಕಾರದಲ್ಲಿದೆ. ಉಳಿದ ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಇಲ್ಲವೇ ಬಿಜೆಪಿ ಬೆಂಬಲಿತ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿವೆ.

ಬಿಜೆಪಿಯ ಮಹತ್ವಾಕಾಂಕ್ಷೆಗೆ ನಿಜವಾಗಿ ಅಡ್ಡಿಯಾಗಿರುವುದು ಈ ಪ್ರಾದೇಶಿಕ ಪಕ್ಷಗಳು. ಇದನ್ನು ಬಹಳ ಹಿಂದೆಯೇ ಅರ್ಥಮಾಡಿಕೊಂಡಿದ್ದ ಬಿಜೆಪಿಯು ಹಿಂದುತ್ವದ ಅಜೆಂಡಾ ಜೊತೆ ಪ್ರಾದೇಶಿಕ ಪಕ್ಷಗಳನ್ನು ಆಪೋಶನ ತೆಗೆದುಕೊಳ್ಳುವ ಕೂಟ ನೀತಿಯನ್ನೂ ಉಪಾಯದಿಂದ ಅನುಸರಿಸಿಕೊಂಡು ಬಂದಿದೆ. ಈ ರಾಜಕೀಯ ಕಸರತ್ತನ್ನು ಬಿಜೆಪಿ ಕಲಿತದ್ದೇ ಕಾಂಗ್ರೆಸ್‌ನಿಂದ. ಗುಜರಾತ್, ರಾಜಸ್ಥಾನ ಮತ್ತು ಮಧ್ಯಪ್ರದೇಶದ ಮೂರು ದಶಕಗಳ ಇತಿಹಾಸದ ಪುಟಗಳನ್ನು ಮಗುಚಿಹಾಕಿದರೆ ಪ್ರಾದೇಶಿಕ ಪಕ್ಷಗಳನ್ನು ಈ ಎರಡೂ ಪಕ್ಷಗಳು ಹೇಗೆ ಆಪೋಶನ ತೆಗೆದುಕೊಳ್ಳುತ್ತಾ ಬಂದಿವೆ ಎನ್ನುವುದು ಅರ್ಥವಾಗುತ್ತದೆ.

ರಾಜಸ್ಥಾನದಲ್ಲಿ 1990ರಲ್ಲಿ ಜನತಾದಳದ 55 ಶಾಸಕರ ಬೆಂಬಲದಿಂದ ಮುಖ್ಯಮಂತ್ರಿಯಾಗಿದ್ದ ಬಿಜೆಪಿಯ ಭೈರೋನ್ ಸಿಂಗ್ ಶೆಖಾವತ್ ತನ್ನ ಕುರ್ಚಿ ಉಳಿಸಿಕೊಳ್ಳಲು ಜನತಾದಳವನ್ನೇ ಒಡೆದಿದ್ದರು. 1993ರ ಚುನಾವಣೆಯಲ್ಲಿ ಬಿಜೆಪಿ ಬಲ 95ಕ್ಕೆ ಏರಿತು. ಜನತಾದಳ ಆರಕ್ಕೆ ಕುಸಿಯಿತು. ಅಂದಿನಿಂದ ಇಂದಿನವರೆಗೆ ಆ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಂದೊಂದು ಅವಧಿಗೆ ಅಧಿಕಾರ ಹಂಚಿಕೊಂಡು ಹಾಯಾಗಿವೆ.

ಗುಜರಾತ್‌ನಲ್ಲಿ ಕಾಂಗ್ರೆಸ್ ಬೆಂಬಲದಿಂದ ಮುಖ್ಯಮಂತ್ರಿಯಾಗಿದ್ದ ಜನತಾದಳದ ನಾಯಕ ಚಿಮನ್ ಭಾಯ್ ಪಟೇಲ್ ಕೊನೆಗೆ ತಮ್ಮ ಪಕ್ಷವನ್ನು ಕಾಂಗ್ರೆಸ್ ಜೊತೆ ವಿಲೀನಗೊಳಿಸಿದರು. ಅದರ ನಂತರ ಅಲ್ಲಿ ಉಳಿದುಕೊಂಡಿರುವುದು ಬಿಜೆಪಿ ಮತ್ತು ಕಾಂಗ್ರೆಸ್ ಮಾತ್ರ. ಬಿಜೆಪಿಯಿಂದ ಸಿಡಿದುಹೋದ ವಘೇಲಾ ಗುಂಪು ಕೂಡಾ ಅಂತಿಮವಾಗಿ ಕಾಂಗ್ರೆಸ್‌ನಲ್ಲೇ ಲೀನವಾಯಿತು. ಈಗ ಅಲ್ಲಿರುವುದು ಎರಡೇ ಪಕ್ಷ. ಮಧ್ಯಪ್ರದೇಶದಲ್ಲಿ ಪ್ರಾರಂಭದಿಂದಲೂ ಕಾಂಗ್ರೆಸ್ ಮತ್ತು ಜನಸಂಘ-ಬಿಜೆಪಿಗಳದ್ದೇ ಕಾರುಬಾರು, ಪರ್ಯಾಯ ಇಲ್ಲವೇ ಇಲ್ಲ.

ಈ ಮೂರು ರಾಜ್ಯಗಳ ನಂತರ ಬಿಜೆಪಿ ಕಣ್ಣಿಟ್ಟದ್ದು ಬಿಹಾರದ ಮೇಲೆ. ಲಾಲು ಪ್ರಸಾದ್ ಎಂದೂ ಬಿಜೆಪಿ ಜೊತೆ ಸೂಜಿಯ ಮೊನೆಯಷ್ಟೂ ರಾಜಿ ಮಾಡಿಕೊಂಡವರಲ್ಲ. ಈ ಬದ್ಧತೆಯ ಕಾರಣಕ್ಕಾಗಿಯೇ ತನ್ನ ವೃದ್ಧಾಪ್ಯದ ದಿನಗಳನ್ನು ಈ ನಾಯಕ ಜೈಲಿನಲ್ಲಿ ಕಳೆಯಬೇಕಾಗಿ ಬಂದಿದೆ. ಬಿಹಾರದಲ್ಲಿ ಆರ್‌ಜೆಡಿಯನ್ನು ಮುರಿಯಲು ಬಿಜೆಪಿ ಎತ್ತಿಕೊಂಡದ್ದು ಆ ಪಕ್ಷದೊಳಗಿನ 'ವಿಭೀಷಣ' ನಿತೀಶ್ ಕುಮಾರ್ ಅವರನ್ನು. ಈ ಬಾರಿಯ ವಿಧಾನಸಭಾ ಚುನಾವಣೆಯ ನಂತರ ನಿತೀಶ್ ಮುಖ್ಯಮಂತ್ರಿಯಾಗಿರುವುದು ಸ್ವಂತ ಬಲದಿಂದ ಅಲ್ಲ, ಬಿಜೆಪಿಯ ಔದಾರ್ಯದಿಂದ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯು ಎಲ್ಲಿರುತ್ತೋ ಗೊತ್ತಿಲ್ಲ. ಕೊನೆಗೆ ಉಳಿಯುವುದು ಎರಡೇ ಪಕ್ಷಗಳು ಬಿಜೆಪಿ ಮತ್ತು ಆರ್‌ಜೆಡಿ.

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್‌ನಿಂದ ಹೊರಬಂದ ಮಮತಾ ಬ್ಯಾನರ್ಜಿಯವರನ್ನು ತೆಕ್ಕೆಗೆ ತೆಗೆದುಕೊಂಡು ಅಲ್ಲಿನ ಆಡಳಿತಾರೂಢ ಎಡಪಕ್ಷಗಳು ಮತ್ತು ಕಾಂಗ್ರೆಸ್ ವಿರುದ್ಧ ಬೆಳೆಸಿದ್ದೇ ಬಿಜೆಪಿ. ಇದರಿಂದಾಗಿ ಅಲ್ಲಿ ಎಡಪಕ್ಷಗಳ ಆಳ್ವಿಕೆ ಕೊನೆಯಾಯಿತು. ಕಾಂಗ್ರೆಸ್‌ಗೆ ಕಳೆದುಕೊಂಡಿದ್ದ ನೆಲೆಯನ್ನು ಮರಳಿ ಪಡೆಯಲಾಗಿಲ್ಲ. ಅಲ್ಲಿ ಈಗ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷವೇ ಪ್ರಮುಖ ರಾಜಕೀಯ ಎದುರಾಳಿಗಳು. ಈಶಾನ್ಯ ರಾಜ್ಯಗಳ ಪ್ರಾದೇಶಿಕ ಪಕ್ಷಗಳು ಕೂಡಾ ನಿಧಾನವಾಗಿ ಬಿಜೆಪಿ ಎಂಬ ಹೆಬ್ಬಾವಿನ ಹೊಟ್ಟೆ ಸೇರುತ್ತಿವೆ.

ಕರ್ನಾಟಕದಲ್ಲಿ ಜೆಡಿಎಸ್ ಜೊತೆಗಿನ ಬಿಜೆಪಿಯ ಹಿಂದಿನ ಮೈತ್ರಿ ಮತ್ತು ಮುಂದಿನ ದಿನಗಳ ಮೈತ್ರಿಯ ಸಾಧ್ಯತೆಯ ಚರ್ಚೆಯನ್ನು ಕೂಡಾ ಪ್ರಾದೇಶಿಕ ಪಕ್ಷಗಳ ವಿರುದ್ಧದ ಬಿಜೆಪಿಯ ಎರಡನೇ ಹಂತದ 'ಆಪರೇಷನ್ ಕಮಲ'ದ ಭಾಗವಾಗಿಯೇ ನೋಡಬೇಕಾಗುತ್ತದೆ.



ಮಹಾರಾಷ್ಟ್ರದಲ್ಲಿಯೂ ಇದೇ ಕಾರ್ಯವಿಧಾನವನ್ನು ಬಿಜೆಪಿ ಬಳಸಿತು. ಬಿಜೆಪಿ ಪಾಲಿಗೆ ಏಕನಾಥ ಶಿಂಧೆಯವರೇ 'ಮಹಾರಾಷ್ಟ್ರದ ನಿತೀಶ್ ಕುಮಾರ್'. ಶಿಂಧೆ ಪಾಲಿಗೆ ಈಗ ಎರಡು ಆಯ್ಕೆಗಳಿವೆ. ಮೊದಲನೆಯದ್ದು ಬಿಜೆಪಿ ಜೊತೆ ತಮ್ಮ ಗುಂಪಿನ ವಿಲೀನ, ಇದು ಬಿಜೆಪಿಯ ಇಷ್ಟದ ಆಯ್ಕೆ. ಎರಡನೆಯದ್ದು, ತಮ್ಮ ಗುಂಪನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳುವುದು, ಇದು ಶಿಂಧೆ ಗುಂಪಿನ ಇಷ್ಟದ್ದು. ಇವೆರಡರಲ್ಲಿ ಯಾವ ಆಯ್ಕೆ ಮಾಡಿದರೂ ಅಂತಿಮವಾಗಿ ಶಿಂಧೆ ಗುಂಪು ಬಿಜೆಪಿ ಜೊತೆಯಲ್ಲಿಯೇ ಇರಬೇಕಾಗಬಹುದು.

ಒಂದೊಮ್ಮೆ ಶಿಂಧೆ ಗುಂಪು ಬಿಜೆಪಿ ಜೊತೆ ವಿಲೀನಗೊಂಡರೆ ಮುಂದಿನ ಚುನಾವಣೆಯಲ್ಲಿ ಇವರ ಗುಂಪಿನಲ್ಲಿರುವ ಬಹುಪಾಲು ಶಾಸಕರು ಗೆಲ್ಲಲು ಏಳು ಸಮುದ್ರಗಳ ನೀರು ಕುಡಿಯಬೇಕಾಗಬಹುದು. ಇದಕ್ಕೆ ಕಾರಣ ಇದೆ. ಶಿವಸೇನಾ ಹುಟ್ಟು ಹಿಂದುತ್ವದ ಪಕ್ಷ ಅಲ್ಲ, ಅದು ಹುಟ್ಟಿಕೊಂಡದ್ದೇ ರಾಷ್ಟ್ರೀಯ ಪಕ್ಷಗಳಿಗೆ ವಿರುದ್ಧವಾಗಿರುವ ಪ್ರಾದೇಶಿಕ ಪಕ್ಷವಾಗಿ. ಆದರೆ ಜಾಣ ಬಾಳಾ ಠಾಕ್ರೆ, ಪ್ರಾಂತೀಯ ಭಾವನೆಯ ಮಿತಿ ಮತ್ತು ಮುಖ್ಯವಾಗಿ ಮುಂಬೈನ ಕಾಸ್ಮೊಪಾಲಿಟನ್ ಲಕ್ಷಣವನ್ನು ಅರ್ಥ ಮಾಡಿಕೊಂಡು ಪಕ್ಷದ ನೆಲೆಯನ್ನು ವಿಸ್ತರಿಸಿಕೊಳ್ಳಲು ಪ್ರಾಂತೀಯ ಭಾವನೆಯ 'ಮರಾಠಿ ಮಾನುಸ್' ಜೊತೆ ಹಿಂದುತ್ವದ ಅಜೆಂಡಾವನ್ನು ಕಸಿಮಾಡಿಸಿಕೊಂಡರು. ಈಗ ಶಿವಸೇನಾದ ಬಂಡಾಯ ನಾಯಕರು ಬಿಜೆಪಿ ಜೊತೆ ವಿಲೀನವಾದರೂ ಶಿವಸೇನಾದ ಬದ್ಧ ಮತದಾರರೆಲ್ಲರೂ ಕಣ್ಣುಮುಚ್ಚಿ ಮತಹಾಕುವುದು ಕಷ್ಟ. ಅಂತಹವರಿಗೆ ಎನ್‌ಸಿಪಿ ಕೂಡಾ ಆಯ್ಕೆಯಾಗಬಹುದು.

ಬಿಜೆಪಿ ಮತ್ತು ಶಿವಸೇನಾ ನಾಯಕರು ಎರಡು ದಶಕಗಳ ಕಾಲ ಮೈತ್ರಿ ಮಾಡಿಕೊಂಡು ಸಮಬಲದ ಸಾಧನೆಯ ಮೂಲಕ ಹಾಯಾಗಿದ್ದರು. 2014ರ ನಂತರ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯ ಉಗ್ರ ಹಿಂದುತ್ವದ ಎರಡನೇ ಅಲೆ ಅಪ್ಪಳಿಸತೊಡಗಿದಾಗ ಶಿವಸೇನಾಗೆ ಅಭದ್ರತೆ ಕಾಡತೊಡಗಿತ್ತು. ಹಿಂದುತ್ವದ ಮತಗಳು ತಮ್ಮಿಂದ ಬಿಜೆಪಿ ಕಡೆ ಸರಿದು ಹೋಗತೊಡಗಿರುವುದು ಆ ಪಕ್ಷದ ನಾಯಕತ್ವಕ್ಕೆ ಗೊತ್ತಾಗಿತ್ತು. 50-60ರ ಆಜುಬಾಜಿನಲ್ಲಿರುತ್ತಿದ್ದ ಬಿಜೆಪಿ ಶಾಸಕರ ಬಲ ಕಳೆದ ಎರಡು ಚುನಾವಣೆಗಳಲ್ಲಿ ಕ್ರಮವಾಗಿ 122, 106 ಆಗಿತ್ತು. 2019ರ ಚುನಾವಣೋತ್ತರ ಘರ್ಷಣೆಗೆ ಇದೂ ಒಂದು ಕಾರಣ. ಅಲ್ಲಿಯವರೆಗೆ ಶಿವಸೇನಾವನ್ನು ಹಿರಿಯಣ್ಣನೆಂದು ಒಪ್ಪಿಕೊಂಡಿದ್ದ ಬಿಜೆಪಿ ಇದ್ದಕ್ಕಿದ್ದ ಹಾಗೆ ಅದರ ಮೇಲೆ ಸವಾರಿ ಮಾಡತೊಡಗಿತ್ತು.

ಅದೇ ಸಮಯಕ್ಕೆ ಸರಿಯಾಗಿ ಬಾಳಾ ಠಾಕ್ರೆಯವರ ಎರಡನೇ ಮತ್ತು ಮೂರನೇ ತಲೆಮಾರಿನ ಪ್ರತಿನಿಧಿಗಳಾಗಿ ಉದ್ಧವ್ ಮತ್ತು ಆದಿತ್ಯ ಠಾಕ್ರೆಯವರ ಆಗಮನವಾಗಿತ್ತು. ಸ್ವಭಾವದಲ್ಲಿ ಬಾಳಾ ಠಾಕ್ರೆಗಿಂತ ಸಂಪೂರ್ಣವಾಗಿ ಭಿನ್ನವಾಗಿದ್ದ ಅಪ್ಪ ಮತ್ತು ಮಗ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬದಲಾಗುತ್ತಿರುವ ಹೊಸತಲೆಮಾರಿನ ಮತದಾರರಿಗೆ ಒಪ್ಪಿತವಾಗುವ ರೀತಿಯಲ್ಲಿ ಪಕ್ಷವನ್ನು ಕಟ್ಟುವ ತೀರ್ಮಾನಕ್ಕೆ ಬಂದಿದ್ದರು. ಬಿಜೆಪಿ ತಮ್ಮನ್ನು ಸಂಪೂರ್ಣ ನುಂಗಿಹಾಕುವ ಮೊದಲು ತಮ್ಮ ಪಕ್ಷಕ್ಕೆ ಸ್ವತಂತ್ರವಾದ ಗುರುತನ್ನು ಕೊಡುವುದು ಅವರಿಗೂ ಅನಿವಾರ್ಯವಾಗಿರಬಹುದು.

ಇದಕ್ಕಾಗಿ ತಂದೆ, ಮಗ ರಾಜಕೀಯವಾಗಿ ಅಪಾಯಕಾರಿ ನಿರ್ಧಾರ ಕೈಗೊಂಡಿದ್ದರು. ಈ ನಿರ್ಧಾರವೇ ಶಿವಸೇನಾಗೆ ಮುಳುವಾಯಿತು. ಸದ್ಯಕ್ಕೆ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ಯೋಜನೆ ಫಲಿಸಿದೆ.

ಚುರುಮುರಿ



ಆಷಾಢ(ಭೂತಿ) ಗಾಳಿ!

● ತುರುವೇಕೆರೆ ಪ್ರಸಾದ್

ಪರ್ಮೇಶಿ ಪೇಪರ್ ಹಿಡಿದು ಕುಳಿತಿದ್ದ. 'ಅಯ್ಯೋ! ಏನ್ ಗಾಳಿ ರೀ! ಕ್ಲಿಪ್ ಹಾಕಿದ್ ಬಟ್ಟೆ ಎಲ್ಲಾ ಕಿತ್ಕೊಂಡು ಹೋಗ್ತಿವೆ' ಬಟ್ಟೆ ಹಿಡಿದು ಬಂದರು ಪದ್ದಮ್ಮ.

'ಕ್ಲಿಪ್ ಹಾಕಿದ ಬಟ್ಟೆ ಇರಲಿ, ವಿಪ್ ಕೊಟ್ಟಿದ್ದ ಪಕ್ಷಗಳೇ ಕಿತ್ಕೊಂಡ್ ಹೋಗ್ತಿವೆ. ಪಕ್ಕದ ರಾಜ್ಯದಲ್ಲಂತೂ ಭಿನ್ನಮತದ ಆಷಾಢಭೂತಿ ಗಾಳಿ ಎದ್ದು ಸರ್ಕಾರನೇ ಎಗರ್ಕೊಂಡ್ ಹೋಯ್ತು...'

'ನಿಜ ರೀ, ನಾನೂ ಟೀವಿಲಿ ನೋಡ್ದೆ. ಆಷಾಢದಲ್ಲೇ ಭಿನ್ನಮತ ಜಾಸ್ತಿ ಅಲ್ವಾ?'

'ಹೂ! ಯಾಕಂದ್ರೆ ಗಾಳಿಗೆ ಶಾಮಿಯಾನ, ಜಮಖಾನ ಕಿತ್ಕೊಂಡ್ ಹೋಗುತ್ತೆ. ಆದರೂ ಬಿಳಿ ಖಾದಿ ಮೈಗೆ ಅಂಟಿಕೊಂಡು ಜೇಬು, ಹೊಟ್ಟೆ ಎರಡರ ಗಾತ್ರನೂ ತೋರಿಸಿಬಿಡುತ್ತೆ'.

'ಆದ್ರೂ ಅವರು ಆಶ್ವಾಸನೆಗಳ ಗಾಳಿಪಟ ಹಾರಿಸೋದನ್ನ ಮಾತ್ರ ಬಿಡಲ್ಲ ಬಿಡಿ'.

'ಸಮಾವೇಶಗಳನ್ನ ಮಾಡಲ್ಲವಲ್ಲ, ಹಾಗಾಗಿ ಅತೃಪ್ತರಿಗೆ ಗುಂಡು, ಬಾಡೂಟ ಸಿಗದೆ ಬಂಡಾಯದ ಬಾವುಟ ಹಾರುಸ್ತಾರೆ'.

'ಒಟ್ನಲ್ಲಿ ಈ ಆಷಾಢದ ಗಾಳಿ ಯಾರ್‍ಯಾರನ್ ಎಲ್ಲೆಲ್ಲಿಗೆ ಎತ್ ಎಸೆಯುತ್ತೋ! ಹುಶಾರಾಗಿರ್ಬೇಕು ಅಲ್ವಾ?'

'ಹುಶಾರಾಗಿರ್ಬೇಕು ನಿಜ, ಹಾಗಂತ ಹೆದರ್ಕೋಬಾರದು. ಗಾಳಿ ಬಂದಾಗ ತೂರಿಕೋ ಅಂತ ಗಾದೆನೇ ಇದ್ಯಲ್ಲ. ಈಗ ನೋಡು ಉದ್ಧವ್ ಜೊತೆ ಇದ್ದೋರೆಲ್ಲ ಶಿಂಧೆ ಜೊತೆ ತೂರ್ಕೊಂಡ್ರು. ಅದೇ ತರ ಒವೈಸಿ ಪಕ್ಷದ ನಾಲ್ಕು ಜನ ಎಂಎಲ್‌ಎಗಳು ಲಾಲೂ ಅವರ ಆರ್‌ಜೆಡಿಗೆ ತೂರ್ಕೊಂಡ್ ಬಿಟ್ರಲ್ಲ'.

'ನಮ್ಮಲ್ಲೂ ಕೆಲವರು ತನೆ ಪಕ್ಷದೋರು ಅಲ್ಲಿ ಇಲ್ಲಿ ತೂರ್ಕೊಳೋಕೆ ತುದಿಗಾಲಲ್ಲಿ ನಿಂತಿದಾರಂತೆ'.

'ಗಾಳಿಗೆ ಜೊಳ್ಳೆಲ್ಲಾ ತೂರಿ ಗಟ್ಟಿಕಾಳುಗಳು ಮಾತ್ರ ಉಳ್ಕಳುತ್ವೆ ಅಂತ ಆಷಾಢ(ಭೂತಿ) ನಾಯಕರ ಸಮರ್ಥನೆ ಇದ್ದೇ ಇರುತ್ತೆ...'.

'ಈ ರಾಜಕೀಯದ ಪುಂಗಿ ಊದಿದ್ದು ಸಾಕು. ಮದುವೆ, ಮುಂಜಿ ಏನೂ ಇಲ್ಲ, ಚಿನ್ನದ ರೇಟ್ ಕಮ್ಮಿಯಾಗಿದೆಯಂತೆ, ಇದೇ ಛಾನ್ಸು! ನಡೀರಿ ಒಂದಿಷ್ಟು ಒಡವೆ ತಗೊಂಡು ಬರೋಣ'.

'ಕರ್ಮ! ಮದುವೆಯಾದ ಹೆಂಗಸರು ಆಷಾಢದಲ್ಲಿ ಪ್ರತಿವರ್ಷ ತವರಿಗೆ ಹೋಗ್ಬೇಕು ಅಂತ ಯಾಕ್ ಸಂಪ್ರದಾಯ ಮಾಡಲಿಲ್ಲವೋ' ಎಂದು ತಲೆ ಚಚ್ಚಿಕೊಂಡ ಪರ್ಮೇಶಿ.

ಸಂಗತ

ಸಾವು ಮತ್ತು ಸಾಪೇಕ್ಷ ನೆಲೆ

'ಅನ್ಯ'ರನ್ನು ಸೃಷ್ಟಿಸುತ್ತಾ ಹೋಗುವ ಪ್ರತಿಯೊಬ್ಬ ವ್ಯಕ್ತಿಯೂ ಮತ್ತೊಬ್ಬರಿಗೆ 'ಅನ್ಯ'ನಾಗುತ್ತಾ ಹೋಗುತ್ತಾನಲ್ಲವೇ?

● ನಾ.ದಿವಾಕರ

ರಾಜಸ್ಥಾನದ ಉದಯಪುರದಲ್ಲಿ ನಡೆದಿರುವ ಒಂದು ಅಮಾನುಷ ಹತ್ಯೆ ಸಮಸ್ತ ಭಾರತೀಯರನ್ನೂ ಧಿಗ್ಗನೆದ್ದು ಕುಳಿತುಕೊಳ್ಳುವಂತೆ ಮಾಡಿದೆ. ಹಗಲಲ್ಲೇ ನಡೆದಿರುವ ಈ ಭೀಕರ ಹತ್ಯೆಯ ಹಿಂದೆ ಕ್ರೂರ ಮನಃಸ್ಥಿತಿ ಇರುವಂತೆಯೇ ಮೂರು-ನಾಲ್ಕು ದಶಕಗಳಿಂದ ವ್ಯವಸ್ಥಿತವಾಗಿ ಬೇರೂರುತ್ತಿರುವ ದ್ವೇಷಾಸೂಯೆಗಳ ವಾತಾವರಣದ ಪ್ರಭಾವವೂ ಇದೆ. ಸಮಸ್ಯೆ ಇರುವುದು ನಮ್ಮ ಸಾಮಾಜಿಕ-ಸಾಂಸ್ಕೃತಿಕ ತಿಳಿವಳಿಕೆಯಲ್ಲಿ. ಸಾವು ನಮ್ಮನ್ನು ಏಕೆ ವಿಚಲಿತಗೊಳಿಸುವುದಿಲ್ಲ ಎಂಬ ಪ್ರಶ್ನೆ ಎದುರಾದಕೂಡಲೇ, ಸರಣಿ ಸಾವುಗಳು ನಮ್ಮ ಕಣ್ಣೆದುರು ಬರುತ್ತವೆ. ಹೌದು, ನಾವು ವಿಚಲಿತರಾಗುತ್ತೇವೆ. ವಿರೋಧಿಸುತ್ತೇವೆ. ಸಾಂತ್ವನದ ಮುಲಾಮು ಹಚ್ಚುತ್ತೇವೆ. ಖಂಡಿಸುತ್ತೇವೆ. ಬದಲಾದ ಭಾರತದಲ್ಲಿ ಹತ್ಯೆ ಮತ್ತು ಅದರ ಫಲ ಹಾಗೂ ಸಾವು ಸಾಪೇಕ್ಷತೆಯನ್ನು ಪಡೆದುಕೊಂಡಿರುವುದನ್ನು ನಾವು ಗಮನಿಸುವುದೇ ಇಲ್ಲ. 'ಅವರ' ಸಾವಿಗೆ 'ನಾವು' ಏಕೆ ಮರುಗಬೇಕು ಎಂಬ ಜಿಜ್ಞಾಸೆಯಲ್ಲೇ ಕಳೆಯುವ ಒಂದು ಬೃಹತ್ ಪೀಳಿಗೆಯನ್ನೇ ಈ ದೇಶದ ರಾಜಕೀಯ ವ್ಯವಸ್ಥೆ ಸೃಷ್ಟಿಸಿಬಿಟ್ಟಿದೆ. ಈ ವಾಸ್ತವವನ್ನು ಅಲ್ಲಗಳೆದರೆ ಅದು ಆತ್ಮವಂಚನೆಯಾಗುತ್ತದೆ.

ಆದರೂ ಭಾರತದ ಮನಸುಗಳು ಸ್ಪಂದಿಸುತ್ತವೆ. ಸಾಮಾಜಿಕ ನೆಲೆಯಲ್ಲಿ ಇಂದಿಗೂ ಉಸಿರಾಡುತ್ತಿರುವ ಸಂವೇದನೆಯ ತಂತುಗಳು ಈ ಸ್ಪಂದನೆಗೆ ನೆರವಾಗುತ್ತವೆ. ಮನುಜ ಸಮಾಜ ತನ್ನನ್ನು ತಾನೇ ಛಿದ್ರೀಕರಿಸಿಕೊಂಡು ಗೋಡೆಗಳನ್ನು ಕಟ್ಟಿಕೊಂಡಿದೆ. ಗೋಡೆಯ ಮತ್ತೊಂದು ಬದಿಯಲ್ಲಿನ ಹಿಂಸೆಯನ್ನು ಆನಂದಿಸುವ ಮನಸುಗಳಿರುವಂತೆಯೇ ಸಂಭ್ರಮಿಸುವ ಮನಸುಗಳೂ ನಮ್ಮ ನಡುವೆ ಇವೆ. ಈ ಮನೋವೃತ್ತಿಯನ್ನು ಪೋಷಿಸುವಂತಹ ಸಾಂಸ್ಥಿಕ- ಸಾಂಘಿಕ ವೇದಿಕೆಗಳು ಗೋಡೆಯ ಎರಡೂ ಬದಿಯಲ್ಲಿ ಭದ್ರವಾಗಿ ನೆಲೆಯೂರಿವೆ. ಈ ವೇದಿಕೆಗಳೇ ಮನುಜ ಸಹಜ ಸಂವೇದನೆಯ ತಂತುಗಳನ್ನು ಯಾವುದೋ ಒಂದು ಕಾರಣಕ್ಕಾಗಿ ತುಂಡರಿಸುತ್ತಲೇ ಇರುತ್ತವೆ. ಒಬ್ಬ ವ್ಯಕ್ತಿಯನ್ನು ಹತ್ಯೆ ಮಾಡಲು ಬಳಸುವ ಆಯುಧಕ್ಕಿಂತಲೂ ತೀಕ್ಷ್ಣವಾದ ಮತ್ತು ಅಪಾಯಕಾರಿಯಾದ ಆಯುಧಗಳನ್ನು ಈ ವೇದಿಕೆಗಳು ಪೂರೈಸುತ್ತವೆ. ಇವುಗಳನ್ನು ನಾವು ಜಾತಿ, ಮತ, ಧರ್ಮ, ಸಮುದಾಯ ಹೀಗೆ ವಿಂಗಡಿಸಿ ನಿಷ್ಕರ್ಷೆ ಮಾಡುತ್ತಾ ಹೋಗುತ್ತೇವೆ.

ಉದಯಪುರದ ಕೃತ್ಯ ಏಕೆ ಸಂಭವಿಸಿದೆ? ಒಬ್ಬ ವ್ಯಕ್ತಿ ಹತ್ಯೆ ಮಾಡುವುದನ್ನು ಮತ್ತೊಬ್ಬ ವ್ಯಕ್ತಿ ಕ್ಯಾಮೆರಾದಲ್ಲಿ ಸೆರೆಹಿಡಿಯುವಷ್ಟು ಅಸೂಕ್ಷ್ಮತೆ ಹೇಗೆ ನಮ್ಮಲ್ಲಿ ಸೃಷ್ಟಿಯಾಗಿದೆ? ಈ ಪ್ರಶ್ನೆಗಳನ್ನು ಹಾಕಿಕೊಳ್ಳುವಾಗ ಸಹಜವಾಗಿಯೇ ನಮ್ಮ ಮನಸು ಹಲವಾರು ಘಟನೆಗಳತ್ತ ಹೊರಳಿಬಿಡುತ್ತದೆ. ಹೌದಲ್ಲವೇ? ಇತ್ತೀಚೆಗಷ್ಟೆ ಇದಕ್ಕಿಂತಲೂ ಬರ್ಬರ ಹತ್ಯೆ ನಡೆದಿತ್ತು, ಆಗ ಯಾರೂ ಸದ್ದು ಮಾಡಲಿಲ್ಲವೇಕೆ ಎಂಬ ಪ್ರಶ್ನೆ ಧುತ್ತೆಂದು ಪ್ರತ್ಯಕ್ಷವಾಗುತ್ತದೆ. ಈ ಪ್ರಶ್ನೆಗೆ ಉತ್ತರ ಶೋಧಿಸುವಾಗ ಸಾಂಸ್ಕೃತಿಕವಾಗಿ ಈಗಾಗಲೇ ಧ್ರುವೀಕರಣಗೊಂಡ ಮನಸು ಹಂತಕನ ಮತ್ತು ಹತ್ಯೆಗೀಡಾದವನ ಅಸ್ಮಿತೆಗಳನ್ನು ಶೋಧಿಸಲಾರಂಭಿಸುತ್ತದೆ. ಹತ್ಯೆಗೀಡಾದ ವ್ಯಕ್ತಿಯ ಅಸ್ಮಿತೆಗೆ ವಾರಸುದಾರರಿರುವಂತೆಯೇ ಹಂತಕನ ಅಸ್ಮಿತೆಗೂ ಇರುತ್ತಾರೆ. ಈ ಅಸ್ಮಿತೆಯ ಜಟಾಪಟಿಯಲ್ಲಿ ನಮ್ಮ ಮನುಜ ಸಹಜ ಸ್ಪಂದನೆಯೂ ಸಾಪೇಕ್ಷವಾಗಿಬಿಡುತ್ತದೆ. ಒಬ್ಬ ವ್ಯಕ್ತಿಯದ್ದಾಗಲೀ ಒಂದು ಇಡೀ ಸಮುದಾಯದ್ದಾಗಲೀ 'ಸಾವು' ಎಷ್ಟೋ ಸನ್ನಿವೇಶಗಳಲ್ಲಿ ಸ್ವೀಕೃತವೂ ಆಗಿಬಿಡುತ್ತದೆ. ಗುಜರಾತ್ ನರಮೇಧ ಸಂದರ್ಭದಲ್ಲಿ ಇದನ್ನು ನೋಡಿದ್ದೇವೆ. ಕಂಬಾಲಪಲ್ಲಿ ಕೃತ್ಯದಲ್ಲಿ ನೋಡಿದ್ದೇವೆ.



ಈ ಮನಃಸ್ಥಿತಿಯ ಸೃಷ್ಟಿಕರ್ತರು ಯಾರು? ಈ ವಿಕೃತಿಯ ಪೋಷಕರು ಯಾರು? ಸಾವು ಮನುಷ್ಯರನ್ನು ಒಂದಾಗಿಸುವ ಒಂದು ನೈಸರ್ಗಿಕ ವಿದ್ಯಮಾನ ಎಂದು ಭಾವಿಸಿದಾಗ ಸ್ಪಂದನೆ ಮತ್ತು ಪ್ರತಿಸ್ಪಂದನೆ ಎರಡೂ ಸ್ವಾಭಾವಿಕವಾಗಿ ಉಳಿಯುತ್ತವೆ. ಆದರೆ ನಾವು ಪೋಷಿಸಿಕೊಂಡು ಬಂದಿರುವ ಒಂದು ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆಯು ಸಾವನ್ನು ವಿಘಟನೆಯ ಅಸ್ತ್ರವನ್ನಾಗಿ ಪರಿವರ್ತಿಸಿದೆ. ಹಾಗಾಗಿ ಸಾವು ಸಾಪೇಕ್ಷವಾಗಿಬಿಡುತ್ತದೆ. ಸ್ಪಂದನೆ ಸಹ ಸಾಪೇಕ್ಷ ನೆಲೆಯಲ್ಲೇ ನಿಷ್ಕರ್ಷೆಗೊಳಗಾಗುತ್ತದೆ. ಇಲ್ಲಿ ಹತ್ಯೆಗೊಳಗಾದ ಸಾವಿರಾರು ಕಾಶ್ಮೀರಿ ಪಂಡಿತರ ಜೀವಗಳು ಮತ್ತೊಂದು ಸಾವಿಗೆ ಮುಖಾಮುಖಿಯಾಗಬೇಕಾದ ದಾಳಗಳಾಗಿಬಿಡುತ್ತವೆಯೇ ವಿನಾ ಸಹಜ ಸಂವೇದನೆಯ ತಂತುಗಳನ್ನು ಸೃಷ್ಟಿಸುವುದಿಲ್ಲ. ಗೋಧ್ರಾ ರೈಲಿನಲ್ಲಿ ದಹಿಸಿಹೋದ ಯಾತ್ರಿಕರಿಗೂ, ನಂತರದ ದಂಗೆಗಳಲ್ಲಿ ಹತರಾದವರಿಗೂ ಇರುವ ವ್ಯತ್ಯಾಸವಾದರೂ ಏನು? ಎಲ್ಲರೂ ಅಮಾಯಕರೇ. ಯಾರದೋ ದ್ವೇಷಕ್ಕೆ ಬಲಿಯಾದ ಅಮಾಯಕ ಜೀವಗಳು. ದಾದ್ರಿಯಲ್ಲಾಗಲೀ, ಉದಯಪುರದಲ್ಲಾಗಲೀ, ಪೆದ್ದನಹಳ್ಳಿಯಲ್ಲಾಗಲೀ ಹತ್ಯೆಗೀಡಾದ ಜೀವಗಳ ನಡುವೆ ಅಂತರವಾದರೂ ಏನಿದೆ?

'ಅನ್ಯ'ರನ್ನು ಸೃಷ್ಟಿಸುತ್ತಾ ಹೋಗುವ ಪ್ರತಿಯೊಬ್ಬ ವ್ಯಕ್ತಿಯೂ ಮತ್ತೊಬ್ಬರಿಗೆ 'ಅನ್ಯ'ನಾಗುತ್ತಾ ಹೋಗುತ್ತಾನಲ್ಲವೇ? ಶ್ರೇಷ್ಠತೆಯ ವ್ಯಸನದೊಂದಿಗೆ ಬೇರೂರುವ ಮತದ್ವೇಷ ಮತ್ತು ಮಡುಗಟ್ಟಿದ ಆಕ್ರೋಶ ಒಮ್ಮೆಗೇ ಹೊರಹೊಮ್ಮಿದಾಗ ಮನಸು ಹಂತಕ ಸ್ಥಿತಿ ತಲುಪುತ್ತದೆ. ತನ್ನ ನೆರಳನ್ನೂ ನಂಬಲಾರದ ಮನಃಸ್ಥಿತಿಗೆ ಮನುಷ್ಯ ತಲುಪುತ್ತಾನೆ. ಆಗ ಅನಪೇಕ್ಷಿತವಾದ ಸಾವು ಸಹ ಸಾಪೇಕ್ಷವಾಗಿಬಿಡುತ್ತದೆ. ಆಗ ನಮಗೆ ಕನ್ಹಯ್ಯ ಲಾಲ್ ಅವರಲ್ಲಿ ಒಬ್ಬ ಹಿಂದೂ, ಅಕ್ಲಾಖ್‌ನಲ್ಲಿ ಒಬ್ಬ ಮುಸ್ಲಿಂ, ಪೆದ್ದನಹಳ್ಳಿಯಲ್ಲಿ ಒಬ್ಬ ದಲಿತ ಮಾತ್ರ ಕಾಣುತ್ತಾನೆ. ಹತ್ಯೆಗೀಡಾದವನ ಅಸ್ಮಿತೆಯಂತೆಯೇ ಹಂತಕನ ಅಸ್ಮಿತೆಯೂ ನಮ್ಮ ಸ್ಪಂದನೆಯ ಆಕರವಾಗಿಬಿಡುತ್ತದೆ.

ವಾಚಕರ ವಾಣಿ

ಹಿರಿಯರ ಮುತ್ತಿನಂಥ ಮಾತು

ನಾನು ಮತ್ತು ನನ್ನ ಸ್ನೇಹಿತ ಪಾಂಡವಪುರ ರೈಲ್ವೆ ನಿಲ್ದಾಣದ ಬಳಿಯ ಒಂದು ಹೋಟೆಲ್‌ನಿಂದ ಬೆಳಿಗ್ಗೆ ತಿಂಡಿ ತರಲು ಹೋಗಿದ್ದೆವು. 75 ವರ್ಷ ದಾಟಿರಬಹುದಾದ ವೃದ್ಧರೊಬ್ಬರು ಹೋಟೆಲ್ ಎದುರು ದಿನಪತ್ರಿಕೆ ಓದುತ್ತಿದ್ದರು. ಇಷ್ಟು ವಯಸ್ಸಾದರೂ ಕನ್ನಡಕ ಹಾಕದೆ ಪತ್ರಿಕೆಯ ಪ್ರತೀ ಸಾಲನ್ನು ಬೆರಳಿಟ್ಟು ಸರಾಗವಾಗಿ ಓದುತ್ತಿದ್ದರು. ಇದು, ನಿಜಕ್ಕೂ ಅದ್ಭುತ ಎಂದು ನಾವು ಮಾತನಾಡಿಕೊಂಡೆವು. ಅಷ್ಟರಲ್ಲಿ ಅಲ್ಲಿಗೆ ಬಂದ ಮತ್ತೊಬ್ಬ ವಯೋವೃದ್ಧರು, ಪತ್ರಿಕೆಯಲ್ಲಿದ್ದ ಸಾಲುಗಳನ್ನು ತೋರಿಸಿ, 'ನಿಜಕ್ಕೂ ಅವರಿಗೆ ಕೊಡಬೇಕು' ಎಂದು ಹೇಳಿದರು.

ಕೂಡಲೇ ನಾನು ಎದ್ದು ಆ ಸಾಲುಗಳನ್ನು ಗಮನಿಸಿದೆ. ಆ ಸಾಲಿನಲ್ಲಿ 'ಪೌರಕಾರ್ಮಿಕರನ್ನು ಗುರುತಿಸಿ ನಿವೇಶನ ಹಂಚಿಕೆ' ಎಂದಿತ್ತು. ಅವರಿಬ್ಬರೂ ಮಾತು ಮುಂದುವರಿಸಿದರು. 'ನೀವು, ನಾವು ಈ ಕೆಲಸ ಮಾಡುತ್ತೇವೆಯೇ? ಗಲೀಜು, ಕೊಳಚೆಯನ್ನು ತೆಗೆಯುತ್ತೇವೆಯೇ? ಅವರಿಂದಲೇ ಅಲ್ಲವೆ ಸ್ವಚ್ಛತೆ' ಎಂದು ಒಬ್ಬರು ಹೇಳಿದರು. ಅದಕ್ಕೆ ದನಿಗೂಡಿಸಿದ ಮತ್ತೊಬ್ಬರು, 'ಹೌದು ನೀವು ಹೇಳಿದ್ದು ಸತ್ಯ. ಅಂಥವರಿಗೆ ನಿವೇಶನ ಕೊಡಬೇಕು. ಅವರ ಕೆಲಸಕ್ಕೆ ಬೆಲೆ ಕಟ್ಟಲಾಗದು. ಅವರಿಲ್ಲದಿದ್ದರೆ ದಾರಿಯಲ್ಲಿ ಮೂಗು ಮುಚ್ಚಿಕೊಂಡು ಓಡಾಡಬೇಕಾಗುತ್ತದೆ' ಎಂದರು.

ಸ್ವಾರ್ಥದ ಬದುಕು, ಇನ್ನೊಬ್ಬರಿಗೆ ಏನಾದರೂ ನೀಡಿದರೆ 'ಅವರಿಗೇಕೆ' ಎಂದು ಪ್ರಶ್ನಿಸುವ ಈ ಕಾಲದಲ್ಲಿ ಎಂತಹ ಮುತ್ತಿನಂಥ ನುಡಿಗಳಲ್ಲವೇ ಎಂದೆನಿಸಿತು.

ಚೆಲುವರಾಜು ಕೆ., ಧನಗೆರೆ, ಕೊಳ್ಳೇಗಾಲ

ಸಣ್ಣ ಉಳಿತಾಯ: ಬಡ್ಡಿ ದರ ಹೆಚ್ಚಿಸಿ

ಹಿಂದಿನ ಹತ್ತು ತ್ರೈಮಾಸಿಕಗಳಿಂದ ಪಿಪಿಎಫ್, ಎನ್‌ಎಸ್‌ಸಿ ಮುಂತಾದ ಜನಪ್ರಿಯ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರ ಪರಿಷ್ಕರಣೆ ಆಗಿಲ್ಲ. ಈಗ ಜುಲೈ-ಸೆಪ್ಟೆಂಬರ್ ತ್ರೈಮಾಸಿಕದಲ್ಲೂ ಬಡ್ಡಿ ಹೆಚ್ಚಳ ಮಾಡದೆ ಕೇಂದ್ರ ಸರ್ಕಾರ ಮೌನವಾಗಿದೆ. ಒಂದೆಡೆ ಹೆಚ್ಚುತ್ತಿರುವ ಹಣದುಬ್ಬರ, ಇನ್ನೊಂದೆಡೆ ಸಾಲದ ಬಡ್ಡಿ ದರ ಹೆಚ್ಚಳದಿಂದ ಜೇಬಿಗೆ ಕತ್ತರಿ ಹಾಕುತ್ತಿರುವ ಮಾಸಿಕ ಕಂತುಗಳು. ಆರ್‌ಬಿಐ ರೆಪೊ ದರದಲ್ಲಿ ಶೇಕಡ 0.90ರಷ್ಟು ಏರಿಕೆಯಾಗಿದೆ. ಹೀಗಿದ್ದರೂ, ಸಣ್ಣ ಉಳಿತಾಯ ಯೋಜನೆಗಳ ಬಡ್ಡಿ ದರ ಹೆಚ್ಚಳದ ಬಗ್ಗೆ ಸರ್ಕಾರ ನಿರ್ಲಿಪ್ತವಾಗಿರುವುದು ದುರದೃಷ್ಟಕರ.

ತಿಂಗಳ ಖರ್ಚಿಗಾಗಿ ಠೇವಣಿ ಮೇಲಿನ ಬಡ್ಡಿಯನ್ನು ಮಾತ್ರ ಅವಲಂಬಿಸಿರುವ ಹಿರಿಯ ನಾಗರಿಕರು ನಿಜವಾಗಿಯೂ ಬವಣೆಪಡುತ್ತಿದ್ದಾರೆ. ಲೋಕಸಭೆ ಚುನಾವಣೆ ದೂರದಲ್ಲಿರುವುದರಿಂದ ಸಣ್ಣ ಉಳಿತಾಯಗಾರರ ಮನ ಗೆಲ್ಲಲು ಸರ್ಕಾರಕ್ಕೆ ಯಾವುದೇ ರಾಜಕೀಯ ಒತ್ತಡವಿಲ್ಲದಿರಬಹುದು.

ಭರತ್ ಬಿ.ಎನ್., ಬೆಂಗಳೂರು

ವಿಚಾರಣೆ ತ್ವರಿತವಾಗಿ ಪೂರ್ಣಗೊಳ್ಳಲಿ

ಉದಯಪುರದ ಭೀಕರ ಕೃತ್ಯದ ಬಗ್ಗೆ ಪತ್ರಿಕೆಯ ಸಂಪಾದಕೀಯದಲ್ಲಿ (ಪ್ರ.ವಾ., ಜುಲೈ 1) 'ತಲೆ ಕತ್ತರಿಸಿದ ಅಮಾನವೀಯ ಕೃತ್ಯವನ್ನು ಒಂದು ಸಮುದಾಯದ ಮೇಲಿನ ದಾಳಿ ಎಂಬಂತೆಯೋ, ಇನ್ನೊಂದು ಸಮುದಾಯದ ಪರವಾಗಿ ನಡೆಸಿದ ಕೃತ್ಯ ಎಂಬಂತೆಯೋ ನೋಡಬಾರದು' ಎಂಬ ಮಾತು ಸಮಯೋಚಿತ. ತಪ್ಪಿತಸ್ಥರನ್ನು ಬಹಿರಂಗವಾಗಿ ಗಲ್ಲಿಗೇರಿಸಿ ಎಂದು ಜನಸಾಮಾನ್ಯರು ಆಗ್ರಹಿಸುತ್ತಿರುವ ಈ ಸಂದರ್ಭದಲ್ಲಿ, ತ್ವರಿತ ವಿಚಾರಣೆ ನಡೆಸಿ, ಈ ಹೇಯಕೃತ್ಯಕ್ಕೆ ಕಾರಣರಾದವರಿಗೆ ಶಿಕ್ಷೆ ನೀಡುವ ಮೂಲಕ ಸಮಾಜದ ಸ್ವಾಸ್ಥ್ಯ ಕಾಪಾಡಬೇಕಿದೆ. ಯಾವುದೇ ಸಿದ್ಧಾಂತದ ಪರವಾಗಿರುವವರು, ತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ಈ ಅಮಾನವೀಯ ಕೃತ್ಯವನ್ನು ಅರ್ಥೈಸುವ ಚಪಲಕ್ಕೆ ಕಡಿವಾಣ ಹಾಕಬೇಕು.

ಡಾ.ಟಿ. ಜಯರಾಂ, ಕೋಲಾರ

ಸಾಕುನಾಯಿ: ತ್ಯಾಜ್ಯ ವಿಲೇವಾರಿ ಸೌಲಭ್ಯ ಬೇಕು

ಬೆಂಗಳೂರಿನ ಕಬ್ಬನ್ ಪಾರ್ಕ್‌ಗೆ ಸಾಕುನಾಯಿಗಳನ್ನು ಕರೆದುಕೊಂಡು ಬರುವುದನ್ನು ನಿಷೇಧಿಸಿರುವುದಾಗಿ ಹೇಳುವ ಫಲಕಗಳನ್ನು ಹಾಕುವುದರಿಂದ ಹೆಚ್ಚಿನ ಬದಲಾವಣೆ ನಿರೀಕ್ಷಿಸಲು ಸಾಧ್ಯವಿಲ್ಲ. ಬದಲಿಗೆ, ಮಾಲೀಕರು ನಾಯಿಯ ಜೊತೆಯಲ್ಲಿ ಹೊರಗೆ ಬರುವಾಗ ತ್ಯಾಜ್ಯ ಸಂಗ್ರಹಣೆ ಕಂಟೇನರ್ ತರುವುದನ್ನು ಕಡ್ಡಾಯ ಮಾಡಿ. ಅದರಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ನಿಗದಿತ ಸ್ಥಳದಲ್ಲಿನ ದೊಡ್ಡ ಕಂಟೇನರ್‌ನಲ್ಲಿ ಹಾಕುವಂತೆ ನಿಯಮ ರೂಪಿಸಬೇಕು. ಹೀಗೆ ಕಂಟೇನರ್‌ನಲ್ಲಿ ಸಂಗ್ರಹವಾದ ತ್ಯಾಜ್ಯವನ್ನು ಅತಿ ಹೆಚ್ಚಿನ ಉಷ್ಣತೆಯಲ್ಲಿ ದಹಿಸುವಂತೆ ಮಾಡಬಹುದು. ಇದು ವೈಜ್ಞಾನಿಕ ವಿಧಾನವಾಗಿದ್ದು ಇದರಿಂದ ಸೂಕ್ಷ್ಮ ಜೀವಿಗಳು ನಾಶವಾಗುತ್ತವೆ ಹಾಗೂ ಪರಿಸರ ಚೊಕ್ಕವಾಗಿರುತ್ತದೆ.

ಸಾಕುನಾಯಿಗಳನ್ನು ಪಾರ್ಕಿನ ಒಳಗೆ ಕರೆದುಕೊಂಡು ಬರುವುದನ್ನು ನಿಷೇಧ ಮಾಡಿದರೆ ಪಾರ್ಕಿನ ಹೊರಗೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಅವುಗಳು ತ್ಯಾಜ್ಯ ಉಂಟು ಮಾಡುತ್ತವೆ ಅಲ್ಲವೇ? ನಾಯಿ ಮಾಲೀಕರು ಅದನ್ನು ಸ್ವಚ್ಛಗೊಳಿಸಿದರೂ, ಸ್ವಚ್ಛಗೊಳಿಸಿದ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ವ್ಯವಸ್ಥೆ ಇಲ್ಲ. ಹೀಗಾಗಿ ವೈಜ್ಞಾನಿಕವಾದ ಬಗೆಯಲ್ಲಿ ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಕುರಿತು ಅರಿವು ಮೂಡಿಸುವ ಕೆಲಸಗಳಿಗೆ ಆದ್ಯತೆ ಕೊಡಬೇಕು. ಈ ದಿಸೆಯಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚಿಂತನೆ ಮಾಡಲಿ.

ಡಾ.ಜಿ. ಬೈರೇಗೌಡ, ಬೆಂಗಳೂರು

ಮೊಸರಿಗೆ ತೆರಿಗೆ: ಮತ್ತಷ್ಟು ಹೊರೆ

ಇತ್ತೀಚೆಗೆ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ, ಮೊಸರು ಮತ್ತು ಮಜ್ಜಿಗೆಯ ಮೇಲೆ ತೆರಿಗೆ ವಿಧಿಸಲು ಶಿಫಾರಸು ಮಾಡಲಾಗಿದೆ (ಪ್ರ.ವಾ., ಜೂನ್ 29). ಈ ಸುದ್ದಿಯನ್ನು ಓದಿ ತುಸು ಬೇಸರವಾಯಿತು. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಎಲ್ಲ ವರ್ಗಗಳ ಜನ ಪ್ರತಿದಿನವೂ ಬಳಕೆ ಮಾಡುತ್ತಾರೆ. ಹಾಲಿನ ಉತ್ಪನ್ನಗಳಾದ ಮೊಸರು, ಮಜ್ಜಿಗೆಗೆ ಈವರೆಗೆ ತೆರಿಗೆಯಿಂದ ವಿನಾಯಿತಿ ಇತ್ತು. ಆದರೆ, ಇನ್ನು ಮುಂದೆ ಶೇಕಡ 5ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ. ಹಣದುಬ್ಬರ ವಿಪರೀತವಾಗಿರುವ ಇಂದಿನ ಸಂದರ್ಭದಲ್ಲಿ ಈ ತೆರಿಗೆಯಿಂದಾಗಿ ಜನಸಾಮಾನ್ಯರಿಗೆ ಯಾವ ಬಗೆಯಿಂದ ಪ್ರಯೋಜನ ಆದೀತು? ಇದು ಹಣದುಬ್ಬರ ಇನ್ನಷ್ಟು ಹೆಚ್ಚಾಗಲು ಕಾರಣವಾಗಬಹುದು.

ಎಂ.ಎಸ್. ಜ್ಯೋತಿ, ಸಾಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವೆಚ್ಚ ಹೊಂದಾಣಿಕೆಯ ಹೆಸರಿನಲ್ಲಿ ವಿದ್ಯುತ್ ದರ ಏರಿಕೆ ಸೂಕ್ತವೇ?



ವಿದ್ಯುತ್ ದರ: ಹೊಂದಾಣಿಕೆ ವೆಚ್ಚವೆಂಬ ನಿಗೂಢ ಲೆಕ್ಕ

ವರ್ಷಕ್ಕೊಮ್ಮೆ ದರ ಏರಿಕೆ ಮಾಡಬೇಕಾದರೆ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಆದರೆ, ವೆಚ್ಚ ಹೊಂದಾಣಿಕೆ ಲೆಕ್ಕ ಬಂದಾಗ ದರ ಏರಿಕೆ ಎನ್ನುವುದು ಕೆಇಆರ್‌ಸಿ ವಿವೇಚನೆ. ವೆಚ್ಚ ಹೊಂದಾಣಿಕೆಯ ಒಳಸುಳಿಗಳು ಹೊರಕ್ಕೆ ಗೊತ್ತಾಗುವುದೇ ಇಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಇಂಥ ಹೊಂದಾಣಿಕೆ ತಂತ್ರಗಾರಿಕೆ ಯಾರ ಮರ್ಜಿಯಲ್ಲಿ ನಡೆಯುತ್ತದೆ ಎನ್ನುವುದು ಕಣ್ಣಿಗೆ ಕಾಣದ ಲೆಕ್ಕಾಚಾರ

ಪ್ರಜಾವಾಣಿ ಚರ್ಚೆ

• ಎಚ್.ಡಿ.ಕುಮಾರಸ್ವಾಮಿ

ಸಂದರ್ಭ ಯಾವುದೇ ಇರಲಿ. ಸರ್ಕಾರಕ್ಕೆ ದರ ಏರಿಕೆ ಕೊನೇ ಆಯ್ಕೆ ಆಗಿರಬೇಕು. ದರ ಏರಿಕೆ ಎಂದರೆ ಹೊರೆ ಹೇರಿಕೆ. ಅಂಥ ಸನ್ನಿವೇಶ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕೆಲವೊಮ್ಮೆ ದರ ಏರಿಕೆ ಅನಿವಾರ್ಯವಾಗಬಹುದು. ಆದರೆ, ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳಿಗೆ ದರ ಏರಿಕೆಯೇ ಮೊದಲ ಆಯ್ಕೆ. ಸಮಸ್ಯೆಯ ಮೂಲಕ್ಕೆ ಹೋಗಿ ಅದನ್ನು ಪರಿಹರಿಸುವ ಪ್ರಯತ್ನವನ್ನೇ ಸರ್ಕಾರಗಳು ಮಾಡುತ್ತಿಲ್ಲ ಅನ್ನಿಸುತ್ತಿದೆ.

2022ರ ಏಪ್ರಿಲ್ 1ರಂದು ವಿದ್ಯುತ್ ದರ ಏರಿಕೆ ಮಾಡಲಾಗಿತ್ತು. ಈಗ ಜುಲೈ 1ರಿಂದ ಮತ್ತೆ ವಿದ್ಯುತ್ ಶಾಕ್ ಕೊಡಲಾಗುತ್ತಿದೆ. ಪ್ರತಿ ಗ್ರಾಹಕನ ಮೇಲೆ ₹40 ಹೊರೆ ಬೀಳಲಿದೆ. ದರ ಏರಿಕೆ ಮಾಡಬೇಕು ಎಂದೆನಿಸಿದರೆ ಸಾಕು, ಅದಕ್ಕೊಂದು ನೆಪ ಹುಡುಕಿ, ಅನುಕೂಲಕರ ಪ್ರಸ್ತಾವ ಬರೆಸಿಕೊಂಡು ದರ ಏರಿಕೆ ಮಾಡಲಾಗುತ್ತದೆ. ವಿದ್ಯುತ್ ವಿಷಯದಲ್ಲಿ ಆಗುತ್ತಿರುವುದೂ ಇದೇ. ಹೊರ ರಾಜ್ಯಕ್ಕೆ ಮಾರಿ ₹2500 ಕೋಟಿ ಮಾಡಿಕೊಂಡ ಸರ್ಕಾರಕ್ಕೆ ರೈತರಿಗೆ ಕನಿಷ್ಠ 3 ಗಂಟೆ ವಿದ್ಯುತ್ ಕೊಡುವ ಹೃದಯವಂತಿಕೆ ಇಲ್ಲ.

ಜನರ ಬವಣೆ ಅದೆಷ್ಟರ ಮಟ್ಟಿಗೆ ಬಿಗಡಾಯಿಸಿ ಕೂತಿದೆ ಎಂದರೆ, ಕೋವಿಡ್ ಬರೆಯಿಂದ ಹೆಚ್ಚಿನವರು ಇನ್ನೂ ಚೇತರಿಸಿಕೊಂಡಿಲ್ಲ. ಬಡ, ಮಧ್ಯಮ ವರ್ಗದ ಜನರಿಗೆ ಎರಡೊತ್ತಿನ ಊಟಕ್ಕೂ ಕಷ್ಟದ ಸನ್ನಿವೇಶವೇ ಇದೆ. ನಿಜಸ್ಥಿತಿ ಹೀಗಿರುವಾಗ ಈಗ ₹19ರಿಂದ ₹31ರವರೆಗೆ ವಿವಿಧ ಎಸ್ಕಾಂಗಳಲ್ಲಿ ವಿದ್ಯುತ್ ದರ ಏರಿಕೆಗೆ ಕೆಇಆರ್‌ಸಿ ಒಪ್ಪಿಗೆ ಕೊಟ್ಟಿದೆ! ಏಕೆ ಎಂದು ಕೇಳಿದರೆ, ಅದಕ್ಕಿದೆ ಸಿದ್ಧ ಉತ್ತರ. ಉತ್ಪಾದನಾ ವೆಚ್ಚ ಹೊಂದಾಣಿಕೆಗೆ ದರ ಏರಿಕೆ ಮಾಡಬೇಕಿದೆ. ಇದೇನೂ ಹೊಸತಲ್ಲ, ಹಿಂದಿನಿಂದಲೂ ಮಾಡಿಕೊಂಡೇ ಬರಲಾಗುತ್ತಿದೆ ಎಂದು ಎಸ್ಕಾಂಗಳು ಹೇಳುತ್ತಿವೆ.

ದರ ಏರಿಕೆಯ ಪರ ಹೀಗೆ ವಕಾಲತ್ತು ಹಾಕುವ ಎಸ್ಕಾಂಗಳು ದಕ್ಷತೆಯ ಪ್ರಶ್ನೆ ಬಂದಾಗ ಜಾಣ ಮೌನಕ್ಕೆ ಶರಣಾಗುತ್ತವೆ. ವಿದ್ಯುತ್ ಸೋರಿಕೆ ಬಗ್ಗೆ ಸೊಲ್ಲೆತ್ತಿದರೆ ಮೌನವಾಗಿಬಿಡುತ್ತವೆ. ಉಳ್ಳವರು ಸಾವಿರಾರು ಯೂನಿಟ್ ವಿದ್ಯುತ್ ಕದ್ದರೂ, ಕಂಡೂಕಾಣದಂತೆ ಇದ್ದುಬಿಡುವ ಎಸ್ಕಾಂಗಳಿಗೆ, 100 ಯೂನಿಟ್ ಬಳಕೆ ಮಾಡುವ ಬಡ, ಮಧ್ಯಮ ವರ್ಗದ ಜನರ ಜೇಬುಗಳ ಮೇಲೆಯೇ ಕಾಕದೃಷ್ಟಿ. ಜಿಡ್ಡುಗಟ್ಟಿದ ಓಬಿರಾಯನ ಕಾಲದ ನಿರ್ವಹಣಾ ವ್ಯವಸ್ಥೆಗೇ ಜೋತುಬಿದ್ದಿರುವ ಎಸ್ಕಾಂಗಳಿಗೆ ಹೊಸ ತಂತ್ರಜ್ಞಾನ ಅಥವಾ ಆಧುನೀಕರಣ ಎಂದರೆ ಅಪಥ್ಯ. ವೆಚ್ಚ ಕಡಿಮೆ ಮಾಡಿದರೆ, ಸರ್ಪ ತುಳಿದಷ್ಟು ವ್ಯಗ್ರರಾಗುತ್ತಾರೆ. ಹಾಗಾದರೆ, ಎಸ್ಕಾಂಗಳ ಪ್ರಮೇಯ ಏನು? ಸರ್ಕಾರದ ಕರ್ತವ್ಯಗಳೇನು? ಜನರನ್ನು ಸುಲಿಗೆ ಮಾಡುವುದೇ ಮೊದಲ ಆಯ್ಕೆಯಾದರೆ, ನಾಗರಿಕ ಸರ್ಕಾರ ಎನ್ನುವುದಕ್ಕೆ ಅರ್ಥವಿದೆಯೇ? ದರ ಏರಿಕೆ ಮಾಡಿ ಎಂದು ಎಸ್ಕಾಂಗಳು ಪ್ರಸ್ತಾವ ಸಲ್ಲಿಸುತ್ತವೆ. ಅದನ್ನು ಒಪ್ಪಿಕೊಳ್ಳಬೇಕೇ ಬೇಡವೇ ಎಂಬ ವಿವೇಚನೆ ಸರ್ಕಾರಕ್ಕೆ ಇರಬೇಕು. ಆ ಎಸ್ಕಾಂಗಳು ಎಲ್ಲೆಲ್ಲಿ ನಷ್ಟಕ್ಕೆ ಗುರಿಯಾಗಿವೆ? ಎಲ್ಲೆಲ್ಲಿ ಯಡವಟ್ಟುಗಳಾಗಿವೆ? ಇದಕ್ಕೆ ಸರ್ಕಾರ ಮದ್ದು ಅರೆದಿದೆಯೇ? ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಜನರ ಹಿತ ಮುಖ್ಯವಾಗಬೇಕು.

ರಾಜ್ಯದಲ್ಲಿ ಆಡಳಿತ ನಡೆಸಿದ ಕೆಲ ಸರ್ಕಾರಗಳು ಎಸಗಿದ ಪ್ರಮಾದಗಳು ಇಂಧನ ವ್ಯವಸ್ಥೆಯನ್ನು ಹದಗೆಡಿಸಿವೆ. ನಾನು 2006ರಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಬೆಸ್ಕಾಂನಲ್ಲಿ ₹1,000 ಕೋಟಿ ಠೇವಣಿ ಇತ್ತು. ಅದನ್ನು ಈಗ ₹29,000 ಕೋಟಿಯಷ್ಟು ಸಾಲದ ಕೂಪಕ್ಕೆ ತಳ್ಳಲಾಗಿದೆ. ಇನ್ನು, ಕೆಪಿಸಿಎಲ್, ಆರ್‌ಪಿಸಿಎಲ್‌ಗಳ ಮೇಲೆ ₹11,000 ಕೋಟಿ ಸಾಲದ ಹೊರೆ ಇದೆ ಎಂದು ಗುರುಚರಣ್ ನೇತೃತ್ವದ ಸಮಿತಿ ಹೇಳಿದೆ. ಆ ವರದಿಯ ಇನ್ನೊಂದು ಬೆಚ್ಚಿಬೀಳಿಸುವ ಅಂಶ ಎಂದರೆ, 2023-24ನೇ ಸಾಲಿಗೆ 7,14,660 ಯೂನಿಟ್ ವಿದ್ಯುತ್ ಖರೀದಿಗೆ ₹39,233 ಕೋಟಿ ಬೇಕಿದೆ.

ವಿದ್ಯುತ್ ಖರೀದಿ ಅಕ್ರಮಗಳ ತನಿಖೆಗೆ 2014ರಲ್ಲಿ ಸದನ ಸಮಿತಿ ರಚನೆ ಮಾಡಲಾಗಿತ್ತು. ಆದರೆ, ಆ ಸಮಿತಿ ರಚನೆಗೆ ಮುನ್ನವೇ ಸರ್ಕಾರವು ತನ್ನನ್ನು ತಾನೇ ಆರೋಪಮುಕ್ತಗೊಳಿಸಿಕೊಂಡಿತ್ತು. ಈ ಸದನ ಸಮಿತಿಗಳ ಕಥೆ ಹೇಗೆ ಎಂದರೆ, ಕುರಿ ಕಾಯಲು ತೋಳವನ್ನೆ ಕಾವಲು ಇಟ್ಟ ಹಾಗೆ. ಅಕ್ರಮದ ತನಿಖೆಗೆ ರಚನೆಯಾಗುವ ಸದನ ಸಮಿತಿಗೆ ಅದೇ ಇಲಾಖೆಯ ಸಚಿವರನ್ನೇ ಅಧ್ಯಕ್ಷರನ್ನಾಗಿ ಮಾಡಲಾಗುತ್ತದೆ. ಇದು ದೊಡ್ಡ ವಿಪರ್ಯಾಸ.

ಇಲ್ಲೊಂದು ಟೋಪಿ ಲೆಕ್ಕಾಚಾರವೂ ಅಡಗಿದೆ. ವರ್ಷಕ್ಕೊಮ್ಮೆ ದರ ಏರಿಕೆ ಮಾಡಬೇಕಾದರೆ ಸರ್ಕಾರದ ಒಪ್ಪಿಗೆ ಬೇಕಾಗುತ್ತದೆ. ಆದರೆ, ವೆಚ್ಚ ಹೊಂದಾಣಿಕೆ ಲೆಕ್ಕ ಬಂದಾಗ ದರ ಏರಿಕೆ ಎನ್ನುವುದು ಕೆಇಆರ್‌ಸಿ ವಿವೇಚನೆ. ವೆಚ್ಚ ಹೊಂದಾಣಿಕೆಯ ಒಳಸುಳಿಗಳು ಹೊರಕ್ಕೆ ಗೊತ್ತಾಗುವುದೇ ಇಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಇಂಥ ಹೊಂದಾಣಿಕೆ ತಂತ್ರಗಾರಿಕೆ ಯಾರ ಮರ್ಜಿಯಲ್ಲಿ ನಡೆಯುತ್ತದೆ ಎನ್ನುವುದು ಕಣ್ಣಿಗೆ ಕಾಣದ ಲೆಕ್ಕಾಚಾರ.

ಅಲ್ಲದೆ, ದರ ಏರಿಕೆಯ ಕಾರಣಗಳು ಸುಲಭ. ಕಲ್ಲಿದ್ದಲು ಅಭಾವ, ಎಸ್ಕಾಂಗಳ ಆರ್ಥಿಕ ನಷ್ಟ, ನಿರಂತರ ಬೆಲೆ ಏರಿಕೆ– ಈ ಕಾರಣಗಳು ಅಂತಿಮವಾಗಿ ಜನರ ಜೇಬಿಗೆ ಕತ್ತರಿ ಹಾಕುತ್ತವೆ. ರಾಯಚೂರು, ಬಳ್ಳಾರಿ, ಯರಮರಸ್ ಶಾಖೋತ್ಪನ್ನ ಘಟಕಗಳು ಈಗ ದಿನಪೂರ್ತಿ ವಿದ್ಯುತ್ ಉತ್ಪಾದನೆ ಮಾಡುತ್ತಿಲ್ಲ. ಕೆಲ ಘಟಕಗಳು ಮಾತ್ರ ಕೆಲಸ ಮಾಡುತ್ತಿವೆ. ಅಲ್ಲಿ ಉತ್ಪಾದನೆ ಆಗುವ ಶೇ 65ರಷ್ಟು ವಿದ್ಯುತ್ ಅನ್ನು ಕೇಂದ್ರ ಗ್ರಿಡ್‌ಗೆ ಕೊಡಬೇಕಿದೆ.

ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ, ರಾಜ್ಯದ ಎಲ್ಲಾ ಶಾಖೋತ್ಪನ್ನ ಘಟಕಗಳಲ್ಲಿ ಹಿಂದೆ ನಿತ್ಯ 25,000 ಟನ್ ಕಲ್ಲಿದ್ದಲು ಬಳಕೆ ಆಗುತ್ತಿತ್ತು. ಈಗ 6,000 ಟನ್ ಮಾತ್ರ ಬಳಕೆ ಆಗುತ್ತಿದೆ. ಇದಕ್ಕೆ ಕಲ್ಲಿದ್ದಲು ಪೂರೈಕೆ ವ್ಯತ್ಯಯ, ಬೆಲೆ ಏರಿಕೆಯ ಕಾರಣ ಕೊಡುತ್ತಾರೆ. ಕಲ್ಲಿದ್ದಲು ಮೂಲದಿಂದಲೇ ರಾಜ್ಯದಲ್ಲಿ 3.70 ಕೋಟಿ ಯೂನಿಟ್ ವಿದ್ಯುತ್ ಉತ್ಪಾದನೆ ಆಗುತ್ತದೆ. ಸೌರ ಮತ್ತು ಪವನ ಮೂಲದಿಂದ 95 ದಶಲಕ್ಷ ಯೂನಿಟ್ ಉತ್ಪಾದನೆ ಆಗುತ್ತದೆ. ಇದರ ನಡುವೆ ಹೊರರಾಜ್ಯಗಳಿಗೆ ಹೆಚ್ಚುವರಿ ವಿದ್ಯುತ್ ಮಾರಿಕೊಳ್ಳಲಾಗಿದೆ. ಕಾಣದ ಒಳ ಲೆಕ್ಕಾಚಾರ ಯಾರಿಗೂ ತಿಳಿಯುತ್ತಿಲ್ಲ. ಯಾರಿಗಾಗಿ ಹೊಂದಾಣಿಕೆ ಎನ್ನುವುದೂ ಅಸ್ಪಷ್ಟ. ಇಲ್ಲಿ ಎದ್ದು ಕಾಣುವುದು ಯಾರದ್ದೋ ಹಿತ ಕಾಯುವ ಒಳ ಉದ್ದೇಶವಷ್ಟೇ.

ಲೇಖಕ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸತ್ಯ ಮತ್ತು ಆರೋಪದ ಸುತ್ತ...

• ವಿ. ಸುನೀಲ್ ಕುಮಾರ್



ಇಂಧನ ಇಲಾಖೆ ಎಂದರೆ ಗ್ರಾಹಕರಿಗೆ ದರ ಏರಿಕೆಯ ಶಾಕ್ ನೀಡುವ ವ್ಯವಸ್ಥೆ ಎಂಬ ತಪ್ಪು ಗ್ರಹಿಕೆಯಲ್ಲಿ ಇರುವವರಲ್ಲಿ ಒಂದು ನಿವೇದನೆ. ಬೆಲೆ ಏರಿಕೆ ಮಾಡುವುದಷ್ಟೇ ನಮ್ಮ ಕೆಲಸವಲ್ಲ. ರಾಜ್ಯದ ಅತಿ ದೊಡ್ಡ ಗ್ರಾಹಕ ಸಮುದಾಯವಾದ ರೈತ ಸಮುದಾಯಕ್ಕೆ ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿ ದರದಲ್ಲಿ ವಿದ್ಯುತ್ ಪೂರೈಕೆ ಮಾಡುತ್ತೇವೆ ಎಂಬ ಹೆಮ್ಮೆ ನಮಗಿದೆ. ಅನ್ನದಾತನ ಸೇವೆಗೆ ದೊರೆತ ದೊಡ್ಡ ಅವಕಾಶ ಇದು ಎಂದು ನಾನು ಭಾವಿಸಿದ್ದೇನೆ. ಆದರೆ ಕಳೆದೊಂದು ದಶಕದಲ್ಲಿ ಈ ಸಬ್ಸಿಡಿ ಮೊತ್ತ ₹5,560 ಕೋಟಿಯಿಂದ ₹16,876 ಕೋಟಿಗೆ ಹೆಚ್ಚಳವಾಗಿದೆ

ರಾಜ್ಯದಲ್ಲಿ ವಿದ್ಯುತ್ ದರ ಪರಿಷ್ಕರಣೆಯ ಮೂಲಕ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ಮುಟ್ಟಿಸಲಾಗಿದೆ ಎಂಬ ಟೀಕೆಯನ್ನು ಇಂಧನ ಇಲಾಖೆ ಕಳೆದ ಕೆಲ ದಿನಗಳಿಂದ ಎದುರಿಸುತ್ತಿದೆ. ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಸೇರಿದಂತೆ ತೈಲೋತ್ಪನ್ನಗಳ ದರ ಏರಿಕೆ ಮಧ್ಯೆ ಇಂಧನ ದರ ಪರಿಷ್ಕರಣೆಯ ಅಗತ್ಯವಿತ್ತೇ ಎಂಬ ಸಹಜ ಪ್ರಶ್ನೆಯನ್ನು ಮಾಧ್ಯಮಗಳು ಜನರ ಮುಂದಿಟ್ಟಿವೆ. ಮಾಧ್ಯಮಗಳು ಜನ ಸಮುದಾಯದ ಧ್ವನಿ ಎಂಬ ಮಾತಿನಲ್ಲಿ ಅಕ್ಷರಶಃ ನಂಬಿಕೆ ಇಟ್ಟವನಾಗಿರುವುದರಿಂದ ಜನರ ಪ್ರಶ್ನೆಗೆ ನನ್ನ ಆಕ್ಷೇಪವಿಲ್ಲ. ಆದರೆ ಈ ವಿಚಾರದಲ್ಲಿ ವ್ಯಕ್ತವಾದ ಕೆಲ ಗೊಂದಲಗಳಿಗೆ ಸ್ಪಷ್ಟೀಕರಣ ನೀಡಲೇಬೇಕಿರುವುದರಿಂದ, ಜತೆಗೆ ಇಂಧನ ಇಲಾಖೆಯ ವ್ಯಾಪ್ತಿ- ಒತ್ತಡಗಳ ಬಗ್ಗೆ ಬೆಳಕು ಚೆಲ್ಲಬೇಕಾದ ಜವಾಬ್ದಾರಿಯೂ ಇರುವುದರಿಂದ ಕೆಲ ಸಂಗತಿಗಳನ್ನು ತೆರೆದಿಡುತ್ತಿದ್ದೇನೆ.

ವಿದ್ಯುತ್ ದರವನ್ನು ಬೇಕಾಬಿಟ್ಟಿ ಏರಿಕೆ ಮಾಡುವುದಕ್ಕೆ ಅವಕಾಶವೇ ಇಲ್ಲ. ಇಂಧನ ಇಲಾಖೆ ಸ್ವಂತ ವಿವೇಚನೆಯ ಮೂಲಕ ಆ ರೀತಿ ದರಪರಿಷ್ಕರಣೆ ಮಾಡುವುದಕ್ಕೆ ಸಾಧ್ಯವೂ ಇಲ್ಲ. ವಿದ್ಯುತ್ ದರ ಪರಿಷ್ಕರಣೆಗಾಗಿಯೇ ಕೆಇಆರ್‌ಸಿ ಎಂಬ ಸ್ವಾಯತ್ತ ಸಂಸ್ಥೆಯನ್ನು ಆಡಳಿತ ವ್ಯವಸ್ಥೆ ರಚಿಸಿದೆ. ಅದರ ಮೂಲಕವೇ ದರ ಏರಿಳಿತಕ್ಕೆ ಸಂಬಂಧಪಟ್ಟ ಎಲ್ಲ ವ್ಯವಹಾರಗಳು ನಡೆಯುತ್ತವೆ. ಅಂದರೆ ವಿವಿದ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿದ ಶಿಫಾರಸು, ಸಾರ್ವಜನಿಕ ಆಕ್ಷೇಪಣೆ, ಇಲಾಖಾ ಖರ್ಚು, ಉತ್ಪಾದನೆ ಹಾಗೂ ಸಾಗಣೆ ವೆಚ್ಚ, ಕಲ್ಲಿದ್ದಲು ಅಥವಾ ವಿದ್ಯುತ್ ಖರೀದಿ ನಡೆಸಿದ್ದರೆ ಆಯಾ ವರ್ಷ ವಿನಿಯೋಗಿಸಿದ ಮೊತ್ತ ಇತ್ಯಾದಿ ಮಾನದಂಡಗಳನ್ನು ಆಧರಿಸಿ ದರ ಪರಿಷ್ಕರಣೆ ನಡೆಯುತ್ತದೆ. ಈ ವರ್ಷದ ಆ ಪ್ರಕ್ರಿಯೆ ಮುಕ್ತಾಯಗೊಂಡಿದೆ.

ಆದರೆ, ಈಗ ಪ್ರಶ್ನೆ ಉದ್ಭವಿಸಿರುವುದು ‘ಹೊಂದಾಣಿಕೆ ವೆಚ್ಚ’ ಪರಿಷ್ಕರಣೆಯ ಬಗ್ಗೆ ಮಾತ್ರ. ಈ ಬಗ್ಗೆ ಜನರ ಆತಂಕಕ್ಕಿಂತಲೂ ಮಿಗಿಲಾಗಿ ಇಬ್ಬರು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಎಚ್.ಡಿ.ಕುಮಾರಸ್ವಾಮಿ ಟೀಕೆಗಳ ಸುರಿಮಳೆಗರೆದಿದ್ದಾರೆ. ಇಬ್ಬರು ಕೂಡಾ ಇಂಧನ ಇಲಾಖೆ ನಿಭಾಯಿಸಿದವರು ಮತ್ತು ಹೊಂದಾಣಿಕೆ ವೆಚ್ಚ ಹೆಚ್ಚಿಸಿದ ಅನುಭವ ಹೊಂದಿರುವವರು ಎಂಬುದು ಇನ್ನೊಂದು ವಿಶೇಷ. ನನ್ನ ವಿರುದ್ಧ ಮಾತ್ರವಲ್ಲ ಇಲಾಖೆ ಹಾಗೂ ಸರ್ಕಾರದ ವಿರುದ್ಧ ಆರೋಪ ಮಾಡುವಾಗ ಅವರು ವಾಸ್ತವವನ್ನು ಮುಚ್ಚಿಟ್ಟದ್ದು ಮುತ್ಸದ್ಧಿತನದ ದ್ಯೋತಕವಂತೂ ಅಲ್ಲ. ಹೀಗಾಗಿ ಹೊಂದಾಣಿಕೆ ವೆಚ್ಚ ಎಂದರೆ ಏನು ಎಂಬುದನ್ನು ನಾನು ಇಲ್ಲಿ ಸ್ಪಷ್ಟಪಡಿಸಿಬಿಡುತ್ತೇನೆ.

ಉಷ್ಣ ವಿದ್ಯುತ್ ಸ್ಥಾವರಗಳ ಕ್ಷಮತೆ ಸುಸ್ಥಿತಿಯಲ್ಲಿ ಇಡುವುದಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಅಗತ್ಯವಾಗಿರುತ್ತದೆ. ಕಲ್ಲಿದ್ದಲು ಹಾಗೂ ತೈಲೋತ್ಪನ್ನಗಳ ಮಾರುಕಟ್ಟೆ ಹಾಗೂ ಪೂರೈಕೆ ವೆಚ್ಚ ಆಧರಿಸಿ ಹೊಂದಾಣಿಕೆ ವೆಚ್ಚ ಪರಿಷ್ಕರಣೆಗೆ ಎಲ್ಲ ಎಸ್ಕಾಂಗಳು ಕೆಆರ್‌ಇಸಿಗೆ ಪ್ರತಿ ತ್ರೈಮಾಸಿಕದಲ್ಲಿ ವರದಿ ನೀಡುತ್ತವೆ. ಕಲ್ಲಿದ್ದಲು ಹಾಗೂ ತೈಲ ದರ ಹೆಚ್ಚಾದಾಗ ಹೊಂದಾಣಿಕೆ ವೆಚ್ಚ ಹೆಚ್ಚುತ್ತದೆ, ಕಡಿಮೆಯಾದಾಗ ಇಳಿಯುತ್ತದೆ.

ಆದರೆ, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಈ ಸತ್ಯವನ್ನು ಒಪ್ಪಿಕೊಳ್ಳುವ ಬದಲು ಇಂಧನ ಇಲಾಖೆಯ ಭ್ರಷ್ಟಾಚಾರ ಹಾಗೂ ಅದಕ್ಷ ನಿರ್ವಹಣೆಯಿಂದ ದರ ಏರಿಕೆ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಶುದ್ಧ ಸುಳ್ಳನ್ನು ಜನರ ಮುಂದಿಟ್ಟಿದ್ದಾರೆ. ಸತ್ಯ ಹೇಳಬೇಕೆಂದರೆ, ಇಂಧನ ಇಲಾಖೆಯಲ್ಲಿ ಹೊಂದಾಣಿಕೆ ವೆಚ್ಚ ಎಂಬ ವ್ಯವಸ್ಥೆಯನ್ನು ಸೃಷ್ಟಿಸಿದ ಪಿತಾಮಹರೇ ಸಿದ್ದರಾಮಯ್ಯ. ಹೊಂದಾಣಿಕೆ ವೆಚ್ಚವನ್ನು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ಹೊಸತರಲ್ಲಿ (ಆಗ ಅವರೇ ಇಂಧನ ಇಲಾಖೆ ಜವಾಬ್ದಾರಿ ಹೊತ್ತಿದ್ದರು) ಅಂದರೆ 2013ರಲ್ಲಿ ಜಾರಿಗೆ ತಂದರು. ಆ ವರ್ಷದ ಮೊದಲ ತ್ರೈಮಾಸಿಕದಲ್ಲಿ ಯಾವುದೇ ದರ ಪರಿಷ್ಕರಣೆಯಾಗದೇ ಇದ್ದರೂ ಎರಡು ಹಾಗೂ ಮೂರನೇ ತ್ರೈಮಾಸಿಕದಲ್ಲಿ ಕ್ರಮವಾಗಿ 19 ಹಾಗೂ 33 ಪೈಸೆ ಹೆಚ್ಚಳ ಮಾಡಲಾಗಿತ್ತು. ಇದಾದ ಬಳಿಕ ಕಾಂಗ್ರೆಸ್ ಅಧಿಕಾರಾವಧಿ ಮುಕ್ತಾಯಗೊಳ್ಳುವವರೆಗೆ ಅಂದರೆ 2014– 14 ಪೈಸೆ, 2015ರ ನಾಲ್ಕು ತ್ರೈಮಾಸಿಕದಲ್ಲಿ ಕ್ರಮವಾಗಿ 22, 29, 34, 25 ಪೈಸೆ, 2016ರಲ್ಲಿ 36, 26, 72, 17 ಪೈಸೆ, 2017ರಲ್ಲಿ 35, 36, 29, 7 ಪೈಸೆ, 2018ರಲ್ಲಿ 1, 39, 73, 50 ಪೈಸೆಯಷ್ಟು ಹೆಚ್ಚಳ ಮಾಡಲಾಗಿದೆ. ಹಾಗಾದರೆ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ನಡೆದ ಹೊಂದಾಣಿಕೆ ವೆಚ್ಚ ಪರಿಷ್ಕರಣೆ ಭ್ರಷ್ಟಾಚಾರ ಹಾಗೂ ಅದಕ್ಷ ಆಡಳಿತದ ಫಲ ಎಂದು ಆರೋಪಿಸಬಹುದೇ?

ಅದೇ ರೀತಿ, ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರಕಾರದ ಅವಧಿಯಲ್ಲಿ 2019ರಲ್ಲಿ 63, 57, 13 ಪೈಸೆ, 2020ರಲ್ಲಿ 6, 39, 28, 36 ಪೈಸೆ ಹೆಚ್ಚಳವಾಗಿದೆ.

ಅದೆಲ್ಲಕ್ಕಿಂತ ಹೆಚ್ಚಾಗಿ ವಾರ್ಷಿಕ ದರ ಪರಿಷ್ಕರಣೆ ಸಂದರ್ಭದಲ್ಲಿಯೂ ಸಿದ್ದರಾಮಯ್ಯ ಹಾಗೂ ಕುಮಾರಸ್ವಾಮಿಯವರ ಸರ್ಕಾರ ಜನಹಿತವನ್ನು ಎಷ್ಟರಮಟ್ಟಿಗೆ ಗಣನೆಗೆ ತೆಗೆದುಕೊಂಡಿರಬಹುದು ಎಂಬುದಕ್ಕೆ ಈ ಕೋಷ್ಟಕವೇ ಸಾಕ್ಷಿ. ಸಿದ್ದರಾಮಯ್ಯ ಸರ್ಕಾರದ ಕೊನೆಯ ಎರಡು ವರ್ಷ ಪ್ರತಿ ಯೂನಿಟ್‌ಗೆ ಸರಾಸರಿ 48 ಪೈಸೆಯಷ್ಟು ದರ ಹೆಚ್ಚಳ ಮಾಡಲಾಗಿತ್ತು. ಅದು ಈ ದಶಕದಲ್ಲಿ ನಡೆದ ಅತಿ ದೊಡ್ಡ ವಿದ್ಯುತ್ ದರ ಪರಿಷ್ಕರಣೆ ಪ್ರಮಾಣ ಎಂಬುದಕ್ಕೆ ಪರಿಷ್ಕರಣೆ ಕೋಷ್ಟಕ ಗಮನಿಸಿ.

ರಾಜ್ಯದ ಅತಿ ದೊಡ್ಡ ಗ್ರಾಹಕ ಸಮುದಾಯವಾದ ರೈತ ಸಮುದಾಯಕ್ಕೆ ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿ ದರದಲ್ಲಿ ವಿದ್ಯುತ್ ಪೂರೈಕೆ ಮಾಡುತ್ತೇವೆ ಎಂಬ ಹೆಮ್ಮೆ ನಮಗಿದೆ. ಅನ್ನದಾತನ ಸೇವೆಗೆ ದೊರೆತ ದೊಡ್ಡ ಅವಕಾಶ ಇದು ಎಂದು ನಾನು ಭಾವಿಸಿದ್ದೇನೆ. ಆದರೆ ಕಳೆದೊಂದು ದಶಕದಲ್ಲಿ ಈ ಸಬ್ಸಿಡಿ ಮೊತ್ತ ₹5,560 ಕೋಟಿಯಿಂದ ₹16,876 ಕೋಟಿಗೆ ಹೆಚ್ಚಳವಾಗಿದೆ. (ಮಾಹಿತಿಗೆ ಸಬ್ಸಿಡಿ ಕೋಷ್ಟಕ ಪರಿಗಣಿಸಿ)

ಇಂಧನ ಇಲಾಖೆಯಲ್ಲಿ ವೆಚ್ಚ ಕಡಿಮೆ ಮಾಡುವ ಸೂತ್ರಗಳೇನು? ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು ಹೇಗೆ? ಸೋರಿಕೆ ತಡೆ ಅಸಾಧ್ಯವೇ? ಆಧುನೀಕರಣದಿಂದ ಗ್ರಾಹಕರ ಮೇಲಿನ ಹೊರೆ ಕಡಿಮೆ ಮಾಡಲು ಸಾಧ್ಯವಿಲ್ಲವೇ ಎಂಬಿತ್ಯಾದಿ ಪ್ರಶ್ನೆಗಳು ಜನರ ಮುಂದೆ ಇವೆ. ಇದು ಮತ್ತೊಂದು ಚರ್ಚೆಯ ವಿಚಾರ. ಈ ದಿಸೆಯಲ್ಲಿ ಸರ್ಕಾರ ಇಟ್ಟ ಹೆಜ್ಜೆಯ ಬಗ್ಗೆ ನಮಗೆ ಸ್ಪಷ್ಟತೆ ಇದೆ. ವಿಶೇಷವಾಗಿ ‘ಹಸಿರು ಇಂಧನ’ ಉತ್ಪಾದನೆ ಮತ್ತು ಬಳಕೆಗೆ ಉತ್ತೇಜನ ನೀಡಬೇಕೆಂಬುದು ನಮ್ಮ ಧ್ಯೇಯ. ಪ್ರಧಾನಿ ನರೇಂದ್ರ ಮೋದಿಯವರ ಆಶಯಕ್ಕೆ ಅನುಗುಣವಾಗಿ ಬಸವರಾಜ ಬೊಮ್ಮಾಯಿ ಸಾರಥ್ಯದ ನಮ್ಮ ಸರ್ಕಾರ ಈಗಾಗಲೇ ಸಾಕಷ್ಟು ಕ್ರಮಗಳನ್ನು ಈ ದಿಸೆಯಲ್ಲಿ ತೆಗೆದುಕೊಂಡಿದೆ. ಸೌರ ಹಾಗೂ ಪವನ ವಿದ್ಯುತ್ ಉತ್ಪಾದನೆ ಹಾಗೂ ಹೈಬ್ರಿಡ್ ಪಾರ್ಕ್ ಮತ್ತು ಸ್ಟೋರೆಜ್ ಕೇಂದ್ರಗಳ ಸ್ಥಾಪನೆಗೆ ಅಗತ್ಯ ಕ್ರಮ ತೆಗೆದುಕೊಂಡಿದ್ದೇವೆ. ಇದರಿಂದ ಕಲ್ಲಿದ್ದಲು ಮೇಲಿನ ಅವಲಂಬನೆ ಹಾಗೂ ಉತ್ಪಾದನಾ ವೆಚ್ಚವೂ ಕಡಿಮೆಯಾಗುತ್ತದೆ. ಆದರೆ ‘ತಮಸೋ ಮಾ ಜ್ಯೋತಿರ್ಗಮಯ’ ಎನ್ನುವುದಕ್ಕೆ ಮುನ್ನ ಅಸತ್ಯದಿಂದ ಸತ್ಯದೆಡೆಗೆ ಸಾಗುವ ಪ್ರಯತ್ನವನ್ನೂ ಮಾಡಬೇಕಲ್ಲವೇ? ಹೀಗಾಗಿ ಹಿಂದಿನ ಸರ್ಕಾರಗಳು ಮುಚ್ಚಿಟ್ಟ ಸತ್ಯಗಳನ್ನು ಇಲ್ಲಿ ತೆರೆದಿಡುವ ಪ್ರಯತ್ನ ನಡೆಸಿದ್ದೇನೆ.

ಲೇಖಕ: ಕರ್ನಾಟಕ ಸರ್ಕಾರದ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವ

ಪರಿಷ್ಕರಣೆ ಕೋಷ್ಟಕ

ವರ್ಷ	ಪೈಸೆ (ಪ್ರತಿ ಯೂನಿಟ್‌ಗೆ ದರ ಹೆಚ್ಚಳ)	ಸರಾಸರಿ %
2013-14	23	4.82
2014-15	37	7.53
2015-16	18	3.37
2016-17	48	9.00
2017-18	48	8.00
2018-19	30	5.30
2019-20	33	8.40
2020-21	40	5.40
2021-22	30	3.84
2022-23	35	4.33

ಸಬ್ಸಿಡಿ ಕೋಷ್ಟಕ

ವರ್ಷ	ಹಿಂಬಾಕಿ (ಕೋಟಿ ₹ಗಳಲ್ಲಿ)	ಒಟ್ಟು ಮೊತ್ತ (ಕೋಟಿ ₹ಗಳಲ್ಲಿ)
2013-14	00	5,460
2014-15	00	6,039
2015-16	1,530	8,034
2016-17	692	8,646
2017-18	00	8,841
2018-19	1,269	9,250
2019-20	00	11,245
2020-21	00	11,250
2021-22	5,500	16,876



ಹಿಮಾಲಯವಾಸ ಬಯಸಿದ ಸತಿ

‘ಎಲೈ ದೇವಿ, ಹಿಮಾಲಯವು ನಿನಗಿಷ್ಟವಿಲ್ಲದಿದ್ದರೆ ಸುಂದರವಾದ ಮೇರುಪರ್ವತವಿರುವುದು. ಅಲ್ಲಿ ಸಕಲ ಇಷ್ಟಾರ್ಥಗಳನ್ನು ಕೊಡುವ ಕಲ್ಪವೃಕ್ಷಗಳಿವೆ. ಶೀತಲವಾದ ಹಸಿರು ಹಚ್ಚನೆಯದಾದ ಪ್ರದೇಶಗಳಿವೆ. ಮನೋಹರವಾದ ಪುಷ್ಪಗಳೂ ಸದಾ ಅರಳಿರುತ್ತವೆ. ಅಲ್ಲಿರುವ ದೇವಾಲಯ ಮತ್ತು ಆಶ್ರಮಗಳಲ್ಲಿ ಮುನಿಗಳು ವಾಸಮಾಡುತ್ತಿರುತ್ತಾರೆ. ಅಲ್ಲಿ ಹುಲಿ, ಸಿಂಹ, ಆನೆ ಮುಂತಾದ ಕ್ರೂರಪ್ರಾಣಿಗಳು ತಮ್ಮ ವೈರವನ್ನು ಬಿಟ್ಟು ಶಾಂತವಾಗಿರುತ್ತವೆ. ಸಾಧುವಾದ ಹರಿಣ ಮುಂತಾದ ಮೃಗಗಳು ಸ್ವಚ್ಛಂದವಾಗಿ ವಿಹರಿಸುತ್ತವೆ. ಸ್ಫಟಿಕಮಯವೂ ಸುವರ್ಣ-ರಜತಮಯವೂ ಆದ ತಪ್ಪಲು ಪ್ರದೇಶಗಳಿವೆ. ಮಾನಸಸರಸ್ಸಿನಂತೆ ಪವಿತ್ರವೂ ನಿರ್ಮಲವೂ ಆದ ಸರಸ್ಸುಗಳು ಅಲ್ಲಿ ಬಹಳ ಇವೆ.

ಶೃಂಗಾರಮಯವಾದಂತಹ ಚಕ್ರವಾಕ ದಂಪತಿಗಳು, ಸಾರಸಪಕ್ಷಿಗಳು ಅಲ್ಲಿ ಇಂಪಾಗಿ ಧ್ವನಿಮಾಡುತ್ತಾ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತವೆ. ಆ ಶೈಲವು ಶೃಂಗಾರಕ್ಕೆ ಅನುಕೂಲವಾಗಿದೆ. ಆ ಮೇರುಪರ್ವತ ಶಿಖರದಲ್ಲಿ ಅಷ್ಟದಿಕ್ಪಾಲಕರ ಭವನಗಳಿವೆ. ಮೇಲಿನ ಶಿಖರದಲ್ಲಿ ಸ್ವರ್ಗವು ಇರುವುದು. ಅಲ್ಲಿ ರಂಭೆ ಮೊದಲಾದ ಸುರಸುಂದರಿಯರು ಇರುವರು. ಇಂಥ ಮನೋಹರವಾದ ಮಹಾಮೇರುಪರ್ವತದಲ್ಲಿ ವಿಹರಿಸಲು ನಿನಗೆ ಅಪೇಕ್ಷೆಯುಂಟೇ? ಮೇರುಪರ್ವತದಲ್ಲಿ ಶಚೀದೇವಿಯು ಅಪ್ಸರೆಯರೊಡನೆ ಕೂಡಿ ನಿತ್ಯವೂ ನಿನ್ನ ವಿಹಾರಕ್ಕೆ ಸಹಾಯ ಮಾಡುವಳು. ಅಥವಾ ಸತ್ಪುರುಷರಿಗೆ ಆವಾಸವೂ ಪರ್ವತೋತ್ತಮವೂ ಆದ ನನ್ನ ವಾಸಸ್ಥಾನವಾದ ಕೈಲಾಸದಲ್ಲಿ ವಾಸಿಸಲು ಅಪೇಕ್ಷಿಸುವೆಯಾ? ಅಲ್ಲಿ ಕುಬೇರನ ರಾಜಧಾನಿಯಾದ ಅಲಕಾನಗರ ಇದೆ. ಪವಿತ್ರವಾದ ಗಂಗಾನದಿ ಹರಿಯುತ್ತದೆ. ಪೂರ್ಣಚಂದ್ರನಂತೆ ಬೆಳ್ಳಗಿರುವ ಆ ರಜತಗಿರಿಯ ಗುಹೆ ಮತ್ತು ತಪ್ಪಲುಗಳಲ್ಲಿ ಅನೇಕ ಬ್ರಹ್ಮಕನ್ಯೆಯರು, ಅನೇಕ ಸಾಧುಮೃಗಗಳು, ಮನೋಹರವಾದ ಸರೋವರಗಳಿವೆ. ಹೀಗೆ ಎಲ್ಲಾ ಗುಣಗಳಿಂದಲೂ ಕೂಡಿರುವ ಕೈಲಾಸಪರ್ವತವು ಮೇರುಪರ್ವತವನ್ನು ಮೀರಿಸುತ್ತದೆ. ಹೇಳು ನಿನ್ನ ವಾಸಕ್ಕೆ ಯೋಗ್ಯವಾದ ಪರ್ವತ ಯಾವುದು ಬೇಕೆಂದು? ಅಲ್ಲಿ ಸುಂದರವಾದ ಗೃಹವನ್ನು ನಿರ್ಮಿಸುವೆ’ ಎಂದ ಶಿವ.

ಆಗ ಸತೀದೇವಿಯು ‘ಶಂಕರ, ಹಿಮಾಲಯದಲ್ಲಿಯೇ ನಿನ್ನೊಡನೆ ವಾಸಮಾಡುವೆ. ಆ ಮಹಾಗಿರಿಯಲ್ಲಿಯೇ ಯೋಗ್ಯವಾದ ವಾಸಸ್ಥಾನವನ್ನು ಕಲ್ಪಿಸು’ ಎಂದಳು.

ಶಂಕರನು ತುಂಬಾ ಸಂತೋಷಗೊಂಡು ಅವಳೊಡನೆ ಎತ್ತರವಾದ ಹಿಮಾಲಯ ಪರ್ವತದ ಶಿಖರಕ್ಕೆ ತೆರಳಿದ. ಅಲ್ಲಿ ಸಿದ್ಧ ಸುಂದರಿಯರು ವಿಹರಿಸುವರು. ಸುಂದರವಾದ ಪಕ್ಷಿಗಳು ವಾಸಿಸುವುವು. ಪದ್ಮ ಮತ್ತು ಕನ್ನೈದಿಲೆಗಳಿಂದ ಸರೋವರಗಳು ಕಂಗೊಳಿಸುವುವು. ರತ್ನಮಯವಾಗಿರುವ ಅದರ ಶಿಖರಗಳು ಹಲವೆಡೆ ವಿಚಿತ್ರವಾಗಿಯೂ, ಕೆಲವೆಡೆ ಬಾಲಸೂರ್ಯನಂತೆ ರಕ್ತವರ್ಣವುಳ್ಳದ್ದಾಗಿಯೂ ಶೋಭಿಸುವುವು. ಇಂತಹ ಹಿಮಾಲಯಪರ್ವತಕ್ಕೆ ಶಿವನು ಸತೀದೇವಿಯೊಡನೆ ಹೋದ.

ಆ ಶೈಲದಲ್ಲಿ ಸ್ಫಟಿಕದಂತೆ ಶುಭ್ರವಾದ ಮೇಘಗಳು ರಾರಾಜಿಸುತ್ತಿದ್ದವು. ಹಸುರಾದ ಹಚ್ಚನೆಯ ಹುಲ್ಲುಪ್ರದೇಶವೂ ನಿಬಿಡವಾದ ನೆರಳುಳ್ಳ ಮನೆಗಳೂ ಇದ್ದವು. ಕಮಲ ಮುಂತಾದ ಅನೇಕ ಪುಷ್ಪಗಳಿರುವ ಸರೋವರಗಳಲ್ಲಿದ್ದವು. ಅಲ್ಲಿನ ಮರಗಳಲ್ಲೆಲ್ಲಾ ಹೂವುಗಳು ಅರಳಿ, ಅದರ ಮಧುಪಾನಕ್ಕಾಗಿ ದುಂಬಿಗಳು ಮುತ್ತಿ ಝೇಂಕರಿಸುತ್ತಿದ್ದವು. ಆಗತಾನೇ ಅರಳಿದ ಸುಂದರವಾದ ಕಮಲ ಕನ್ನೈದಿಲೆಗಳು ಮೋಹಕಗೊಳಿಸುವಂತಿದ್ದವು. ಚಕ್ರವಾಕ, ಹಂಸ, ಸಾರಸ, ಬಕ, ನವಿಲು, ಕೋಗಿಲೆ ಮುಂತಾದ ಸುಂದರ ಪಕ್ಷಿಗಳು ಮನೋಹರವಾಗಿ ಧ್ವನಿಗೈಯ್ಯುತ್ತಿದ್ದವು. ಪರ್ವತಗಣಗಳು, ತುರಂಗಮುಖರು, ಸಿದ್ಧರು, ವಿದ್ಯಾಧರಿಯರು, ಗುಹ್ಯಕರು, ಅಪ್ಸರೆಯರು, ದೇವಸ್ತ್ರೀಯರು, ಕಿನ್ನರಿಯರು ಮತ್ತು ಆ ಪರ್ವತದ ಸುಮಂಗಲೆಯರು, ಕನ್ಯೆಯರು, ಅಲ್ಲಿ ಸ್ವೇಚ್ಛೆಯಾಗಿ ವಿಹರಿಸುತ್ತಿದ್ದರು. ವೀಣೆ, ವಾದ್ಯ, ಮೃದಂಗ, ಪಟಹ ಮುಂತಾದ ವಾದ್ಯಗಳೊಡನೆ ಅಪ್ಸರೆಯರು ನರ್ತನಮಾಡುತ್ತಿದ್ದರು. ಅರಳಿದ ಹೂವುಗಳಿಂದ ಆವೃತವಾದ ಸುಂದರವಾದ ಅನೇಕ ಲತಾಗೃಹಗಳಿದ್ದವು. ನಿರ್ಮಲವಾದ ಸಣ್ಣ ಕೊಳಗಳೂ, ದೊಡ್ಡ ಸರೋವರಗಳೂ ಅಲ್ಲಿದ್ದವು. ಇಂತಹ ಹಿಮಾಲಯದಲ್ಲಿ ಶಂಕರನು ಹಿಮವಂತನ ರಾಜಧಾನಿಗೆ ಸಮೀಪದ ಒಂದು ಶಿಖರದಲ್ಲಿ ವಾಸಿಸುತ್ತಾ ಸತೀದೇವಿಯೊಡನೆ ಬಹುಕಾಲ ವಿಹರಿಸಿದ. ಹತ್ತು ಸಾವಿರ ವರ್ಷಗಳ ಪರ್ಯಂತ ಸತೀದೇವಿಯೊಡನೆ ಸುಖವಾಗಿ ವಾಸಮಾಡಿದ. ಕರ್ಮಾನುಷ್ಠಾನ, ತಪಸ್ಸು, ಆತ್ಮಸ್ವರೂಪಗಳಲ್ಲಿ ಆಸಕ್ತಿಯನ್ನು ಬಿಟ್ಟು, ರಾತ್ರಿ-ಹಗಲೂ ಸತೀದೇವಿಯಲ್ಲಿ ತುಂಬಾ ಅನುರಾಗವುಳ್ಳವನಾಗಿದ್ದ. ಸತೀದೇವಿ–ಪರಮೇಶ್ವರರಿಬ್ಬರೂ ಅನುರಾಗವೆಂಬ ವೃಕ್ಷಕ್ಕೆ, ನಿತ್ಯವೂ ಶೃಂಗಾರಭಾವಗಳೆಂಬ ಜಲವನ್ನೆರೆದು ಬೆಳೆಸಿದರು.

ಇಲ್ಲಿಗೆ ಸತೀಖಂಡದ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯುತ್ತದೆ.

ತಿದ್ದುಪಡಿ ಮಧ್ಯಪ್ರದೇಶದ ಕಾಂಗ್ರೆಸ್ ಸರ್ಕಾರವನ್ನು ಉರುಳಿಸಿ, ಬಿಜೆಪಿಯು 2020ರ ಮಾರ್ಚ್‌ನಲ್ಲಿ ಸರ್ಕಾರ ರಚಿಸಿತ್ತು. ಕರ್ನಾಟಕದಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಅತಂತ್ರ ಸರ್ಕಾರ ಉಳಿಸಲು ಆಪರೇಷನ್ ಕಮಲ ನಡೆಸಿದರು. ಶುಕ್ರವಾರದ ಸಂಚಿಕೆಯಲ್ಲಿ ಪ್ರಕಟವಾದ ಆಳ-ಅಗಲದಲ್ಲಿ ಈ ಮಾಹಿತಿಗಳು ತಪ್ಪಾಗಿದ್ದವು.

ಪದಬಂಧ 5006


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸ್ಲೇಟಿನ ಮೇಲೆ ಬರೆಯುವ ಸಾಧನ (3)
3.ಬದಿಯಲ್ಲಿರುವ ಜೈನ ದೇವಾಲಯ (3)
5.ರಾಮನ ಮಗನಿದ್ದರೆ ಈ ಹುರುಪು! (5)
7.ಆನೆಯ ದಾಡೆ (2)
9.ಏಳು ದಿನಗಳ ಅವಧಿ (2)
10.ಪಿನಾಕದ ಬಳಿಯಿರುವ ಕೋಗಿಲೆ (2)
12.ನಗರದಲ್ಲಿರುವ ಮನುಷ್ಯ (2)
14.ಅಡಿಪಾಯದ ಮಾದರಿಯಿದು (5)
16.ಹರನಿಂದ ಸಿಕ್ಕಿರುವ ಆಶೀರ್ವಾದ (3)
17.ನಯವಾಗಿ ಹೊಳೆಯುವ ಕಣ್ಣು (3)

ಮೇಲಿಂದ ಕೆಳಕ್ಕೆ

1.ಬರದಲ್ಲಿಯೂ ತೋರುತ್ತಿರುವ ಒಣ ಜಂಬ! (4)
2.ಹಿತ್ತಿಲಲ್ಲಿರುವ ತೆಳುವಾದ ಸೀರೆ (3)
3.ಬಯಲಲ್ಲಿರುವಾಗ ಮೂಡಿದ ಆಸೆ (3)
4.ಸೂರ್ಯನ ಇನ್ನೊಂದು ಹೆಸರು (4)
6.ಲಕ್ಷಾಧಿಪತಿಯತ್ತ ನೆಟ್ಟಿರುವ ಗುರಿ! (2)
8.ಹತ್ತು ವರ್ಷಗಳ ಅವಧಿ (3)
9.ವಿಷ್ಣುವಿನ ಐದನೆಯ ಅವತಾರ (3)
10.ತಂದೆಯ ತಂದೆ (4)
11.ಈತ ಸಂಸಾರ ಬಂಧನಕ್ಕೆ ಒಳಗಾದವನು (2)
13.ಬಾಳೆ ಹಣ್ಣಿನಿಂದ ಮಾಡಿರುವ ಖಾದ್ಯ (4)
14.ಅಡಿಕೆ ಹಾಳೆಯಿಂದ ಮಾಡಿರುವ ತಟ್ಟೆ (3)
15.ದನವಿರುವ ಮನೆ (3)



5005ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಅಭಿಜಾತ
5.ಜಾಹೀರಾತು
6.ವ್ಯವಸಾಯ 8.ರಿಕ್ತಹಸ್ತ
12.ವನಸುಮ
14.ಅಭಿಮಾನ
15.ಅನುಕಂಪ 16.ತರಗತಿ

ಮೇಲಿಂದ ಕೆಳಕ್ಕೆ:
1.ಅಜಾತಶತ್ರು
2.ಮಾರಾಮಾರಿ
3.ಅಸ್ತವ್ಯಸ್ತ 4.ತನಯ
7.ಸಾನು 9.ಹವನ
10.ಉಷ್ಣಮಾಪಕ
11.ನಾಭಿ 12.ವನಸ್ಪತಿ
13.ಮರುನುಡಿ 14.ಅನೃತ

ಸುಡೊಕು 5392

		9			7	1		4
	6			3				
		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		

5391 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 2, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ತೃತೀಯ ಗಂ. 15-18 **ನಕ್ಷತ್ರ:** ಆಶ್ಲೇಷ ಅಹೋರಾತ್ರ **ಯೋಗ:** ಹರ್ಷಣ ಗಂ. 11-32, **ಕರಣ:** ಗರಜೆ ಗಂ. 15-18, ಮಿಥುನ ಮಾಸದ 17 ನೇ ದಿನ.
ರಾಹುಕಾಲ: ಬೆಳಿಗ್ಗೆ 09:00 – 10:30
ಸೂರ್ಯೋದಯ: 06-11 **ಸೂರ್ಯಾಸ್ತ:** 06-58
ಮುಸ್ಲಿಂ ದಿನಾಂಕ: 02 ಜುಲ್‌ಹಿಜಾ
ಅದೃಷ್ಟ ಸಂಖ್ಯೆ: 8, 13

ಮೇಷ: ಕುಟುಂಬದ ಸದಸ್ಯರೊಂದಿಗೆ ಸಂತಸದಲ್ಲಿ ಕೆಲ ಕಾಲ ಕಳೆಯುವಂತಾಗುವುದು. ಸಿಹಿತಿನಿಸುಗಳ ತಯಾರಕರಿಗೆ ಲಾಭ. ನಿಮ್ಮ ಪ್ರಧಾನ ವೃತ್ತಿಗಿಂತ ಪ್ರವೃತ್ತಿಗೆ ಆಸಕ್ತಿ, ಸಮಯ ಕೊಡುವಿಕೆ ಹೆಚ್ಚಲಿದೆ.

ವೃಷಭ: ಅದೃಷ್ಟ ನಿಮ್ಮೆಡೆಗಿದ್ದರೂ ಎಲ್ಲಾ ಕಾರ್ಯಗಳನ್ನು ಎಚ್ಚರಿಕೆಯಿಂದ ನಿರ್ವಹಿಸುವುದು ಉತ್ತಮ. ಗೃಹ ಕೃತ್ಯದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಿರಿ. ವೈದ್ಯ ವೃತ್ತಿಯವರಿಗೆ ವಿಶೇಷವಾದ ಅನುಭವ ಸಿಗಲಿದೆ.

ಮಿಥುನ: ಆದಾಯ ಮತ್ತು ತೆರಿಗೆ ಅಧಿಕಾರಿಗಳಿಗೆ ದಿಢೀರ್ ವರ್ಗಾವಣೆ. ಮೇಲಧಿಕಾರಿಗಳ ಮೆಚ್ಚುಗೆ ಪಡೆಯಲು ಹೆಚ್ಚಿನ ಪ್ರಯತ್ನ ನಡೆಸಿರಿ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶ.

ಕರ್ಕಾಟಕ: ಇಂದು ನಿಮ್ಮ ಕೆಲಸಗಳು ಮಂದಗತಿಯಲ್ಲಿ ಸಾಗುವುದು. ಮಗನ ಬೇಡಿಕೆಗಳನ್ನು ಪೂರೈಸುವ ನಿಮ್ಮ ಪ್ರಯತ್ನಕ್ಕೆ ಹಲವಾರು ಅಡ್ಡಿ ಆತಂಕಗಳು ಎದುರಾಗುವುದು.

ಸಿಂಹ: ಸ್ವಂತ ಉದ್ಯೋಗಿಗಳಿಗೆ ಬರುವ ನೂತನ ಯೋಚನೆಗಳನ್ನು ಕೈ ಬಿಟ್ಟು ಈಗಿನ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ಪ್ರೀತಿ ಪಾತ್ರರಲ್ಲಿನ ಅಭಿಪ್ರಾಯ ವಿನಿಮಯದಿಂದ ಮನಸ್ಸಿಗೆ ಆನಂದ.

ಕನ್ಯಾ: ಪ್ರತಿಷ್ಠಿತ ಅಧಿಕಾರಕ್ಕಾಗಿ ಸಮಬಲ ಹೋರಾಟವನ್ನು ನಡೆಸುವ ತೀರ್ಮಾನವನ್ನು ಮಾಡಬಹುದು. ಲೇವಾದೇವಿ ವ್ಯವಹಾರಗಳು ನಿರಾತಂಕವಾಗಿ ಮುಂದುವರೆಯುವುದು.

ತುಲಾ: ಕುಟುಂಬದ ಸದಸ್ಯರ ಜೊತೆಗಿನ ಈ ದಿನ ಹಾಸ್ಯಮಯವಾಗಿರಲಿದೆ. ಸದುದ್ದೇಶ ಕಾರಣದಿಂದ ಈ ದಿನ ಕೆಲವು ಕೆಲಸವನ್ನು ಗೌಪ್ಯವಾಗಿ ನಿರ್ವಹಿಸಬೇಕಾಗುವುದು.

ವೃಶ್ಚಿಕ: ನಿಮ್ಮ ಮಹತ್ವಾಕಾಂಕ್ಷೆ ಈಡೇರಿಕೆಯತ್ತ ಮನುಷ್ಯ ಪ್ರಯತ್ನದ ಜೊತೆಯಲ್ಲಿ ಸಕಾರಾತ್ಮಕ ದೃಷ್ಟಿಕೋನವಿರಲಿ. ಅಧಿಕಾರಿಗಳ ಮನಸ್ಸಿನ ಪರಿಸ್ಥಿತಿ ಅವಲೋಕಿಸಿಕೊಂಡು ಚರ್ಚಿಸುವ ಮುಂದಿನ ಹೆಜ್ಜೆ ಇರಿಸಿ.


ಧನು: ಒಡಹುಟ್ಟಿದವರ ಸಹಾಯ ಸಹಕಾರದಿಂದ ಮಾನಸಿಕ ನೆಮ್ಮದಿ ಮತ್ತು ಸಂಸಾರದಲ್ಲಿ ಸಮತೋಲನವನ್ನು ಹೊಂದುವಿರಿ. ನಿಮ್ಮ ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ.

ಮಕರ: ಧಾರ್ಮಿಕ ನಾಯಕರಿಗೆ ಶುಭವಾಗುವುದು. ಆಹಾರದಲ್ಲಿ ಆಗುವ ಬದಲಾವಣೆಯು ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಇತರೆ ಚಟುವಟಿಕೆಯ ಬಗ್ಗೆ ಹೆಚ್ಚಿನ ಒಲವು; ವಿದ್ಯಾಭ್ಯಾಸದಲ್ಲಿ ಹಿನ್ನಡೆಯಾಗುವುದು.

ಕುಂಭ: ಅಕ್ಕಪಕ್ಕದವರ ಕಷ್ಟ-ಸುಖಕ್ಕೆ ಹೆಗಲು ಕೊಡುವ ಮನೋಭಾವ ರೂಢಿಸಿಕೊಳ್ಳಿರಿ. ವ್ಯವಹಾರದಲ್ಲಿ ನಿಮ್ಮಿಂದ ಮೋಸ ಕೃತ್ಯಗಳು ನಡೆದು ಹಣ ಸಂಗ್ರಹ. ಆದರೆ, ಅದರ ದುಷ್ಫಲವನ್ನು ಅನುಭವಿಸುವಂತಾಗುತ್ತದೆ.

ಮೀನ: ವೃತ್ತಿ ಜೀವನದಲ್ಲಿ ಬಹಳಷ್ಟು ಬದಲಾವಣೆ ಮಾಡಿಕೊಳ್ಳುವ ತೀರ್ಮಾನ ನಿಮ್ಮ ಅಭಿವೃದ್ಧಿಗೆ ಕಾರಣವಾಗುವುದು. ಬೆಳೆದ ವಸ್ತುಗಳ ಮಾರಾಟದಿಂದ ಆರ್ಥಿಕ ಅನುಕೂಲವಾಗಿ ಸಾಲದ ಹೊರೆ ಕಡಿಮೆಯಾಗಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,780
ಇಂದಿನ ಅಂತ್ಯ	15,752
▼	28
ದಿನದ ಕನಿಷ್ಠ	15,511

ವಿನಿಮಯ ದರ

$ ಡಾಲರ್	78.94
£ ಪೌಂಡ್	95.38
€ ಯುರೊ	82.68
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹560
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹560

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1600 (1600)
ಸೋಯಾ (ರಿಫೈಂಡ್)	₹1335 (1360)
ಸೂರ್ಯಕಾಂತಿ (ರಿಫೈಂಡ್)	₹1650 (1660)
ಪಾಮೋಲಿನ್	₹1265 (1285)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹381-795
ದ್ವಿತಳಿ (ಬಿ.ವಿ)	₹322-600

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹175
ಆರ್‌ಎಸ್‌ಎಸ್-5	₹166
ಗುಡ್ ಲಾಟ್	₹157.50

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ತಯಾರಿಕಾ ಚಟುವಟಿಕೆ 9 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಯು ಜೂನ್‌ನಲ್ಲಿ ಒಂಭತ್ತು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ತಿಳಿಸಿದೆ.

ಬೆಲೆ ಏರಿಕೆಯ ಒತ್ತಡದಿಂದಾಗಿ ತಯಾರಿಕೆ ಮತ್ತು ಮಾರಾಟವು ಮಂದ ಗತಿಯ ಬೆಳವಣಿಗೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಅದು ಹೇಳಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಮೇ ತಿಂಗಳಿನಲ್ಲಿ 54.6 ಇದ್ದಿದ್ದು ಜೂನ್‌ನಲ್ಲಿ 53.9ಕ್ಕೆ ಇಳಿಕೆ ಆಗಿದೆ. 2021ರ ಸೆಪ್ಟೆಂಬರ್ ಬಳಿಕದ ಅತ್ಯಂತ ಕಡಿಮೆ ಪ್ರಮಾಣದ ಬೆಳವಣಿಗೆ ಇದಾಗಿದೆ.

ವಲಯವು ಸತತ 12ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಮಟ್ಟದಲ್ಲಿಯೇ ಇದೆ. ಸೂಚ್ಯಂಕವು 50 ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ಬೆಲೆ ಏರಿಕೆಯ ಒತ್ತಡ, ಬಡ್ಡಿದರ ಹೆಚ್ಚಳ, ರೂಪಾಯಿ ಮೌಲ್ಯ ಇಳಿಕೆ ಮತ್ತು ಜಾಗತಿಕ ಬಿಕ್ಕಟ್ಟಿನ ನಡುವೆಯೂ ತಯಾರಿಕಾ ವಲಯದ 2022-23ನೇ ಹಣಕಾಸು ವರ್ಷದ ಮೊದಲಾರ್ಧದ ಬೆಳವಣಿಗೆ ಉತ್ತಮವಾಗಿದೆ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	475
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಹೊಸನಗರ	
ಬಿಳಿಗೋಟು	24599-26999
ಚಾಲಿ	34909-36599
ಕೆಂಪುಗೋಟು	33199-38099
ರಾಶಿ	44199-50180
ಕುಮಟ	
ಚಿಪ್ಪು	26589-30569
ಕೋಕ	18019-29309
ಹಳೆಚಾಲಿ	42099-47199
ಹೊಸಚಾಲಿ	35299-38599
ಶಿವಮೊಗ್ಗ	
ಬೆಟ್ಟೆ	51849-53149
ಗೊರಬಲು	17180-37909
ರಾಶಿ	44509-49700
ಸರಕು	61099-79196
ಸಿದ್ದಾಪುರ	
ಬಿಳಿಗೋಟು	25112-31259
ಚಾಲಿ	34899-38599
ಕೋಕ	23699-30312
ಕೆಂಪುಗೋಟು	29689-32089
ರಾಶಿ	42809-48509
ತಟ್ಟಿಬೆಟ್ಟೆ	38889-45849
ಶಿರಸಿ	
ಬೆಟ್ಟೆ	36599-44699
ಬಿಳಿಗೋಟು	24899-33099
ಚಾಲಿ	34299-39019
ರಾಶಿ	46089-48763
ಯಲ್ಲಾಪುರ	
ಬಿಳಿಗೋಟು	26612-32789
ಚಾಲಿ	35219-39099
ಕೋಕ	18612-30300
ಕೆಂಪುಗೋಟು	30399-34355
ರಾಶಿ	46418-52299
ತಟ್ಟಿಬೆಟ್ಟೆ	37010-45492

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16000	16000	230.10 ಸೆಂಟ್ಸ್
ಎಸಿ	9100	8800	8800	
ಆರ್‌ಪಿ	9600	9500	9925	ಲಂಡನ್
ಆರ್‌ಸಿ	4800	4500	4600	2033 ಡಾಲರ್ಸ್

ದೇಶದಲ್ಲಿ ಇಂಧನ ಲಭ್ಯತೆ ಹೆಚ್ಚಿಸುವ ಉದ್ದೇಶದಿಂದ ಕೇಂದ್ರದ ಕ್ರಮ

ಪೆಟ್ರೋಲ್, ಡೀಸೆಲ್ ರಫ್ತಿಗೆ ತೆರಿಗೆ

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ಮತ್ತು ವಿಮಾನ ಇಂಧನ (ಎಟಿಎಫ್) ರಫ್ತಿನ ಮೇಲೆ ಕೇಂದ್ರ ಸರ್ಕಾರವು ತೆರಿಗೆ ವಿಧಿಸಿದೆ. ಅಲ್ಲದೆ, ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲೆ 'ಆಕಸ್ಮಿಕ ಲಾಭ ತೆರಿಗೆ' ಹೇರಿದೆ.

ಇದು ಶುಕ್ರವಾರದಿಂದ ಜಾರಿಗೆ ಬಂದಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ. ದೇಶದಲ್ಲಿ ಉತ್ಪಾದನೆಯಾಗುವ ಕಚ್ಚಾ ತೈಲಕ್ಕೆ ಪ್ರತಿ ಟನ್‌ಗೆ ₹ 23,250ರಷ್ಟು ತೆರಿಗೆ ವಿಧಿಸಲಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನಯಾರಾ ಎನರ್ಜಿಯಂತಹ ಕಂಪನಿಗಳಿಗೆ ತೈಲವನ್ನು ಬೇರೆ ದೇಶಗಳಲ್ಲಿ ಮಾರಾಟ ಮಾಡುವುದಕ್ಕೆ ಉತ್ತೇಜನ ಸಿಗಬಾರದು ಎಂಬ ಕಾರಣಕ್ಕೆ ರಫ್ತು ತೆರಿಗೆ ವಿಧಿಸಲಾಗಿದೆ. ರಿಲಯನ್ಸ್, ನಯಾರಾ ಕಂಪನಿಗಳು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಖರೀದಿಸಿ, ಅದರಿಂದ ಉತ್ಪಾದಿಸಿದ ಇಂಧನವನ್ನು ಯುರೋಪ್ ಮತ್ತು ಅಮೆರಿಕಕ್ಕೆ ರಫ್ತು ಮಾಡಿ ಲಾಭ ಗಳಿಸುತ್ತಿದ್ದವು ಎನ್ನಲಾಗಿದೆ.

ಕಚ್ಚಾ ತೈಲದ ಮೇಲಿನ ತೆರಿಗೆಯಿಂದ ಕೇಂದ್ರ ಸರ್ಕಾರಕ್ಕೆ ವಾರ್ಷಿಕ ₹ 7 ಸಾವಿರ ಕೋಟಿಗಿಂತ ಹೆಚ್ಚು ವರಮಾನ ಸಿಗುವ ನಿರೀಕ್ಷೆ ಇದೆ.

ಪೆಟ್ರೋಲನ್ನು ರಫ್ತು ಮಾಡುವ ಕಂಪನಿಗಳು, ರಫ್ತು ಮಾಡಿದ ಪೆಟ್ರೋಲ್‌ನ ಶೇ 50ರಷ್ಟನ್ನು ದೇಶಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಬೇಕು. ಡೀಸೆಲ್ ರಫ್ತು ಮಾಡುವ ಕಂಪನಿಗಳು, ರಫ್ತಿನ ಶೇ 30ರಷ್ಟು ಪ್ರಮಾಣವನ್ನು ದೇಶದಲ್ಲಿ ಮಾರಾಟ ಮಾಡಬೇಕು ಎಂದು ಕೂಡ ಕೇಂದ್ರವು ತಾಕೀತು ಮಾಡಿದೆ.

ಪೆಟ್ರೋಲ್ ಮತ್ತು ಡೀಸೆಲ್ ರಫ್ತಿಗೆ ನಿರ್ಬಂಧ ವಿಧಿಸಿ, ದೇಶದಲ್ಲಿ ಈ ಇಂಧನಗಳ ಲಭ್ಯತೆಯನ್ನು ಹೆಚ್ಚಿಸುವ ಉದ್ದೇಶ ಕೇಂದ್ರದ್ದು.

ಅಂಕಿ ಅಂಶಗಳು



ಈಚಿನ ತಿಂಗಳುಗಳಲ್ಲಿ ಕಚ್ಚಾ ತೈಲದ ಬೆಲೆಯು ತೀವ್ರ ಏರಿಕೆ ಕಂಡಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯ ಬೆಲೆಗೆ ಕಚ್ಚಾ ತೈಲವನ್ನು ಸಂಸ್ಕರಣಾ ಕಂಪನಿಗಳಿಗೆ ಮಾರಾಟ ಮಾಡುವ ದೇಶಿ ಕಚ್ಚಾ ತೈಲ ಉತ್ಪಾದನಾ ಕಂಪನಿಗಳು ಇದರಿಂದಾಗಿ ಅನಿರೀಕ್ಷಿತವಾಗಿ ಭಾರಿ ಪ್ರಮಾಣದ ಲಾಭ ಮಾಡಿಕೊಳ್ಳುತ್ತಿವೆ. ಇದನ್ನು ಪರಿಗಣಿಸಿ ಸೆಸ್ ವಿಧಿಸಲಾಗಿದೆ ಎಂದು ಹಣಕಾಸು ಸಚಿವಾಲಯ ಹೇಳಿದೆ.

ಆಕಸ್ಮಿಕ ಲಾಭ ತೆರಿಗೆ ಅಂದರೆ...

ಮಾರುಕಟ್ಟೆಯಲ್ಲಿನ ಅನುಕೂಲಕರ ಪರಿಸ್ಥಿತಿಯ ಕಾರಣ ಮಾತ್ರದಿಂದ ಕಂಪನಿಗಳ ಲಾಭವು ಅಸಾಮಾನ್ಯ ರೀತಿಯಲ್ಲಿ ಹೆಚ್ಚಳವಾದರೆ, ಅದಕ್ಕೆ ವಿಧಿಸುವ ತೆರಿಗೆ ಇದು.

ಈ ಕ್ರಮದಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯ ಮೇಲೆ ಪರಿಣಾಮ ಆಗುವುದಿಲ್ಲ, ಇಲ್ಲಿನ ಚಿಲ್ಲರೆ ಮಾರಾಟ ಬೆಲೆಯಲ್ಲಿ ವ್ಯತ್ಯಾಸವಾಗುವುದಿಲ್ಲ ಎಂದು ಸಚಿವಾಲಯ ವಿವರಿಸಿದೆ. ಎಟಿಎಫ್ ರಫ್ತಿನ ಮೇಲೆ ಲೀಟರಿಗೆ ₹ 6ರಂತೆ ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕವನ್ನು ಹೊರಿಸಲಾಗಿದೆ.

ಚಾಲ್ತಿ ಖಾತೆ ಕೊರತೆ ಮಿತಿಗೊಳಿಸಲು, ಆಮದು ತಗ್ಗಿಸಲು ಕ್ರಮ

ಚಿನ್ನ: ಆಮದು ಸುಂಕ ಶೇ 15ಕ್ಕೆ ಏರಿಕೆ

ನವದೆಹಲಿ (ಪಿಟಿಐ): ಚಾಲ್ತಿ ಖಾತೆ ಕೊರತೆಯನ್ನು (ಸಿಎಡಿ) ಮಿತಿಗೊಳಿಸುವ ಹಾಗೂ ಚಿನ್ನದ ಆಮದು ಕಡಿಮೆ ಮಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಚಿನ್ನ ಆಮದಿನ ಮೇಲಿನ ಸುಂಕವನ್ನು ಶೇಕಡ 15ಕ್ಕೆ ಹೆಚ್ಚಿಸಿದೆ. ಇದು ಶೇ 10.75 ಆಗಿತ್ತು.



ಈ ಏರಿಕೆಯು ಜೂನ್ 30ರಿಂದಲೇ ಜಾರಿಗೆ ಬಂದಿದೆ. ಈ ಮೊದಲು ಮೂಲ ಕಸ್ಟಮ್ಸ್ ಸುಂಕವು ಶೇ 7.5ರಷ್ಟು ಆಗಿತ್ತು. ಅದು ಈಗ ಶೇ 12.5ಕ್ಕೆ ಹೆಚ್ಚಾಗಿದೆ. ಇದರ ಜೊತೆ, ಶೇ 2.5ರಷ್ಟು ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್ (ಎಐಡಿಸಿ) ಸೇರಿಕೊಳ್ಳುವುದರಿಂದ, ಚಿನ್ನದ ಮೇಲಿನ ಒಟ್ಟು ಸುಂಕವು ಶೇ15ರಷ್ಟು ಆಗುತ್ತದೆ.

ಚಿನ್ನದ ಆಮದು ಪ್ರಮಾಣದಲ್ಲಿ ಭಾರಿ ಏರಿಕೆ ಆಗಿದೆ. ಮೇ ತಿಂಗಳಿನಲ್ಲಿ ಒಟ್ಟು 107 ಟನ್ ಚಿನ್ನ ಆಮದು ಮಾಡಿಕೊಳ್ಳಲಾಗಿದೆ. ಜೂನ್ ತಿಂಗಳಿನಲ್ಲಿಯೂ ಚಿನ್ನದ ಆಮದು ಗಣನೀಯವಾಗಿದೆ. ಚಿನ್ನದ ಆಮದು ಹೆಚ್ಚಾಗುತ್ತಿರುವುದು ಸಿಎಡಿ ಮೇಲೆ ಒತ್ತಡ ಸೃಷ್ಟಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಈಗ ಚಿನ್ನದ ಮೇಲಿನ ವಿವಿಧ ತೆರಿಗೆಗಳ ಒಟ್ಟು ಪ್ರಮಾಣವು ಶೇ 18.45ಕ್ಕೆ ಹೆಚ್ಚಳವಾಗಿದೆ ಎಂದು ವಿಶ್ವ ಚಿನ್ನ ಸಮಿತಿಯ ಭಾರತದ ಸಿಇಒ ಸೋಮಸುಂದರಂ ಪಿ.ಆರ್. ಹೇಳಿದ್ದಾರೆ. ಈ ಮೊದಲು ತೆರಿಗೆ ಪ್ರಮಾಣವು ಶೇ 14ರಷ್ಟು ಆಗಿತ್ತು.

'ಸುಂಕದಲ್ಲಿನ ಈ ಹೆಚ್ಚಳವು ಶಾಶ್ವತವಾಗಿ ಜಾರಿಯಲ್ಲಿ ಇರುತ್ತದೆ ಎಂದಾದರೆ ಚಿನ್ನ ಮಾರುಕಟ್ಟೆಯ ಮೇಲೆ ದೀರ್ಘಾವಧಿಯಲ್ಲಿ ದುಷ್ಪರಿಣಾಮ ಉಂಟಾಗಲಿದೆ. ಚಿನ್ನ ಕಾಳಸಂತೆಯನ್ನು ಬಲಗೊಳಿಸುತ್ತದೆ' ಎಂದು ಹೇಳಿದ್ದಾರೆ.

ಚಿನ್ನದ ಬೆಲೆ ₹ 1,088 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 1,088ರಷ್ಟು ಏರಿಕೆ ಕಂಡು ₹ 51,458ರಂತೆ ಮಾರಾಟವಾಗಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 411ರಷ್ಟು ಕಡಿಮೆ ಆಗಿದ್ದು ₹ 58,159ಕ್ಕೆ ತಲುಪಿದೆ.

ಕೇಂದ್ರ ಸರ್ಕಾರವು ಚಿನ್ನದ ಆಮದು ಸುಂಕವನ್ನು ಹೆಚ್ಚಿಸಿದ ನಂತರದಲ್ಲಿ ಬೆಲೆ ಏರಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ಹೇಳಿದ್ದಾರೆ.

₹ 1.44 ಲಕ್ಷ ಕೋಟಿ ಜಿಎಸ್‌ಟಿ ವರಮಾನ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಜೂನ್‌ನಲ್ಲಿ ₹ 1.44 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಶುಕ್ರವಾರ ಮಾಹಿತಿ ನೀಡಿದೆ.


ಕಳೆದ ವರ್ಷದ ಜೂನ್‌ನಲ್ಲಿ ₹92,800 ಕೋಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ವರ್ಷದ ಜೂನ್‌ನಲ್ಲಿ ಶೇಕಡ 56ರಷ್ಟು ಹೆಚ್ಚು ವರಮಾನ ಸಂಗ್ರಹ ಆಗಿದೆ.

ಜಿಎಸ್‌ಟಿ ವ್ಯವಸ್ಥೆಯು ಜಾರಿಗೆ ಬಂದ ಬಳಿಕ ಐದನೇ ಬಾರಿಗೆ ತಿಂಗಳ ವರಮಾನ ಸಂಗ್ರಹವು ₹ 1.40 ಲಕ್ಷ ಕೋಟಿಯನ್ನು ದಾಟಿದಂತಾಗಿದೆ. 2022ರ ಮಾರ್ಚ್ ನಂತರ ಸತತ ನಾಲ್ಕನೇ ಬಾರಿಗೆ ಈ ಗಡಿ ದಾಟಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಜೂನ್‌ನಲ್ಲಿ ಸರಕುಗಳ ಆಮದು ಮೂಲಕ ಸಂಗ್ರಹ ಆಗಿರುವ ವರಮಾನವು ಕಳೆದ ವರ್ಷದ ಜೂನ್‌ನಲ್ಲಿ ಆಗಿದ್ದ ವರಮಾನ ಸಂಗ್ರಹಕ್ಕಿಂತಲೂ ಶೇ 55ರಷ್ಟು ಹೆಚ್ಚಿಗೆ ಇದೆ. ಅದೇ ರೀತಿ, ದೇಶಿ ವಹಿವಾಟಿನ ಮೂಲಕ (ಸೇವೆಗಳ ಆಮದನ್ನೂ ಒಳಗೊಂಡು) ಸಂಗ್ರಹ ಆಗಿರುವ ವರಮಾನವು ಕಳೆದ ವರ್ಷದ ಜೂನ್‌ಗಿಂತಲೂ ಶೇ 56ರಷ್ಟು ಹೆಚ್ಚಿಗೆ ಇದೆ.

2022ರ ಮೇ ತಿಂಗಳಿನಲ್ಲಿ 7.3 ಕೋಟಿ ಇ-ವೇ ಬಿಲ್ ಸೃಷ್ಟಿಯಾಗಿದೆ. ಏಪ್ರಿಲ್‌ನಲ್ಲಿ ಆಗಿದ್ದ 7.4 ಕೋಟಿಗೆ ಹೋಲಿಸಿದರೆ ಶೇ 2ರಷ್ಟು ಕಡಿಮೆ ಆಗಿದೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

ಜಿಎಸ್‌ಟಿ ಸಂಗ್ರಹ ವಿವರ (₹ ಕೋಟಿಗಳಲ್ಲಿ)



ಜಿಎಸ್‌ಟಿ ವ್ಯವಸ್ಥೆಯು ಸುಲಲಿತ ವಹಿವಾಟಿಗೆ ಇನ್ನಷ್ಟು ಉತ್ತೇಜನ ನೀಡಿದ್ದು, ಒಂದು ದೇಶ, ಒಂದು ತೆರಿಗೆ ಪರಿಕಲ್ಪನೆಯನ್ನು ಸಾಕಾರಗೊಳಿಸಿದೆ
ನರೇಂದ್ರ ಮೋದಿ, ಪ್ರಧಾನಿ

ಬೆಂಗಳೂರು ಎಫ್‌ಸಿಗೆ ಅಮೃತ್, ಫೈಸಲ್

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಆಡುವ ಬೆಂಗಳೂರು ಎಫ್‌ಸಿ, ಅಮೃತ್ ಗೋಪೆ ಮತ್ತು ಫೈಸಲ್ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಈ ಹಿಂದೆ ಐ ಲೀಗ್ ತಂಡ ಟ್ರಾ‌ಉ ಎಫ್‌ಸಿಯಲ್ಲಿದ್ದ ಅಮೃತ್, 2023-24ರ ಆವೃತ್ತಿಗೆ ಬಿಎಫ್‌ಸಿ ತಂಡದಲ್ಲಿ ಆಡಲಿದ್ದಾರೆ. ಫೈಸಲ್ ಈ ಮೊದಲು ಮೊಹಮ್ಮಡನ್ ಸ್ಪೋರ್ಟಿಂಗ್ ತಂಡವನ್ನು ಪ್ರತಿನಿಧಿಸಿದ್ದರು. 2024-24ರವರೆಗೆ ಅವರು ಬೆಂಗಳೂರು ತಂಡದ ಪರ ಕಣಕ್ಕಿಳಿಯಲಿದ್ದಾರೆ.

ಮುಂಬೈ ಧಾರಣೆ

ಶೇಂಗಾ

1-7-2022

ಜಾವಾ 70/80(ಹೊಸ)	10800-10850
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10850-10950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	1260 (1300)
ಪಾಮ್ ವಾರದ ಡೆಲಿವರಿ	1263 (1583)
ಸೂರ್ಯಕಾಂತಿ ಎಣ್ಣೆ ಕಚ್ಚಾ	1610 (1620)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,700 (50,550)
ಬೆಳ್ಳಿ ಕೆ.ಜಿ 57,800 (58,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಿಮ್ಮಿ ದಾಳಿಗೆ ದಿಟ್ಟ ತಿರುಗೇಟು ನೀಡಿದ ಎಡಗೈ ಜೋಡಿ ರಿಷಭ್–ಜಡೇಜ

ಭಾರತಕ್ಕೆ ಪಂತ್ ಶತಕದಾಸರೆ



ಶತಕ ಗಳಿಸಿದ ಸಂಭ್ರಮದಲ್ಲಿ ಭಾರತದ ರಿಷಭ್ ಪಂತ್ –ಎಎಫ್‌ಪಿ ಚಿತ್ರ

ಬರ್ಮಿಂಗ್‌ಹ್ಯಾಮ್ : ವಿದೇಶದ ಅಂಗಳದಲ್ಲಿ ಮತ್ತೊಮ್ಮೆ ರಿಷಭ್ ಪಂತ್ ಭಾರತ ತಂಡಕ್ಕೆ ಆಸರೆಯಾದರು. ಭರ್ಜರಿ ಶತಕ ದಾಖಲಿಸಿದರು.

ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾದ ಟೆಸ್ಟ್‌ನಲ್ಲಿ ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಭಾರತ ತಂಡ ಜಿಮ್ಮಿ ಆ್ಯಂಡರ್ಸನ್ (52ಕ್ಕೆ3) ಕೊಟ್ಟ ಬಲವಾದ ಪೆಟ್ಟಿಗೆ ಆಘಾತ ಅನುಭವಿಸಿತು. ತಂಡದ ಮೊತ್ತವು ನೂರು ರನ್ ದಾಟುವ ಮುನ್ನವೇ ಐದು ವಿಕೆಟ್‌ಗಳು ಪತನವಾಗಿದ್ದವು.

ಆದರೆ, ಆತಿಥೇಯ ವೇಗಿಗಳ ಬಿರುಗಾಳಿಗೆ ಎದೆಗೊಟ್ಟು ನಿಂತ ದೆಹಲಿ ಹುಡುಗ ರಿಷಭ್ (146 ರನ್, 111 ಎ, 4X19,6X4), ದಿಟ್ಟವಾಗಿ ಬ್ಯಾಟ್ ಬೀಸಿದರು. 131.53ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ಟಿ20 ಮಾದರಿಯ ಬ್ಯಾಟಿಂಗ್ ಮೂಲಕ ಗಮನ ಸೆಳೆದರು.

ಅವರಿಗೆ ಎಡಗೈ ಆಲ್‌ರೌಂಡರ್ ರವೀಂದ್ರ ಜಡೇಜ (ಬ್ಯಾಟಿಂಗ್ 83, 163 ಎ, 4X10) ಜೊತೆ ನೀಡಿದರು. ಇದರಿಂದಾಗಿ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 73 ಓವರ್‌ಗಳಲ್ಲಿ 7ಕ್ಕೆ 338 ರನ್ ಗಳಿಸಿತು.

ಆರನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 222 ರನ್ ಗಳಿಸಿದರು. ಈ ಹಿಂದೆಯೂ ರಿಷಭ್ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿ ಭಾರತ ತಂಡವನ್ನು ಇಂತಹದೇ ಪರಿಸ್ಥಿತಿಗಳಿಂದ ಪಾರು ಮಾಡಿದ್ದರು. ವೇಗಿಗಳ ಸ್ವಿಂಗ್‌ಗಳನ್ನು ಚುರುಕಾಗಿ ಗುರುತಿಸಿದ ಅವರು ಬೌಂಡರಿಗಟ್ಟಿದ ರೀತಿ ಚಿತ್ತಾಪಹಾರಿಯಾಗಿತ್ತು.

ಐಪಿಎಲ್‌ನಲ್ಲಿ ಗಾಯಗೊಂಡು ದೀರ್ಘ ಕಾಲ ವಿಶ್ರಾಂತಿ ಪಡೆದಿದ್ದ ಜಡೇಜ ಕೂಡ ತಮ್ಮ ನೈಜ ಆಟಕ್ಕೆ ಕುದುರಿದ್ದು ತಂಡಕ್ಕೆ ಚೇತರಿಕೆ ಲಭಿಸಿತು.

ಕುಸಿದ ಅಗ್ರ ಬ್ಯಾಟರ್‌ಗಳು: ಕೋವಿಡ್‌ನಿಂದಾಗಿ ಪ್ರತ್ಯೇಕವಾಸಕ್ಕೆ ತೆರಳಿರುವ ರೋಹಿತ್ ಶರ್ಮಾ ಬದಲಿಗೆ ಚೇತೇಶ್ವರ್ ಪೂಜಾರ ಅವರು ಶುಭಮನ್ ಗಿಲ್ ಜೊತೆ ಇನಿಂಗ್ಸ್ ಆರಂಭಿಸಿದರು.

ಆದರೆ, ಹೊಸ ಚೆಂಡಿನ ದಾಳಿ ಎದುರಿಸಲು ಯುವ ಬ್ಯಾಟರ್ ಗಿಲ್ ಮತ್ತು ಅನುಭವಿ ಪೂಜಾರ ಪರದಾಡಿದರು. ಕೌಂಟಿಯಲ್ಲಿ ಉತ್ತಮ ಲಯಕ್ಕೆ ಮರಳಿದ್ದ ಪೂಜಾರ ಇಲ್ಲಿ ಮತ್ತೊಮ್ಮೆ ವೈಫಲ್ಯ ಅನುಭವಿಸಿದರು.

ಏಳನೇ ಓವರ್‌ನಲ್ಲಿ ಜೇಮ್ಸ್ ಎಸೆತವು ಆಫ್‌ಸ್ಟಂಪ್‌ನಿಂದ ಸ್ವಲ್ಪ ಹೊರಗಿತ್ತು. ಅದನ್ನು ಆಡುವ ಪ್ರಯತ್ನ ಮಾಡಿದ ಗಿಲ್ ಎರಡನೇ ಸ್ಲಿಪ್‌ನಲ್ಲಿ ಜ್ಯಾಕ್ ಕ್ರಾಲಿಗೆ ಕ್ಯಾಚಿತ್ತರು. ಇಲ್ಲಿಂದ ಜಿಮ್ಮಿ ಬೇಟೆ ಆರಂಭವಾಯಿತು.

ಇನಿಂಗ್ಸ್‌ನ 18ನೇ ಓವರ್‌ನಲ್ಲಿ ಪೂಜಾರಾಗೂ ಖೆಡ್ಡಾ ತೋಡಿದ ಜಿಮ್ಮಿ ಹಿರಿಹಿರಿ ಹಿಗ್ಗಿದರು. ನಾಲ್ಕು ಓವರ್‌ಗಳ ನಂತರ ಇನ್ನೊಂದು ಬದಿಯಿಂದ ವೇಗಿ ಮ್ಯಾಟಿ ಪಾಟ್ಸ್ ಕೂಡ ತಮ್ಮ ಕೈಚಳಕ ಮೆರೆದರು. ಆಟಕ್ಕೆ ಕುದುರಿಕೊಳ್ಳುತ್ತಿದ್ದ ಹನುಮವಿಹಾರಿಯನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ವಿರಾಟ್ ಕೊಹ್ಲಿ ಸ್ಟಂಪ್ ಕಿತ್ತ ಪಾಟ್ಸ್ ಸಂಭ್ರಮಿಸಿದರು.

ಕೊಹ್ಲಿಯ ವೈಫಲ್ಯಯಾತ್ರೆ ಮುಂದುವರಿಯಿತು. ಶ್ರೇಯಸ್ ಅಯ್ಯರ್ ತಮಗೆ ಲಭಿಸಿದ ಅವಕಾಶ ಬಳಸಿಕೊಳ್ಳುವಲ್ಲಿ ವಿಫಲರಾದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 7ಕ್ಕೆ338 (73 ಓವರ್)

ಶುಭಮನ್ ಸಿ ಕ್ರಾಲಿ ಬಿ ಆ್ಯಂಡರ್ಸನ್ 17 (24ಎ, 4X4), ಪೂಜಾರ ಸಿ ಕ್ರಾಲಿ ಬಿ ಆ್ಯಂಡರ್ಸನ್ 13 (46ಎ, 4X2), ಹನುಮ ಎಲ್‌ಬಿಡಬ್ಲ್ಯು ಬಿ ಮ್ಯಾಟಿ 20 (53ಎ, 4X1), ವಿರಾಟ್ ಬಿ ಮ್ಯಾಟಿ 11 (19ಎ, 4X2), ರಿಷಭ್ ಸಿ ಕ್ರಾಲಿ ಬಿ ರೂಟ್ 146 (111 ಎ, 4X19,6X4), ಶ್ರೇಯಸ್ ಸಿ ಬಿಲಿಂಗ್ಸ್ ಬಿ ಆ್ಯಂಡರ್ಸನ್ 15 (11ಎ, 4X3), ಜಡೇಜ ಬ್ಯಾಟಿಂಗ್ 83 (163ಎ, 4X10), ಶಾರ್ದೂಲ್ ಸಿ ಬಿಲಿಂಗ್ಸ್ ಬಿ ಸ್ಟೋಕ್ಸ್ 1 (12 ಎ), ಮೊಹಮ್ಮದ್ ಶಮಿ ಬ್ಯಾಟಿಂಗ್ 0

ಇತರೆ 32 (ಲೆಗ್‌ಬೈ 4, ನೋಬಾಲ್ 16, ನೋಬಾಲ್ 12)

ವಿಕೆಟ್ ಪತನ: 1–27 (ಶುಭಮನ್ ಗಿಲ್; 6.2), 2–46 (ಚೇತೇಶ್ವರ್ ಪೂಜಾರ; 17.6), 3–64 (ಹನುಮವಿಹಾರಿ; 22.2), 4–71 (ವಿರಾಟ್ ಕೊಹ್ಲಿ; 24.2), 5–98 (ಶ್ರೇಯಸ್ ಅಯ್ಯರ್; 27.5), 6–320 (ರಿಷಭ್ ಪಂತ್; 66.2), 7–323 (ಶಾರ್ದೂಲ್ ಠಾಕೂರ್; 67.6)

ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 19–4–52–3, ಸ್ಟುವರ್ಟ್ ಬ್ರಾಡ್ 15–2–53–0, ಮ್ಯಾಟಿ ಪಾಟ್ಸ್ 17–1–85–2, ಜ್ಯಾಕ್ ಲೀಚ್ 9–0–71–0, ಬೆನ್ ಸ್ಟೋಕ್ಸ್ 10–0–34–1, ಜೋ ರೂಟ್ 3–0–23–1

ಲಂಕಾ ವಿರುದ್ಧ ಭಾರತ ಮಹಿಳೆಯರಿಗೆ 4 ವಿಕೆಟ್ ಜಯ

ದೀಪ್ತಿ, ಪೂಜಾ ಆಲ್‌ರೌಂಡ್ ಆಟ



ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರ

ಪಲ್ಲೆಕೆಲೆ (ಪಿಟಿಐ): ದೀಪ್ತಿ ಶರ್ಮ ಮತ್ತು ಪೂಜಾ ವಸ್ತ್ರಕರ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಭಾರತ ತಂಡ, ಶ್ರೀಲಂಕಾ ವಿರುದ್ಧದ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 4 ವಿಕೆಟ್‌ಗಳ ಜಯ ಸಾಧಿಸಿತು.

ಪಲ್ಲೆಕೆಲೆಯಲ್ಲಿ ಶುಕ್ರವಾರ ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ 48.2 ಓವರ್‌ಗಳಲ್ಲಿ 171 ರನ್‌ಗಳಿಗೆ ಆಲೌಟಾಯಿತು. ಭಾರತ 38 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಗೆಲುವಿನ ಗುರಿ ತಲುಪಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1–0 ರಲ್ಲಿ ಮುನ್ನಡೆ ಪಡೆದಿದೆ.

ಸುಲಭ ಗುರಿ ಬೆನ್ನಟ್ಟಿದ ಭಾರತ, ಶಫಾಲಿ ವರ್ಮ (35), ನಾಯಕಿ ಹರ್ಮನ್‌ಪ್ರೀತ್ ಕೌರ್ (44) ಮತ್ತು ಹರ್ಲೀನ್ ಡಿಯೊಲ್ (34) ಅವರ ಉತ್ತಮ ಆಟದಿಂದ ಗೆಲುವಿನೆಡೆಗೆ ದಾಪುಗಾಲಿಟ್ಟಿತ್ತು. ಆದರೆ 3 ವಿಕೆಟ್‌ಗೆ 123 ರನ್ ಗಳಿಸಿದ್ದ ತಂಡ, 138 ರನ್ ಗಳಿಸುವಷ್ಟರಲ್ಲಿ 6 ವಿಕೆಟ್ ಕಳೆದುಕೊಂಡು ಒತ್ತಡಕ್ಕೆ ಒಳಗಾಯಿತು.

ಈ ವೇಳೆ ಜತೆಯಾದ ದೀಪ್ತಿ (ಅಜೇಯ 22) ಮತ್ತು ಪೂಜಾ (ಅಜೇಯ 21) ಎಚ್ಚರಿಕೆಯ ಆಟ ವಾಡಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಬೌಲಿಂಗ್‌ನಲ್ಲೂ ಮಿಂಚಿದ್ದ ಇವರಿಬ್ಬರು ತಮ್ಮೊಳಗೆ 5 ವಿಕೆಟ್ ಹಂಚಿಕೊಂಡಿದ್ದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ: 171 (48.2 ಓವರ್) ಹಸಿನಿ ಪೆರೇರಾ 37, ಹರ್ಷಿತಾ ಸಮರವಿಕ್ರಮ 28, ನೀಲಾಕ್ಷಿ ಡಿ'ಸಿಲ್ವ 43, ಅನುಷ್ಕಾ ಸಂಜೀವನಿ 18, ರೇಣುಕಾ ಸಿಂಗ್ 29ಕ್ಕೆ 3, ದೀಪ್ತಿ ಶರ್ಮ 25ಕ್ಕೆ 3, ರಾಜೇಶ್ವರಿ ಗಾಯಕ್ವಾಡ್ 33ಕ್ಕೆ 1, ಹರ್ಮನ್‌ಪ್ರೀತ್ ಕೌರ್ 13ಕ್ಕೆ 1, ಪೂಜಾ ವಸ್ತ್ರಕರ್ 26ಕ್ಕೆ 2) **ಭಾರತ:** 6ಕ್ಕೆ 176 (38 ಓವರ್) ಶಫಾಲಿ ವರ್ಮ 35, ಹರ್ಮನ್‌ಪ್ರೀತ್ ಕೌರ್ 44, ಹರ್ಲೀನ್ ಡಿಯೊಲ್ 34, ದೀಪ್ತಿ ಶರ್ಮ ಔಟಾಗದೆ 22, ಪೂಜಾ ವಸ್ತ್ರಕರ್ ಔಟಾಗದೆ 21, ಇನೊಕ ರಣವೀರ 39ಕ್ಕೆ 4, ಒಶದಿ 34ಕ್ಕೆ 2) **ಫಲಿತಾಂಶ:** ಭಾರತಕ್ಕೆ 4 ವಿಕೆಟ್ ಗೆಲುವು; ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ

90 ಮೀಟರ್ಸ್ ಸಾಧನೆ ಕೈಗೂಡುವ ವಿಶ್ವಾಸ; ಚೋಪ್ರಾ

ಸ್ಟಾಕ್‌ಹೋಮ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಜಾವೆಲಿನ್ ಚಾಂಪಿಯನ್ ನೀರಜ್ ಚೋಪ್ರಾ ಡೈಮಂಡ್ ಲೀಗ್ ಕೂಟದಲ್ಲಿ ಅಲ್ಪ ಅಂತರದಲ್ಲಿ 90 ಮೀಟರ್ ದೂರ ಎಸೆತದ ದಾಖಲೆಯನ್ನು ಕೈತಪ್ಪಿಸಿಕೊಂಡರು.

ಗುರುವಾರ ನಡೆದ ಡೈಮಂಡ್ ಲೀಗ್‌ನಲ್ಲಿ 24 ವರ್ಷದ ನೀರಜ್ 89.94 ಮೀಟರ್ಸ್ ಎಸೆತ ಸಾಧಿಸಿದರು. ಇದರೊಂದಿಗೆ ತಮ್ಮ ರಾಷ್ಟ್ರೀಯ ದಾಖಲೆ (89.30 ಮೀ) ಯನ್ನು ಉತ್ತಮಪಡಿಸಿಕೊಂಡರು. ಅಲ್ಲದೇ ಬೆಳ್ಳಿ ಪದಕ ಜಯಿಸಿದರು. ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ (90.31 ಮೀ) ಚಿನ್ನದ ಪದಕ ಗಳಿಸಿದರು.

'ಮೊದಲ ಥ್ರೋ ಮಾಡಿದಾಗ ಖುಷಿಪಟ್ಟಿದ್ದೆ. 90 ಮೀಟರ್ಸ್ ದಾಟುವ ಭರವಸೆ ಮೂಡಿತ್ತು. ಆದರೆ ಸಾಧ್ಯವಾಗಲಿಲ್ಲ. ಇರಲಿ. ಈ ವರ್ಷ ಇನ್ನೂ ಬಹಳಷ್ಟು ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದೇನೆ. 90 ಮೀಟರ್ಸ್ ದಾಟುವುದು ಖಚಿತ' ಎಂದು ನೀರಜ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

'ಆ್ಯಂಡರ್ಸನ್ ಪೀಟರ್ಸನ್ ಅವರು ತೊಂಬತ್ತು ಮೀಟರ್ಸ್ ದಾಟಿದರು. ಜಾವೆಲಿನ್ ಒಂದೇ ಲೈನ್‌ನಲ್ಲಿ ಹೋಗಬೇಕು. ಜೊತೆಗೆ ತಾಂತ್ರಿಕ ಕೌಶಲ ಕರಾರುವಾಕ್ ಆಗಿರಬೇಕು' ಎಂದರು.



ರಾಮಯ್ಯ ತಾಂತ್ರಿಕ ಸಂಸ್ಥೆಯ ಬ್ಯಾಸ್ಕೆಟ್‌ಬಾಲ್ ತಂಡ: ನಿಂತವರು (ಎಡದಿಂದ): ದಿನೇಶ್, ವಿಷ್ಣು, ರೋಹನ್, ಸಚಿನ್ ಬೆಳವಾಡಿ (ಕೋಚ್), ಅಕ್ಷನ್, ಅನೀಶ್ ಪ್ರದ್ಯುಮ್ನ, ಜೋಷುವಾ. ಕುಳಿತವರು: ಅಭಿಷೇಕ್, ರೇಹಾನ್, ಶ್ರೀನಿವಾಸ್, ಧ್ರುವ

ಬ್ಯಾಸ್ಕೆಟ್‌ಬಾಲ್: ಆರ್‌ಐಟಿಗೆ ಪ್ರಶಸ್ತಿ

ಬೆಂಗಳೂರು: ರಾಮಯ್ಯ ತಾಂತ್ರಿಕ ಸಂಸ್ಥೆ (ಆರ್‌ಐಟಿ) ಕಾಲೇಜು ತಂಡವು ಪುರುಷರ ರಾಜ್ಯಮಟ್ಟದ ಅಂತರಕಾಲೇಜು ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದೆ.

ಇಲ್ಲಿಯ ಸೇಂಟ್ ಜೋಸೆಫ್ ಕಾಲೇಜು ಮೈದಾನದಲ್ಲಿ ಗುರುವಾರ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ರಾಮಯ್ಯ ಸಂಸ್ಥೆಯ ತಂಡವು 72–61ರಿಂದ ಆರ್‌ವಿಸಿಇ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಪ್ರದ್ಯುಮ್ನ 20 ಮತ್ತು ರೋಹನ್ 15 ಪಾಯಿಂಟ್ಸ್ ಗಳಿಸಿದರು. ಆರ್‌ಸಿವಿಇ ತಂಡದ ನಕುಲ್ 18 ಮತ್ತು ವಿಕಾಸ್ 16 ಪಾಯಿಂಟ್ಸ್ ಕಲೆಹಾಕಿದರು.

24 ತಾಸುಗಳ ಅಲ್ಟ್ರಾ ರನ್: ಭಾರತಕ್ಕೆ ಪದಕದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿ ಮೊದಲ ಬಾರಿ ನಡೆಯಲಿರುವ ಅಂತರಾಷ್ಟ್ರೀಯ ಮಟ್ಟದ ಅಲ್ಟ್ರಾ ರನ್ನಿಂಗ್ ಚಾಂಪಿಯನ್‌ಷಿಪ್‌ಗೆ ಉದ್ಯಾನನಗರಿ ಆತಿಥ್ಯ ವಹಿಸಿದೆ. ಅಂತರರಾಷ್ಟ್ರೀಯ ಅಲ್ಟ್ರಾ ರನ್ನರ್ಸ್ ಸಂಸ್ಥೆ (ಐಎಯು) ಮಾನ್ಯತೆಯ 24 ತಾಸುಗಳ ಏಷ್ಯಾ ಒಷಿಯಾನಿಯಾ ಚಾಂಪಿಯನ್‌ಷಿಪ್ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಮತ್ತು ಭಾನುವಾರ ನಡೆಯಲಿದ್ದು, ಭಾರತದ ಅಥ್ಲೀಟ್‌ಗಳು ಪದಕದ ಮೇಲೆ ಕಣ್ಣಿಟ್ಟಿದ್ದಾರೆ.

ಚಾಂಪಿಯನ್‌ಷಿಪ್ ಕುರಿತು ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಆದಿಲ್ ಸುಮರಿವಾಲಾ ಈ ಕುರಿತು ಮಾಹಿತಿ ನೀಡಿದರು.

'ಶನಿವಾರ ಬೆಳಿಗ್ಗೆ 8ರಿಂದ ಭಾನುವಾರ ಬೆಳಿಗ್ಗೆ 8 ಗಂಟೆಯವರೆಗೆ ಕಂಠೀರವ ಕ್ರೀಡಾಂಗಣದ 400 ಮೀಟರ್ಸ್ ಸಿಂಥೆಟಿಕ್ ಟ್ರ್ಯಾಕ್‌ನಲ್ಲಿ ಓಟ ನಡೆಯಲಿದೆ. ಪ್ರತಿ ನಾಲ್ಕು ತಾಸುಗಳಿಗೊಮ್ಮೆ ಅಥ್ಲೀಟ್‌ಗಳು ಮಾರ್ಗ ಬದಲಿಸಲಿದ್ದಾರೆ. 15 ನಿಮಿಷಗಳವರೆಗೆ ವಿರಾಮವನ್ನೂ ತೆಗೆದುಕೊಳ್ಳಬಹುದು' ಎಂದರು.

37 ಅಥ್ಲೀಟ್‌ಗಳು ಭಾಗಿ: ಐಎಯು, ಎಎಫ್‌ಐ ಸಹಯೋಗದೊಂದಿಗೆ ಎನ್‌ಇಬಿ ಸ್ಪೋರ್ಟ್ಸ್ ಆಯೋಜಿಸಿರುವ ಕೂಟದಲ್ಲಿ ಆಸ್ಟ್ರೇಲಿಯಾ, ಚೀನಾ ತೈಪೆ, ಪೋಲೆಂಡ್, ಲೆಬನಾನ್, ಇಂಗ್ಲೆಂಡ್ ಮತ್ತು ಆತಿಥೇಯ ಭಾರತದ ಸೇರಿ ಒಟ್ಟು 37 ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ.

ಭಾರತದ 12 ಮಂದಿಯ ತಂಡ ಈ ಕೂಟದಲ್ಲಿ ಭಾಗವಹಿಸುತ್ತಿದೆ.

ಕುದುರೆ ರೇಸ್- ಜಿಎಸ್‌ಟಿ ಬೇಡ: ಟರ್ಫ್ ಅಥಾರಿಟೀಸ್

ಮರುಪರಿಶೀಲನೆ ನಿರ್ಧಾರ: ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುದುರೆ ರೇಸ್‌ಗಳ ಬಹುಮಾನ ಮೊತ್ತಕ್ಕೆ ತೆರಿಗೆ ವಿಧಿಸುವ ಪದ್ಧತಿ ಜಗತ್ತಿನಲ್ಲಿ ಎಲ್ಲೂ ಇಲ್ಲ. ಭಾರತದಲ್ಲೂ ತೆರಿಗೆ ವಿಧಿಸುವ ನಿಯಮ ತರುವುದು ಬೇಡ' ಎಂದು ದೇಶದ ವಿವಿಧ ಟರ್ಫ್ ಕ್ಲಬ್‌ಗಳ ಒಕ್ಕೂಟ 'ದಿ ಟರ್ಫ್ ಅಥಾರಿಟೀಸ್ ಆಫ್ ಇಂಡಿಯಾ' ಹೇಳಿದೆ.

'ಕುದುರೆ ರೇಸ್‌ಗಳಿಗೆ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಯ (ಜಿಎಸ್‌ಟಿ) ಅಡಿಯಲ್ಲಿ ಶೇಕಡ 28ರಷ್ಟು ತೆರಿಗೆ ವಿಧಿಸಬೇಕೆಂಬ ಪ್ರಸ್ತಾವವನ್ನು ಕೈಬಿಡಬೇಕು' ಎಂದೂ ಸಚಿವರ ಸಮಿತಿಗೆ ಮನವಿ ಮಾಡಿದೆ.

ಮುಖ್ಯಾಂಶಗಳು

- ಸಚಿವರ ಸಮಿತಿಗೆ 'ದಿ ಟರ್ಫ್ ಅಥಾರಿಟೀಸ್ ಆಫ್ ಇಂಡಿಯಾ' ಮನವಿ
- ಶತಮಾನದಿಂದ ಅನುಸರಿಸುತ್ತಿರುವ ಪದ್ಧತಿ ಮುಂದುವರಿಸಲು ಕೋರಿಕೆ

'ಕುದುರೆ ರೇಸ್‌ಗೆ ತೆರಿಗೆ ವಿಧಿಸುವ ಪ್ರಸ್ತಾವವನ್ನು ಮರುಪರಿಶೀಲಿಸುವಂತೆ ಸಚಿವರ ಸಮಿತಿಗೆ ಜಿಎಸ್‌ಟಿ ಮಂಡಳಿ ಶಿಫಾರಸು ಮಾಡಿದೆ. ಈ ನಿರ್ಧಾರವನ್ನು ಸ್ವಾಗತಿಸುತ್ತೇವೆ' ಎಂದು ಒಕ್ಕೂಟದ ಜಿಎಸ್‌ಟಿ ಸುಧಾರಣಾ ಘಟಕದ ಮುಖ್ಯಸ್ಥ ಜವೇರಿ ಎಸ್.ಪೂನಾವಾಲಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಕುದುರೆ ರೇಸ್‌ಗಳಿಗೆ ಜಿಎಸ್‌ಟಿ ಅಡಿಯಲ್ಲಿ ಶೇಕಡ 28ರಷ್ಟು ತೆರಿಗೆ ವಿಧಿಸಬೇಕೆಂಬ ಪ್ರಸ್ತಾವವನ್ನು ಜಿಎಸ್‌ಟಿ ಮಂಡಳಿ ಸದ್ಯಕ್ಕೆ ಮರುಪರಿಶೀಲನೆಗೆ ಒಳಪಡಿಸಲು ಮುಂದಾಗಿರುವುದು ಸಂತಸ ತಂದಿದೆ. ಕುದುರೆ ರೇಸ್ ಇತರ ಆನ್‌ಲೈನ್ ಆಟಗಳು ಮತ್ತು ಕ್ಯಾಸಿನೊಗಿಂತ ಭಿನ್ನ ಎಂಬ ನಮ್ಮ ವಾದವನ್ನು ಸಚಿವರ ಸಮಿತಿ ಪರಿಗಣಿಸುವ ವಿಶ್ವಾಸವಿದೆ' ಎಂದಿದ್ದಾರೆ.

'ದೇಶದಲ್ಲಿರುವ ಯಾವುದೇ ಟರ್ಫ್ ಕ್ಲಬ್ ಕೂಡಾ ಲಾಭದ ಉದ್ದೇಶ ಹೊಂದಿಲ್ಲ. ಭಾರತದಲ್ಲಿ ಪರವಾನಗಿ ಹೊಂದಿರುವ ಕುದುರೆ ರೇಸ್ ಕ್ಲಬ್‌ಗಳು 200 ವರ್ಷಗಳಿಂದಲೂ ಅಸ್ತಿತ್ವದಲ್ಲಿವೆ' ಎಂದು ಹೇಳಿದ್ದಾರೆ.

'ರೇಸ್‌ಕೋರ್ಸ್‌ಗಳಲ್ಲಿ ಬೆಟ್ಟಿಂಗ್‌ನಿಂದ ಸಂಗ್ರಹವಾದ ಕಮಿಷನ್ ಮೇಲೆ ತೆರಿಗೆ ವಿಧಿಸುತ್ತಿದ್ದ ಪದ್ಧತಿ ಎರಡು ಶತಮಾನಗಳಿಂದ ಚಾಲ್ತಿಯಲ್ಲಿದೆ. ಬೆಟ್ಟಿಂಗ್ ಮೌಲ್ಯದ ಮೇಲೆ ತೆರಿಗೆ ವಿಧಿಸುತ್ತಿರಲಿಲ್ಲ. ಆದರೆ ಜಿಎಸ್‌ಟಿಯಡಿ ಈಗ ಮಾಡಿರುವ ಪ್ರಸ್ತಾವ ಶತಮಾನಗಳಿಂದ ಪಾಲಿಸಿಕೊಂಡು ಬರುತ್ತಿದ್ದ ವ್ಯವಸ್ಥೆಗೆ ವಿರುದ್ಧವಾದುದು' ಎಂದು ತಿಳಿಸಿದ್ದಾರೆ.

'ಬೆಟ್ಟಿಂಗ್‌ನ ಮೌಲ್ಯ ಮತ್ತು ಬಹುಮಾನ ಮೊತ್ತದ ಮೇಲೆ ತೆರಿಗೆ ವಿಧಿಸುವ ವ್ಯವಸ್ಥೆ ಜಗತ್ತಿನ ಎಲ್ಲೂ ಇಲ್ಲ. ಇದೇ ವ್ಯವಸ್ಥೆ ಭಾರತದ ಕುದುರೆ ರೇಸಿಂಗ್ ವಲಯಕ್ಕೂ ಅನ್ವಯವಾಗಬೇಕು' ಎಂದು ಆಗ್ರಹಿಸಿದ್ದಾರೆ.

ನೋವು ಮರೆಸಿದ ಜಯ

ಲಂಡನ್ (ಎಎಫ್‌ಪಿ): ಅಮೂಲ್ಯ ಮೂರು ವರ್ಷಗಳನ್ನು ಗಾಯ ಮತ್ತು ನೋವಿನಲ್ಲಿಯೇ ಕಳೆದ ನೆದರ್ಲೆಂಡ್ಸ್ ಹುಡುಗ ಟಿಮ್ ವ್ಯಾನ್ ರಿಜ್‌ಥೊವನ್ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಪ್ರೀ-ಕ್ವಾರ್ಟರ್‌ಫೈನಲ್ ತಲುಪಿದ ಸಂತಸ ಅನುಭವಿಸಿದ್ದಾರೆ.

25 ವರ್ಷದ ಟಿಮ್, ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಮುಖ್ಯ ಸುತ್ತಿನಲ್ಲಿ ಆಡುತ್ತಿದ್ದಾರೆ. ಪುರುಷರ ಸಿಂಗಲ್ಸ್ ಮೂರನೇ ಸುತ್ತಿನಲ್ಲಿ ಅವರು 6-4, 6-3, 6-4ರಿಂದ ಜಾರ್ಜಿಯಾದ ನಿಕೊಲಾಜ್ ಬಾಸಿಲ್‌ಶ್ವಿಲಿ ಎದುರು ಗೆದ್ದರು. ಇದಕ್ಕೂ ಮೊದಲು ಅಮೆರಿಕದ 15ನೇ ಶ್ರೇಯಾಂಕದ ಆಟಗಾರ ರೆಲಿ ಒಪೆಲ್ಕಾಗೆ ಸೋಲುಣಿಸಿದ್ದರು.

18 ವರ್ಷದವರಿದ್ದಾಗ ತೊಡೆ, ಮಣಿಕಟ್ಟು ಮತ್ತು ಬೆನ್ನುನೋವುಗಳು ಟಿಮ್ ಅವರನ್ನು ಕಾಡಿದ್ದವು.

ವಿಂಬಲ್ಡನ್: ನಡಾಲ್, ಜೊಕೊವಿಚ್‌ಗೆ ಗೆಲುವು: ಇಸ್ನರ್ ದಾಖಲೆ

ಸ್ವಿಟೆಕ್ ಜಯದ ಓಟ ಅಬಾಧಿತ

ಲಂಡನ್ (ಎಎಫ್‌ಪಿ): ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಪೋಲೆಂಡ್ ಆಟಗಾರ್ತಿ ಇಗಾ ಸ್ವಿಟೆಕ್ ಸತತ 37ನೇ ಪಂದ್ಯದಲ್ಲಿ ಜಯಭೇರಿ ಮೊಳಗಿಸಿದರು. ಸ್ಪೇನ್ ದಿಗ್ಗಜ ರಫೆಲ್ ನಡಾಲ್ ಮತ್ತೊಂದು ಪ್ರಯಾಸದ ಗೆಲುವು ದಾಖಲಿಸಿದರು.

ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಸ್ವಿಟೆಕ್ ಮತ್ತು ನಡಾಲ್ ಕ್ರಮವಾಗಿ ಮಹಿಳೆ ಮತ್ತು ಪುರುಷರ ಸಿಂಗಲ್ಸ್ ವಿಭಾಗಗಳಲ್ಲಿ ಮೂರನೇ ಸುತ್ತು ತಲುಪಿದರು.

ಎರಡನೇ ಸುತ್ತಿನ ಹಣಾಹಣಿಯಲ್ಲಿ ನೆದರ್ಲೆಂಡ್ಸ್‌ನ ಲೇಸ್ಲಿ ಪಟ್ಟಿನಾಮಾ ಕರ್ಕೋವ್ ಎದುರು ಸ್ವಿಟೆಕ್ 6-4, 4-6, 6-3ರಿಂದ ಜಯ ಒಲಿಸಿಕೊಂಡರು.

ಈ ಜಯದೊಂದಿಗೆ ಸತತ 37 ಪಂದ್ಯ ಗೆದ್ದು ಮಾರ್ಟಿನಾ ಹಿಂಗಿಸ್ (1997ರಲ್ಲಿ) ದಾಖಲೆ ಸರಿಗಟ್ಟಿದರು.


ಇಗಾ ಸ್ವಿಟೆಕ್ ಚೆಂಡು ಹಿಂದಿರುಗಿಸಿದ ಪರಿ– ಎಎಫ್‌ಪಿ ಚಿತ್ರ

ನಡಾಲ್, ಜೊಕೊವಿಚ್ ಮುನ್ನಡೆ: ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಸ್ಪೇನ್‌ನ ರಫೆಲ್ ನಡಾಲ್ 6-4, 6-4, 4-6, 6-3ರಿಂದ ಲಿಥುವೇನಿಯಾದ ರಿಕಾರ್ಡಸ್ ಬೆರೆಂಕಿಸ್ ಎದುರು ಗೆದ್ದರು.

ಸರ್ಬಿಯದ ನೊವಾಕ್ ಜೊಕೊವಿಚ್ ಮೂರನೇ ಸುತ್ತಿನ ಪಂದ್ಯದಲ್ಲಿ 6-0, 6-3, 6-4 ರಲ್ಲಿ ತಮ್ಮದೇ ದೇಶದ ಮಿಯೊಮಿರ್ ಕೆಮನೊವಿಚ್ ಅವರನ್ನು ಮಣಿಸಿದರು,

ಇಸ್ನರ್ ದಾಖಲೆ: ಅಮೆರಿಕದ ಜಾನ್ ಇಸ್ನರ್ ಅವರು ಅತಿಹೆಚ್ಚು ಏಸ್‌ಗಳನ್ನು ದಾಖಲಿಸಿದ ಆಟಗಾರ ಎಂಬ ದಾಖಲೆ ತಮ್ಮದಾಗಿಸಿಕೊಂಡರು. ಇವೊ ಕಾರ್ಲೊವಿಚ್ (13,728 ಏಸ್) ಹೆಸರಿನಲ್ಲಿದ್ದ ದಾಖಲೆ ಮುರಿದರು. ಎಟಿಪಿಯು 1991 ರಿಂದ ಏಸ್‌ಗಳ ಅಂಕಿ–ಅಂಶ ಇಟ್ಟುಕೊಂಡಿದೆ.

ಆದರೂ ಮೂರನೇ ಸುತ್ತಿನ ಪಂದ್ಯದಲ್ಲಿ ಇಸ್ನರ್ 4-6, 6-7, 3-6 ರಲ್ಲಿ ಇಟಲಿಯ ಜನಿಕ್ ಸಿನೆರ್ ಎದುರು ಸೋತರು.

ಸಾನಿಯಾ ಜೋಡಿಗೆ ಜಯ: ಸಾನಿಯಾ ಮಿರ್ಜಾ ಮತ್ತು ಕ್ರೊವೇಷ್ಯಾದ ಮಾಟೆ ಪಾವಿಚ್ ಮಿಶ್ರ ಡಬಲ್ಸ್‌ನಲ್ಲಿ 6-4, 3-6, 7-6 ರಲ್ಲಿ ಡೇವಿಡ್ ಹೆರ್ನಾಂಡೆಸ್–ಮಟೇಲಾ ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿತು.

ಕಿರ್ಗಿಯೊಸ್‌ಗೆ ದಂಡ: ಕ್ರೀಡಾಸ್ಫೂರ್ತಿಗೆ ವಿರುದ್ಧ ನಡವಳಿಕೆ ತೋರಿದ ಆಸ್ಟ್ರೇಲಿಯಾದ ನಿಕ್ ಕಿರ್ಗಿಯೋಸ್‌ಗೆ ₹ 7.90 ಲಕ್ಷ ದಂಡ ವಿಧಿಸಲಾಗಿದೆ. ಟೂರ್ನಿಯ ಇತಿಹಾಸದಲ್ಲಿ ಅತಿ ಹೆಚ್ಚಿನ ದಂಡದ ಪ್ರಮಾಣವಾಗಿದೆ. ಮೊದಲ ಸುತ್ತಿನ ಪಂದ್ಯದ ವೇಳೆ ತನ್ನನ್ನು ಕೆಣಕಿದ ಪ್ರೇಕ್ಷಕನತ್ತ ಕಿರ್ಗಿಯೊಸ್ ಉಗುಳಿದ್ದರು.

ಬ್ಯಾಡ್ಮಿಂಟನ್: ಸಿಂಧು, ಪ್ರಣಯ್ ಸವಾಲು ಅಂತ್ಯ

ಕ್ವಾಲಾಲಂಪುರ (ಪಿಟಿಐ): ಪಿ.ವಿ. ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರು ಮಲೇಷ್ಯಾ ಓಪನ್ ಸೂಪರ್–750 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಸೋತು ಹೊರಬಿದ್ದರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೊನೆಗೊಂಡಿದೆ.

ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಸಿಂಧು 13-21, 21-15, 21-13 ರಲ್ಲಿ ಚೀನಾ ತೈಪೆಯ ತಾಯ್ ಜು ಯಿಂಗ್ ಕೈಯಲ್ಲಿ ಪರಾಭವಗೊಂಡರು. ಏಳನೇ ಶ್ರೇಯಾಂಕ ಹೊಂದಿದ್ದ ಭಾರತದ ಆಟಗಾರ್ತಿ, ಎರಡನೇ ಶ್ರೇಯಾಂಕದ ಆಟಗಾರ್ತಿಯ ವಿರುದ್ಧ ಮೊದಲ ಗೇಮ್ ಗೆದ್ದು ಉತ್ತಮ ಆರಂಭ ಪಡೆದಿದ್ದರು.

ಆದರೆ ಮುಂದಿನ ಎರಡೂ ಗೇಮ್‌ಗಳಲ್ಲಿ ಅದೇ ಲಯ ಕಾಪಾಡಿಕೊಳ್ಳುವಲ್ಲಿ ವಿಫಲರಾಗಿ, 53 ನಿಮಿಷಗಳಲ್ಲಿ ಸೋಲು ಅನುಭವಿಸಿದರು. ಸಿಂಧು ಅವರಿಗೆ ಚೀನಾ ತೈಪೆಯ ಆಟಗಾರ್ತಿಯ ಕೈಯಲ್ಲಿಎದುರಾದ ಸತತ ಆರನೇ ಸೋಲು ಇದು. ಇವರಿಬ್ಬರು ಪರಸ್ಪರ 21 ಸಲ ಪೈಪೋಟಿ ನಡೆಸಿದ್ದು, ತಾಯ್ ಜು 16–5 ರಲ್ಲಿ ಮೇಲುಗೈ ಹೊಂದಿದ್ದಾರೆ.


ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಭರವಸೆ ಎನಿಸಿದ್ದ ಪ್ರಣಯ್ 18–21, 16–21 ರಲ್ಲಿ ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ಎದುರು ಸೋತರು. ಕಳೆದ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಚೌ ತಿಯೆನ್ ಚೆನ್ ಅವರನ್ನು ಮಣಿಸಿದ್ದ ಪ್ರಣಯ್, ಶಿಸ್ತಿನ ಆಟವಾಡುವಲ್ಲಿ ವಿಫಲರಾದರು.

ಏಳನೇ ಶ್ರೇಯಾಂಕ ಹೊಂದಿರುವ ಕ್ರಿಸ್ಟಿ ಎರಡೂ ಗೇಮ್‌ಗಳಲ್ಲಿ ಪೂರ್ಣ ಪ್ರಭುತ್ವ ಸಾಧಿಸಿದರು. ಸ್ಮ್ಯಾಷ್‌ಗಳು ಮತ್ತು ಡ್ರಾಪ್ ಶಾಟ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿ, 44 ನಿಮಿಷಗಳಲ್ಲಿ ಗೆಲುವು ಪಡೆದರು.

ಶನಿವಾರ, 2 ಜುಲೈ 2022
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



ರಿಲೀಸ್‌ಗೆ ಮುನ್ನವೇ 'ಶುಗರ್‌ಲೆಸ್'ಗೆ ಸಕ್ಕರೆ! 2





ಕೈತೋಟ ನಿರ್ವಹಣೆಗೆ ಸರಳ ಸೂತ್ರಗಳು



ಆತ್ರೇಯ

ಮುಂಗಾರು ಮಳೆ ಶುರುವಾಗಿದೆ. ಮೋಡಕವಿದ ವಾತಾವರಣ. ಹಗುರದಿಂದ ಸಾಧಾರಣ ಮಳೆಯಾಗುತ್ತಿದೆ. ಈಗಾಗಲೇ ಸುರಿದಿರುವ ಸೋನೆ ಮಳೆಗೆ ಉದ್ಯಾನ ನಗರಿಯ ಕೈತೋಟ ಪ್ರಿಯರು ಮುದಗೊಂಡಿದ್ದಾರೆ. ಕೈತೋಟದಲ್ಲಿದ್ದ ಗಿಡಗಳನ್ನು ಆರೈಕೆ ಮಾಡಲು ಸಜ್ಜಾಗಿದ್ದಾರೆ. ಹೊಸ ಗಿಡಗಳ ನಾಟಿಗಾಗಿ ಗುಂಡಿತೆಗೆದು, ಗೋಡು, ಗೊಬ್ಬರ ಹೊಂದಿಸುತ್ತಾ, ನರ್ಸರಿಯಿಂದ ಯಾವ ಹೂವು, ಹಣ್ಣಿನ ಗಿಡಗಳನ್ನು ತರಬೇಕೆಂದು ಪಟ್ಟಿ ಮಾಡುತ್ತಿದ್ದಾರೆ. ಹಾಗಾದರೆ, ಈ ಮಳೆಗಾಲದಲ್ಲಿ ಕೈತೋ ಟದಲ್ಲಿ ಏನೇನು ಕೆಲಸ ಮಾಡಬೇಕು. ಗಿಡಗಳ ನಿರ್ವಹಣೆ ಹೇಗೆ? ಏನೇನು ಕ್ರಮ ಕೈಗೊಳ್ಳಬಹುದು. ಇಲ್ಲಿದೆ ಸಂಕ್ಷಿಪ್ತ ಮಾಹಿತಿ.

- ನಿರಂತರವಾಗಿ ಮಳೆಯಾಗುವ ಅವಧಿಯಲ್ಲಿ ಕುಂಡಗಳಲ್ಲಿ (ಗಿಡಗಳ ಪಾತಿಯಲ್ಲಿ) ನೀರು ನಿಲ್ಲದಂತೆ ಎಚ್ಚರವಹಿಸಿ. ಹೆಚ್ಚು ನೀರು ನಿಂತರೆ ಗಿಡ ಕೊಳೆಯುತ್ತದೆ.
- ಮಳೆ ನಿಂತರೂ, ತೇವ ಹೆಚ್ಚಾದಾಗ ಗಿಡಗಳಿಗೆ ಕೀಟಬಾಧೆ, ರೋಗ ಬಾಧೆ ಕಾಣಿಸಿಕೊಳ್ಳುತ್ತವೆ. ಹಾಗಾಗಿ, ಪ್ರತಿ ದಿನ ಗಿಡಗಳನ್ನು ಗಮನಿಸುತ್ತಿರಬೇಕು. ಕೀಟಬಾಧೆ ಕಂಡು ಬಂದರೆ ತಜ್ಞರ ಸಲಹೆ ಪಡೆದು ಔಷಧಗಳನ್ನು ಸಿಂಪಡಿಸಬಹುದು. ಬೇವಿನ ಬೀಜದ ಕಷಾಯ ಅಥವಾ ಚಂಡು ಹೂವಿನ ಕಷಾಯ ಸಿಂಪಡಣೆ ಮಾಡಬಹುದು.
- ಮಳೆಗಾಲದಲ್ಲಿ ಗಿಡಗಳಿಗೆ ಶಿಲೀಂಧ್ರ ರೋಗಗಳೂ ಹೆಚ್ಚು ಬಾಧಿಸುತ್ತವೆ. ಇದಕ್ಕೆ ಪರಿಹಾರವಾಗಿ, 100 ಗ್ರಾಂ ಸುವರ್ಣಗೆಡ್ಡೆಯನ್ನು 1 ಲೀಟರ್ ನೀರಿನಲ್ಲಿ ಹಾಕಿ, 20 ನಿಮಿಷ ಕುದಿಸಿ. ನಂತರ ಅದನ್ನು ಆರಿಸಿ. ಈ ನೀರನ್ನು ಹದಿನೈದು ದಿನಗಳ ಅಂತರದಲ್ಲಿ ಎರಡು ಬಾರಿ ಗಿಡಗಳಿಗೆ ಸಿಂಪಡಿಸಿದರೆ, ಶಿಲೀಂಧ್ರ ರೋಗ ನಿಯಂತ್ರಣಕ್ಕೆ ಬರುತ್ತದೆ.
- ಕೈತೋಟದಲ್ಲಿ ಗುಲಾಬಿ, ದಾಸವಾಳದಂತಹ ಹೂವಿನ ಗಿಡಗಳಿದ್ದರೆ, ಅವುಗಳಲ್ಲಿರುವ ಒಣಗಿದ ಕಡ್ಡಿಗಳನ್ನು ಸವರಲು ಇದು ಸಕಾಲ. ಜೊತೆಗೆ, ಗಿಡಗಳ ಪಾತಿಯಲ್ಲಿರುವ ಕಳೆಗಳನ್ನು ತೆಗೆಯಿರಿ. ಬೇರಿಗೆ ನೋವಾಗದಂತೆ ಸುತ್ತಲಿನ ಮಣ್ಣನ್ನು ಸಡಿಲಗೊಳಿಸಿ. ಎರಡು ಬೊಗಸೆಯಷ್ಟು ಕಾಂಪೋಸ್ಟ್ ಹಾಕಿ.
- ಹೊಸದಾಗಿ ಕುಂಡಗಳಲ್ಲಿ ಗಿಡ ಬೆಳೆಸುವವರು, ಗಿಡಗಳ ವೆರೈಟಿಗೆ ಅಗತ್ಯವಾದ ಸೈಜಿನ ಕುಂಡ ಆಯ್ಕೆ ಮಾಡಿಕೊಳ್ಳಿ. 1:1:2 ಪ್ರಮಾಣದಲ್ಲಿ ಮಣ್ಣು, ಮರಳು, ಗೊಬ್ಬರವನ್ನು ಮಿಶ್ರಮಾಡಿ ತುಂಬಿ. ಒಂದು ಹದ ಮಳೆ ಬಿದ್ದ ಮೇಲೆ ಗಿಡಗಳನ್ನು ಈ ಕುಂಡದಲ್ಲಿ ನಾಟಿ ಮಾಡಿ. ಬೇಕಾದರೆ ಬೀಜಗಳನ್ನೂ ಬಿತ್ತನೆ ಮಾಡಬಹುದು.
- ಹೊಸದಾಗಿ ಗಿಡ ಹಾಕುವವರು ಮಣ್ಣಿಗೆ ಕಾಂಪೋಸ್ಟ್ ಸೇರಿಸಿ ಬೇರು ಬಂದಿರುವ ಗಿಡಗಳನ್ನು ನಾಟಿ ಮಾಡಬೇಕು. ಗಿಡ ನೆಟ್ಟ ನಂತರ ಬುಡಕ್ಕೆ ಸ್ವಲ್ಪ ಮಣ್ಣು ಏರಿಸಿ. ಪಕ್ಕದಲ್ಲಿ ಒಂದು ಕಡ್ಡಿನೆಟ್ಟು, ಅದಕ್ಕೆ ಗಿಡವನ್ನು ಸೇರಿಸಿ ದಾರ ಕಟ್ಟಿ. ಗಿಡ ಬೇರೂರುವವರೆಗೂ ಗಾಳಿಗೆ ಅಲ್ಲಾಡದಂತೆ ಇದು ಆಧಾರವಾಗಿರುತ್ತದೆ.
- ಬಳ್ಳಿ ತರಕಾರಿ ಬೆಳೆಯುವ ಬಯಸುವವರು ಪಾಲಿಥೀನ್ ಕವರ್‌ಗಳಲ್ಲಿ ಮೇಲೆ ತಿಳಿಸಿದ ಪ್ರಮಾಣದಲ್ಲಿನ ಮಿಶ್ರಣವನ್ನು ತುಂಬಿ. ಪ್ರತಿ ಕವರ್‌ನಲ್ಲೂ ಎರಡು ಬೀಜ ನೆಡಿ. ಡಬಲ್ ಬೀನ್ಸ್, ವಿಂಗ್ಡ್ ಬೀನ್ಸ್, ರೆಕ್ಕೆ ಅವರೆ, ಚಪ್ಪರದ ಅವರೆ, ಹಾಗಲ ಕಾಯಿ, ಹಿರೇಕಾಯಿ.. ಇಂಥ ಹಬ್ಬು ಬಳ್ಳಿಗಳ ಬೀಜ ನಾಟಿ ಮಾಡಬಹುದು. ನೆಟ್ಟ ಬೀಜಗಳು ಬಳ್ಳಿಯಾಗಿ ಬೆಳೆದ ಮೇಲೆ ಅದನ್ನು ನಿಗದಿತ ಸ್ಥಳಕ್ಕೆ ಸ್ಥಳಾಂತರಿಸಿ, ಬಳ್ಳಿ ಹಬ್ಬಲು ಬೇಕಾದ ಆಧಾರ / ಚಪ್ಪರ ಮಾಡಬಹುದು. ಬೆಂಡೆ, ಮೂಲಂಗಿ ಹುರುಳಿ ಕಾಯಿ ಬೀಜಗಳನ್ನು ನೇರವಾಗಿ ಬಿತ್ತನೆ ಮಾಡಿ.
- ಸೇವಂತಿಗೆ ಗಿಡಗಳನ್ನು ಈಗ ನಾಟಿ ಮಾಡಿದರೆ, ಶ್ರಾವಣ ಮಾಸದಲ್ಲಿ ಬರುವ ಹಬ್ಬಗಳ ಸಾಲಿಗೆ ಸರಿಯಾಗಿ ಹೂವು ಬಿಡುತ್ತವೆ. ಹೊಸದಾಗಿ ಹೂವಿನ ಗಿಡ ನಾಟಿ ಮಾಡುವವರು, ಚಂಡು ಹೂವು, ಸೇವಂತಿಗೆಯಂತಹ ಹೂವಿನ ಗಿಡಗಳನ್ನು ನಾಟಿ ಮಾಡಬಹುದು. ❖

ಚೆಂಡು ಹೂವು ಕಷಾಯ

50 ಗ್ರಾಂನಷ್ಟು ಒಣಗಿದ ಅಥವಾ ಹಸಿ ಚೆಂಡು ಹೂವು ತೆಗೆದುಕೊಳ್ಳಿ. ಒಂದು ಲೀಟರ್ ನೀರನ್ನು ಕುದಿಸಿ. ಕುದಿಯುವ ನೀರಿಗೆ ಚೆಂಡುಹೂವು ಹಾಕಿ. ಹತ್ತು ನಿಮಿಷ ಕುದಿಸಿ. ಪಾತ್ರೆ ಮುಚ್ಚಿಡಿ. 24 ಗಂಟೆಗಳ ನಂತರ ಕಷಾಯ ರೆಡಿ. ಈ ಕಷಾಯವನ್ನು 1:10ರ ಅನುಪಾತದ(ಒಂದು ಭಾಗ ಕಷಾಯ, ಹತ್ತು ಭಾಗ ನೀರು) ನೀರು ಬೆರೆಸಿ ಸೂರ್ಯೋದಯಕ್ಕೆ ಮುನ್ನ ಅಥವಾ ಸೂರ್ಯಾಸ್ತದ ನಂತರ ಗಿಡಗಳಿಗೆ ಸಿಂಪಡಣೆ ಮಾಡಿ. ಈ ಕಷಾಯ ಗಿಡಗಳಿಗೆ ತಗಲುವ ರಸಹೀರುವ ಕೀಟ ಬಾಧೆಯನ್ನು ನಿಯಂತ್ರಿಸುತ್ತದೆ ಎನ್ನುತ್ತಾರೆ ಈ ಪ್ರಯೋಗ ಮಾಡಿ ನೋಡಿರುವ ತಾರಸಿ ತೋಟದ ಪರಿಣತೆ ಅನುಸೂಯಾಶರ್ಮಾ.


'ಚಾರ್ಲಿ' ಶ್ವಾನಕ್ಕೆ ತರಬೇತಿ ನೀಡುತ್ತಿರುವ ಪ್ರಮೋದ್ ಬಿ.ಸಿ.

> "'ಚಾರ್ಲಿ' ಸಿನಿಮಾ ನೋಡಿದವರಲ್ಲಿ ಹಲವರು ಬೀದಿ ನಾಯಿಗಳನ್ನು ತಂದು ಸಾಕಲು ಶುರು ಮಾಡಿದ್ದಾರೆ. ಕೆಲವರು ದತ್ತು ಸ್ವೀಕರಿಸಿದ್ದಾರೆ. ಶ್ವಾನಗಳೆಡೆಗೆ ಪ್ರೀತಿ ಮೂಡಿರುವುದು ಒಳ್ಳೆಯ ಬೆಳವಣಿಗೆ"
> **ಪ್ರಮೋದ್**, ಟ್ರೇನರ್, ಮೈಸೂರು

ಮೈಸೂರಿನ 'ಚಾರ್ಲಿ', ತರಬೇತಿಯೂ ಇಲ್ಲೇ!

ಎಂ.ಮಹೇಶ

ರಾಜ್ಯದೆಲ್ಲೆಡೆ ಮನೆ ಮಾತಾಗಿರುವ 'ಚಾರ್ಲಿ-777' ಸಿನಿಮಾದಲ್ಲಿ ನಟಿಸಿರುವ ನಾಯಿ ಮೈಸೂರಿನದ್ದು. ಅದನ್ನು ಸಾಕಿದವರು, ತರಬೇತಿ ನೀಡಿದವರೂ ಮೈಸೂರಿನವರೇ. ಈ ಚಿತ್ರಗಳ ಹಲವು ದೃಶ್ಯಗಳ ಚಿತ್ರೀಕರಣವೂ ಮೈಸೂರಿನಲ್ಲೇ ನಡೆದಿದೆ.

'ಚಾರ್ಲಿ'ಯ ತರಬೇತುದಾರ ಪ್ರಮೋದ್ ಬಿ.ಸಿ. ಸಿನಿಮಾದ ಮೊದಲಾರ್ಧದಲ್ಲಿ ಬರುವ ಚಿಕ್ಕ ಹಾಗೂ ನಂತರ ಕಾಣಿಸಿಕೊಳ್ಳುವ ದೊಡ್ಡ 'ಚಾರ್ಲಿ' ಶ್ವಾನಗಳು ಅವರ ಕೇಂದ್ರದಲ್ಲೇ ಪಳಗಿದವು.

ಪ್ರಮೋದ್, ತಾಲ್ಲೂಕಿನ ಡಿ.ಸಾಲುಂಡಿ ಬಳಿ 'ಡಿಕೆ9 ವರ್ಕಿಂಗ್ ಡಾಗ್ ಟ್ರೇನಿಂಗ್ ಸ್ಕೂಲ್' ನಡೆಸುತ್ತಿದ್ದಾರೆ. ಅಲ್ಲಿ ಅವರ 22 ಶ್ವಾನಗಳಿವೆ. 8 ವರ್ಷಗಳಿಂದ ಶಾಲೆ ನಡೆಸುತ್ತಿದ್ದು, ಇತರರ ನಾಯಿಗಳಿಗೂ ಒಂದು ತಿಂಗಳ ತರಬೇತಿ ನೀಡುತ್ತಾರೆ. ಮನೆಯಲ್ಲಿ ಹೇಗಿರಬೇಕು; ಹೇಗೆ ನಡೆದುಕೊಳ್ಳಬೇಕು ಎಂಬಿತ್ಯಾದಿ ಶಿಸ್ತನ್ನು ಕಲಿಸುತ್ತಾರೆ. ಇದೀಗ, ಅವರು 'ಚಾರ್ಲಿ' ಸಿನಿಮಾದಿಂದಾಗಿ ಸುದ್ದಿಯಲ್ಲಿದ್ದಾರೆ. ಹೊಸ ಸಿನಿಮಾಗಳ ಆಫರ್‌ಗಳನ್ನೂ ಪಡೆಯುತ್ತಿದ್ದಾರೆ.

ಸಹಜ ಅಭಿನಯ: ಲ್ಯಾಬ್ರಡಾರ್ ತಳಿಯ ದೊಡ್ಡ 'ಚಾರ್ಲಿ'ಗೆ ಈಗ ನಾಲ್ಕೂವರೆ ವರ್ಷ. ಚಿಕ್ಕ 'ಚಾರ್ಲಿ'ಗೆ 4 ವರ್ಷ. ತರಬೇತಿ ಪಡೆದಿರುವ ಶ್ವಾನಗಳಿವು ಎಂಬುದು ಪ್ರೇಕ್ಷಕರಿಗೆ ತಿಳಿಯದಂತೆ ಸಹಜವಾಗಿ ಪಾತ್ರ ನಿರ್ವಹಿಸಿವೆ. ನಾಯಕ 'ಧರ್ಮ' (ರಕ್ಷಿತ್ ಶೆಟ್ಟಿ) ಹೇಳಿದಂತೆ ಕೇಳಿವೆ. ಅದಕ್ಕಾಗಿ ಕ್ಯಾಮೆರಾ ಹಿಂದೆ ಕೆಲಸ ಮಾಡಿರುವವರು ಪ್ರಮೋದ್.

'ಚಾರ್ಲಿ' ಸಿನಿಮಾ ನಿರ್ದೇಶಕ ಕಿರಣ್ ರಾಜ್ ದೇಶದ ವಿವಿಧೆಡೆಯ 20ಕ್ಕೂ ಹೆಚ್ಚು ತರಬೇತುದಾರರನ್ನು ಸಂಪರ್ಕಿಸಿ, 'ಅಭಿನಯಿಸುವ' ಶ್ವಾನಕ್ಕಾಗಿ ಆಡಿಷನ್ ನಡೆಸಿದ್ದರಂತೆ. ಈ ಹಿಂದೆ, ನಟ ಅನಂತ್‌ನಾಗ್ ಜೊತೆ 'ಕವಲುದಾರಿ' ಸಿನಿಮಾದಲ್ಲಿ ಪಾತ್ರದಾರಿಯಾಗಿ ಕಾಣಿಸಿಕೊಂಡಿದ್ದ ಶ್ವಾನವನ್ನು ಪ್ರಮೋದ್ ಅವರೇ ನೀಡಿದ್ದರು. ಆ ಸಿನಿಮಾದ ನಿರ್ದೇಶಕ ನಿರ್ದೇಶಕ ಹೇಮಂತ್ ಎಂ.ರಾವ್ ಅವರು ಕಿರಣ್ ರಾಜ್‌ಗೆ, ಪ್ರಮೋದ್ ಸಂಪರ್ಕಿಸಲು ಸಲಹೆ ನೀಡಿದ್ದರಂತೆ.

ಅದನ್ನು ಆಧರಿಸಿ, ಪ್ರಮೋದ್ ಜೊತೆ ಮಾತುಕತೆ ನಡೆಸಿದ್ದ ಕಿರಣ್‌ರಾಜ್ 'ಚಾರ್ಲಿ' ಪಾತ್ರಕ್ಕೆ ಪ್ರಮೋದ್ ಬಳಿಯಿರುವ ಶ್ವಾನಗಳನ್ನು ಆಯ್ಕೆ ಮಾಡಿದ್ದಾರೆ. ಅವು ಬೆಳ್ಳಿತೆರೆಯ ಮೇಲೆ ಮಿಂಚಿವೆ; ಮಕ್ಕಳು, ಸಾಕು ಪ್ರಾಣಿ ಪ್ರಿಯರಷ್ಟೆ ಅಲ್ಲದೆ ಎಲ್ಲ ವಯೋಮಾದವರ ಮನಸ್ಸನ್ನೂ ಗೆದ್ದಿವೆ.

ಜರ್ಮನಿ ತಜ್ಞರಿಂದ ಪ್ರಮಾಣಪತ್ರ: ಎಂಜಿನಿಯರಿಂಗ್ ಪದವೀಧರರಾದ ಪ್ರಮೋದ್ ಶ್ವಾನಪ್ರಿಯರು. ಹಿಂದಿನಿಂದಲೂ ಶ್ವಾನಗಳನ್ನು ಸಾಕುತ್ತಿದ್ದಾರೆ. ಐಎಎಸ್ ಅಥವಾ ಐಪಿಎಸ್ ಅಧಿಕಾರಿ ಆಗುವ ಕನಸು ಕೈಗೆಟುಕದಿದ್ದರಿಂದ ಶ್ವಾನಗಳಿಗೆ ತರಬೇತಿ ಕೊಡುವುದನ್ನೇ ವೃತ್ತಿ ಮಾಡಿಕೊಂಡಿದ್ದಾರೆ. ಅದಕ್ಕಾಗಿ ಜರ್ಮನಿಯ ತಜ್ಞರಿಂದ ಪ್ರಮಾಣಪತ್ರ ಪಡೆದಿದ್ದಾರೆ. ಶ್ವಾನ ವಿಜ್ಞಾನ ಹಾಗೂ ಅವುಗಳ ಮನೋವಿಜ್ಞಾನದ ಬಗ್ಗೆ ಪರಿಣತಿ ಗಳಿಸಿದ್ದಾರೆ. ❖

ಶೂಟಿಂಗ್‌ನಲ್ಲಿ ಚಾರ್ಲಿ..

'ಚಿತ್ರ ತಂಡದ ಪೂರ್ವ ಮಾಹಿತಿಯಂತೆ 'ಚಾರ್ಲಿ'ಗೆ ತರಬೇತಿ ಕೊಟ್ಟು ಸಜ್ಜುಗೊಳಿಸುತ್ತಿದ್ದೆ. ಹೊರಾಂಗಣ, ಒಳಾಂಗಣ, ಜನಸಂದಣಿಯಲ್ಲೂ ನಟಿಸುವುದನ್ನು ಕಲಿಸುತ್ತಿದ್ದೆ. ಬೇರೆಡೆ ಚಿತ್ರೀಕರಣವಿದ್ದಾಗ, 10 ದಿನ ಮುನ್ನವೇ ಹೋಗಿ ಪರಿಚಯಿಸುತ್ತಿದ್ದೆ. ಕ್ಲೈಮ್ಯಾಕ್ಸ್ ದೃಶ್ಯವನ್ನು ಕಾಶ್ಮೀರದಿಂದ 70 ಕಿ.ಮೀ. ದೂರದಲ್ಲಿರುವ 'ಫೆಲ್ಗಾಂ' ಎಂಬಲ್ಲಿ ಚಿತ್ರೀಕರಿಸಲಾಯಿತು. ಅಲ್ಲಿಗೆ ಮುಂಚಿತವಾಗಿಯೇ ತೆರಳಿ ಮಂಜುಗಡ್ಡೆಯಲ್ಲಿ ಓಡಾಡುವುದನ್ನು ಕಲಿಸಿದ್ದೆ' ಎಂದು ಪ್ರಮೋದ್ ತಿಳಿಸಿದರು.

ಸಿನಿ ಪಯಣದ ಬಗ್ಗೆ 'ಪ್ರಜಾಪ್ಲಸ್' ಜೊತೆ ಮಾತನಾಡಿದ ಅವರು, 'ಕ್ಯಾಮೆರಾ ಹಿಂದಿನಿಂದ ಹೇಳಿಕೊಟ್ಟಿದ್ದನ್ನು ಚೆನ್ನಾಗಿ ಅಭಿನಯಿಸಿ ಜನರ ಮನಸ್ಸನ್ನು 'ಚಾರ್ಲಿ' ಗೆದ್ದಿರುವುದರಿಂದ ಖುಷಿಯಾಗಿದೆ' ಎಂದರು.

'ಧನಂಜಯ ನಾಯಕ ನಟನಾಗಿರುವ 'ಹೊಯ್ಸಳ' ಸಿನಿಮಾಕ್ಕಾಗಿ ನನ್ನ 5 ಅಪರೂಪದ 'ಬೆಲ್ಜಿಯನ್ ಮ್ಯಾಲಿನಾಯಿಸ್' ಶ್ವಾನಗಳ ಜೊತೆ ಕೆಲಸ ಮಾಡುತ್ತಿದ್ದೇನೆ. ತೆಲುಗು, ಮಲೆಯಾಳಂ ನಿರ್ದೇಶಕರಿಂದಲೂ ಆಫರ್ ಬರುತ್ತಿವೆ. ಒಳ್ಳೆಯ ಸಂದೇಶ ನೀಡುವ ಸಿನಿಮಾ ಆಯ್ಕೆ ಮಾಡಿಕೊಳ್ಳುತ್ತೇನೆ' ಎಂದರು.

ನಳಪಾಕ

ಕರಿಬೇವಿನ ಪರೋಟ ಹುರುಳಿಕಾಳು ಚಟ್ನಿ



ಚಂದ್ರಕಲಾ ಮಂಜುನಾಥ್

ಪರೋಟ

ಬೇಕಾಗುವ ಸಾಮಗ್ರಿಗಳು: ಗೋಧಿ ಹಿಟ್ಟು - 2 ಕಪ್, ಕರಿಬೇವಿನ ಸೊಪ್ಪು - 4 ಎಸಳು, ಹಾಲು - ಅರ್ಧ ಕಪ್ (ಚಪಾತಿ ಮೆದು ಬರಲು), ಅಚ್ಚಖಾರದ ಪುಡಿ - 1 ಚಮಚ, ಜೀರಿಗೆ ಪುಡಿ - 1 ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ - 1 ಚಮಚ, ಎಣ್ಣೆ - ಸ್ವಲ್ಪ, ಉಪ್ಪು - ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ಕರಿಬೇವನ್ನು ತೊಳೆದು ಸಣ್ಣಗೆ ಹೆಚ್ಚಿಟ್ಟುಕೊಳ್ಳಿ. ಗೋಧಿ ಹಿಟ್ಟಿಗೆ ಉಪ್ಪು, ಅಚ್ಚಖಾರದ ಪುಡಿ, ಜೀರಿಗೆ ಪುಡಿ, ಸಣ್ಣಗೆ ಹೆಚ್ಚಿಟ್ಟುಕೊಂಡ ಕರಿಬೇವಿನ ಸೊಪ್ಪು, ಅರ್ಧ ಕಪ್ ಹಾಲು, ಅಗತ್ಯವಿರುವಷ್ಟು ನೀರು ಹಾಕಿ ಚಪಾತಿ ಹಿಟ್ಟಿನಂತೆ ಚೆನ್ನಾಗಿ ಕಲಸಿ. ಕಲೆಸುವಾಗ 4 ಚಮಚ ಅಡುಗೆ ಎಣ್ಣೆ ಹಾಕಿ ಚೆನ್ನಾಗಿ ನಾದಿಕೊಂಡು ಹದಿನೈದು ನಿಮಿಷ ನೆನೆಯಲು ಬಿಡಿ. ಈಗ ಹಿಟ್ಟನ್ನು ಉಂಡೆಗಳಾಗಿ ಮಾಡಿಕೊಂಡು ಪದರ ಚಪಾತಿ ಲಟ್ಟಿಸುವಂತೆ ಲಟ್ಟಿಸಿ.

ಉಂಡೆಯನ್ನು ಅಂಗೈಯಷ್ಟು ಅಗಲ ಲಟ್ಟಿಸಿಕೊಂಡು ಅದರ ಮೇಲೆ ಎಣ್ಣೆ ಸವರಿ ಅರ್ಧ ಚಂದ್ರಾಕೃತಿಗೆ ಮಡಚಿ. ಮತ್ತೆ ಎಣ್ಣೆ ಸವರಿ ತ್ರಿಕೋನಾಕೃತಿಗೆ ಮಡಚಿಟ್ಟು ಚಪಾತಿಯಂತೆ ಲಟ್ಟಿಸಿ ಹೆಂಚು/ತವಾದ ಮೇಲೆ ಹಾಕಿ ಎರಡೂ ಬದಿ ಎಣ್ಣೆ ಹಾಕಿ ಬೇಯಿಸಿದರೆ ಕರಿಬೇವಿನ ಪರೋಟ ರೆಡಿ.

ನೆನಪಿಡಿ: ಅಚ್ಚಖಾರದ ಪುಡಿ, ಜೀರಿಗೆ ಪುಡಿ, ಶುಂಠಿ - ಬೆಳ್ಳುಳ್ಳಿ ಪೇಸ್ಟ್ ಬಳಸದೆ ಬರಿಯ ಕರಿಬೇವಿನ ಸೊಪ್ಪಿನ ಚಪಾತಿಯನ್ನೂ ಮಾಡಬಹುದು.



ಚಟ್ನಿ

ಬೇಕಾಗುವ ಸಾಮಗ್ರಿಗಳು: ಹುರುಳಿಕಾಳು 4 ಚಮಚ, ತೆಂಗಿನತುರಿ ಒಂದು ಕಪ್, ಹಸಿಮೆಣಸಿನಕಾಯಿ ಖಾರಕ್ಕೆ ಅಗತ್ಯವಿರುವಷ್ಟು, ಬೆಳ್ಳುಳ್ಳಿ 5 ಎಸಳು (ತಿನ್ನದವರು ಬಿಡಬಹುದು), ಹುಣಸೆಹಣ್ಣು ಅರ್ಧ ಇಂಚಿನಷ್ಟು, ಕೊತ್ತಂಬರಿ ಸೊಪ್ಪು ಸ್ವಲ್ಪ, ಉಪ್ಪು ರುಚಿಗೆ.

ತಯಾರಿಸುವ ವಿಧಾನ: ಹುರುಳಿಕಾಳು ಸ್ವಲ್ಪ ಹುರಿದಿಟ್ಟುಕೊಳ್ಳಬೇಕು. ಆ್ಯಸಿಡಿಟಿ ಎನ್ನುವವರು ಹಸಿಮೆಣಸಿನಕಾಯಿಯನ್ನು ಸ್ವಲ್ಪ ಹುರಿದು ಬಳಸಿ.

ಹುರಿದ ಹುರುಳಿಕಾಳು, ತೆಂಗಿನತುರಿ, ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಬೆಳ್ಳುಳ್ಳಿ ಹುಣಸೆಹಣ್ಣು, ಉಪ್ಪು ಹಾಕಿ ಸ್ವಲ್ಪವೇ ನೀರಿನೊಂದಿಗೆ ರುಬ್ಬಿಕೊಳ್ಳಿ. ಸಾಸಿವೆ, ಕರಿಬೇವಿನ ಒಗ್ಗರಣೆ ಹಾಕಿಕೊಳ್ಳಬಹುದು.

ನೆನಪಿಡಿ: ಇದಕ್ಕೆ ಇನ್ನು ಸ್ವಲ್ಪ ಹುಣಸೆರಸ ಸೇರಿಸಿ, ಈರುಳ್ಳಿ ಒಗ್ಗರಣೆ ಮಾಡಿಕೊಂಡು ಬೆರೆಸಿ ಸ್ವಲ್ಪ ಕುದಿಸಿದರೆ ಮುದ್ದೆಗೆ, ಅನ್ನಕ್ಕೂ ಸರಿಹೊಂದುತ್ತದೆ.

ಮಗಳ ಮತ್ತೊಂದು ಚಿತ್ರಕ್ಕೆ ಆ್ಯಕ್ಷನ್ ಕಿಂಗ್ ಆ್ಯಕ್ಷನ್ ಕಟ್

ಬಹುಭಾಷಾ ನಟ ಆ್ಯಕ್ಷನ್ ಕಿಂಗ್ ಅರ್ಜುನ್ ಸರ್ಜಾ ಮತ್ತೆ ನಿರ್ದೇಶನಕ್ಕೆ ಇಳಿದಿದ್ದಾರೆ. ತಮ್ಮ ಅಭಿನಯದ ಮೂಲಕ ಅಭಿಮಾನಿಗಳನ್ನು, ಪ್ರೇಕ್ಷಕರನ್ನು ರಂಜಿಸುತ್ತಿದ್ದ ಸರ್ಜಾ, ಇದೀಗ ಮತ್ತೊಮ್ಮೆ ಮಗಳು ಐಶ್ವರ್ಯ ಅರ್ಜುನ್ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ.


'ಪ್ರೇಮ ಬರಹ' ಸಿನಿಮಾ ಮೂಲಕ ನಾಯಕಿಯಾಗಿ ಚಂದನವನಕ್ಕೆ ಐಶ್ವರ್ಯ ಹೆಜ್ಜೆ ಇಟ್ಟಿದ್ದರು. ಈ ಸಿನಿಮಾವನ್ನೂ ಅರ್ಜುನ್ ಸರ್ಜಾ ನಿರ್ದೇಶಿಸಿದ್ದರು. ಕಥೆ, ಚಿತ್ರಕಥೆ, ಸಂಭಾಷಣೆ ಹಾಗೂ ನಿರ್ದೇಶನದ ಜವಾಬ್ದಾರಿಯ ಜೊತೆಗೆ, ನಿರ್ಮಾಣದ ಜವಾಬ್ದಾರಿಯನ್ನೂ ಸರ್ಜಾ ಹೊತ್ತುಕೊಂಡಿದ್ದರು. ಇದಾದ ಬಳಿಕ ಬಳಿಕ ಐಶ್ವರ್ಯ ಯಾವುದೇ ಸಿನಿಮಾದಲ್ಲಿ ನಟಿಸಿರಲಿಲ್ಲ. ಈಗ ಮತ್ತೆ ಅರ್ಜುನ್ ಸರ್ಜಾ ಮಗಳ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುವುದರ ಜೊತೆಗೆ ನಿರ್ಮಾಣಕ್ಕೂ ಇಳಿದಿದ್ದಾರೆ.

ಇನ್ನೂ ಶೀರ್ಷಿಕೆಯಿಡದ ಈ ಚಿತ್ರ ತೆಲುಗಿನಲ್ಲಿ ನಿರ್ಮಾಣವಾಗುತ್ತಿದ್ದು, ಚಿತ್ರದ ಮುಹೂರ್ತ ಇತ್ತೀಚೆಗೆ ನಡೆಯಿತು. ತೆಲುಗಿನ ಖ್ಯಾತ ನಟ ಪವನ್ ಕಲ್ಯಾಣ್ ಚಿತ್ರಕ್ಕೆ ಕ್ಲ್ಯಾಪ್ ಮಾಡಿ ಶುಭಹಾರೈಸಿದರು.

ಅರ್ಜುನ್, ತಮ್ಮದೇ ಶ್ರೀ ರಾಮ್ ಫಿಲ್ಮ್ಸ್ ಇಂಟರ್‌ನ್ಯಾಷನಲ್ ಬ್ಯಾನರ್‌ನಡಿಯಲ್ಲಿ ನಿರ್ಮಿಸಲಿರುವ 15ನೇ ಸಿನಿಮಾದ ಮೂಲಕ ಐಶ್ವರ್ಯ ಅರ್ಜುನ್ ಅವರನ್ನು ತೆಲುಗಿನಲ್ಲಿ ನಾಯಕಿಯಾಗಿ ಪರಿಚಯಿಸುತ್ತಿದ್ದಾರೆ. ಐಶ್ವರ್ಯಗೆ ಜೋಡಿಯಾಗಿ ತೆಲುಗು ಚಿತ್ರರಂಗದ ಯುವ ನಟ ವಿಶ್ವಕ್ ಸೇನ್ ಅಭಿನಯಿಸುತ್ತಿದ್ದಾರೆ.

ವಿಶ್ವಕ್ ಸೇನ್ ನಟಿಸಿ ನಿರ್ದೇಶಿಸಿದ್ದ 'ಫಲಕ್ನುಮಾ ದಾಸ್' ಸಿನಿಮಾ ಭರ್ಜರಿ ಯಶಸ್ಸು ಕಂಡಿತ್ತು. ಸದ್ಯ 'ದಾಸ್ ಕಾ ಧಮ್ಕಿ' ಎಂಬ ಸಿನಿಮಾದ ಚಿತ್ರೀಕರಣದಲ್ಲಿ ವಿಶ್ವಕ್ ತೊಡಗಿಸಿಕೊಂಡಿದ್ದಾರೆ. ಈ ಸಿನಿಮಾ ಜೊತೆಯಲ್ಲೀಗ ಹೊಸ ಚಿತ್ರವನ್ನು ವಿಶ್ವಕ್ ಒಪ್ಪಿಕೊಂಡಿದ್ದಾರೆ. ಚಿತ್ರದಲ್ಲಿ ಖಳನಾಯಕನ ಪಾತ್ರದಲ್ಲಿ ಬಹುಭಾಷಾ ನಟ ಜಗಪತಿ ಬಾಬು ನಟಿಸಲಿದ್ದಾರೆ. 'ಇದೊಂದು ರೋಡ್ ಟ್ರಿಪ್ ಸಿನಿಮಾವಾಗಿದ್ದು, ಶೀಘ್ರದಲ್ಲಿಯೇ ಚಿತ್ರೀಕರಣ ಆರಂಭವಾಗಲಿದೆ. ಉಳಿದ ಪಾತ್ರ ವರ್ಗವನ್ನು ಶೀಘ್ರದಲ್ಲೇ ಪರಿಚಯಿಸಲಿದ್ದೇವೆ' ಎಂದಿದೆ ಚಿತ್ರತಂಡ.

ಸಿನಿ ಮಾತು



ಐಶ್ವರ್ಯ ಅರ್ಜುನ್

ರಿಲೀಸ್‌ಗೆ ಮುನ್ನವೇ 'ಶುಗರ್‌ಲೆಸ್'ಗೆ ಸಕ್ಕರೆ!



ಪ್ರಿಯಾಂಕ ತಿಮ್ಮೇಶ್

ಪೃಥ್ವಿ ಅಂಬಾರ್ ಹಾಗೂ ಪ್ರಿಯಾಂಕ ತಿಮ್ಮೇಶ್ ನಟನೆಯ, ಕೆ.ಎಂ.ಶಶಿಧರ್ ನಿರ್ದೇಶನದ 'ಶುಗರ್‌ಲೆಸ್' ಸಿನಿಮಾ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುವುದಕ್ಕೂ ಮುನ್ನವೇ, ಚಿತ್ರದ ಹಿಂದಿ ರಿಮೇಕ್ ಹಕ್ಕುಗಳನ್ನು ಬಾಲಿವುಡ್‌ನ ಹೆಸರಾಂತ ಸಂಸ್ಥೆಯಾದ ಬ್ಲ್ಯಾಕ್ ಪ್ಯಾಂತರ್ ಮೂವೀಸ್ ಲಿಮಿಟೆಡ್ ಖರೀದಿಸಿದೆ.

ಈ ಕುರಿತು ಮಾಹಿತಿ ನೀಡಿರುವ ಶಶಿಧರ್, 'ಈಗಾಗಲೇ ಹಿಂದಿ ಭಾಷೆಯಲ್ಲಿ ಈ ಚಿತ್ರವನ್ನು ನಾನೇ ನಿರ್ದೇಶನ ಮಾಡಲು ಬ್ಲ್ಯಾಕ್ ಪ್ಯಾಂತರ್ ಮೂವೀಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇನೆ. ಚಿತ್ರದ ಚಿತ್ರೀಕರಣವನ್ನು ಆಗಸ್ಟ್‌ನಿಂದಲೇ ಪ್ರಾರಂಭಿಸಲಿದ್ದೇವೆ. ಚಿತ್ರದ ನಾಯಕನ ಪಾತ್ರಕ್ಕೆ ಒಬ್ಬ ಬಿಗ್‌ಸ್ಟಾರ್ ಜೊತೆಗೆ ಈಗಾಗಲೇ ಒಪ್ಪಂದ ಕೂಡಾ ಆಗಿದೆ. ಶೀಘ್ರದಲ್ಲೇ ಹೆಸರು ಬಹಿರಂಗಗೊಳಿಸುತ್ತೇವೆ' ಎಂದರು.

ಕನ್ನಡದಲ್ಲಿ ಜುಲೈ 8ರಂದು ಸಿನಿಮಾ ಬಿಡುಗಡೆಯಾಗುತ್ತಿದೆ. ಸಕ್ಕರೆ ಕಾಯಿಲೆ ಇರುವ ಯುವಕನೊಬ್ಬನ ಮನಸಿನ ತಳಮಳಗಳು, ಸಂಕಟವನ್ನು ತೆರೆದಿಡುವುದರ ಜೊತೆಗೆ ಸಕ್ಕರೆ ಕಾಯಿಲೆ ಇದ್ದರೂ ಹೇಗೆ ಸುಖಮಯ ಜೀವನ ನಡೆಸಬಹುದು ಎನ್ನುವುದು ಚಿತ್ರದ ಕಥಾಹಂದರ.

ಚಿತ್ರದ ಕುರಿತು ಮಾತನಾಡಿದ ಪೃಥ್ವಿ ಅಂಬಾರ್, 'ಚಿತ್ರಕ್ಕೆ ಗುರು ಕಶ್ಯಪ್ ಅವರು ಅದ್ಭುತ ಸಂಭಾಷಣೆ ಬರೆದಿದ್ದಾರೆ. ರೊಮ್ಯಾನ್ಸ್, ಹಾಸ್ಯ, ಭಾವನೆಗಳು ತುಂಬಿರುವ ಚಿತ್ರವಿದು. ಹೆಸರು ಮಾತ್ರ 'ಶುಗರ್‌ಲೆಸ್'. ಆದರೆ ಚಿತ್ರದ ತುಂಬಾ ಸಿಹಿಯೇ ತುಂಬಿದೆ' ಎಂದರು.

'ಯು ಐ' ಶೂಟಿಂಗ್ ಶುರು

ಚಂದನವನದಲ್ಲಿ ಹೀರೊ ಆಗಿ ತೆರೆ ಮೇಲೆ ಕಾಣಿಸಿಕೊಳ್ಳುವುದಕ್ಕೂ ಮುನ್ನ ಡೈರೆಕ್ಟರ್ ಕ್ಯಾಪ್ ತೊಟ್ಟು ಮಿಂಚಿದವರು ನಟ ಉಪೇಂದ್ರ. ಸಾಲು ಸಾಲು ಹಿಟ್ ಚಿತ್ರಗಳನ್ನು ನಿರ್ದೇಶಿಸಿದ್ದ ಉಪ್ಪಿ ಇದೀಗ ಸುಮಾರು ಏಳು ವರ್ಷಗಳ ನಂತರ ಮತ್ತೆ ಕ್ಯಾಮೆರಾ ಹಿಂದೆ ನಿಂತಿದ್ದಾರೆ. ಉಪ್ಪಿ ನಿರ್ದೇಶನದ ಹೊಸ ಚಿತ್ರ 'ಯು ಐ' ಚಿತ್ರೀಕರಣ ಆರಂಭವಾಗಿದೆ.

ಇತ್ತೀಚೆಗಷ್ಟೇ ಚಿತ್ರದ ಮುಹೂರ್ತ ಇತ್ತೀಚೆಗೆ ಬಂಡೆಮಹಾಕಾಳಿ ದೇವಸ್ಥಾನದಲ್ಲಿ ನಡೆದಿತ್ತು. ಸ್ಯಾಂಡಲ್‌ವುಡ್‌ನ ಪ್ರಮುಖರ ಸಮ್ಮುಖದಲ್ಲೇ ಅದ್ದೂರಿಯಾಗಿ ಸಿನಿಮಾ ಸೆಟ್ಟೇರಿತ್ತು.'ಯು ಐ' ಎಂಬ ಮತ್ತೊಂದು ವಿಭಿನ್ನ ಶೀರ್ಷಿಕೆಯನ್ನಿಟ್ಟುಕೊಂಡು ಉಪೇಂದ್ರ ಅವರು ಮತ್ತೆ ಪ್ರೇಕ್ಷಕರ



ಉಪೇಂದ್ರ

ಎದುರಿಗೆ ಬಂದಿದ್ದಾರೆ. ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್‌ಟೈನರ್ಸ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಈ ಚಿತ್ರವನ್ನು ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದು, ಚಿತ್ರದಲ್ಲಿ ಯುವ ತಂತ್ರಜ್ಞರು ಕೆಲಸ ಮಾಡುತ್ತಿರುವುದು ವಿಶೇಷ ಎಂದಿದೆ ತಂಡ.

'ಪ್ಲಾಟ್‌ಫಾರ್ಮ್ 65'ನಿಂದ ಡೈನಿಂಗ್ ಟೇಬಲ್‌ಗೆ

ಪುಟಾಣಿ ರೈಲಿನಲ್ಲಿ ಕೋಳಿ ಸುಕ್ಕ, ಮೀನು ಫ್ರೈ, ರಾಗಿ ಮುದ್ದೆ ಸವಾರಿ

ಈ ರೆಸ್ಟೊರೆಂಟ್‌ನಲ್ಲಿ ಗ್ರಾಹಕರಿಗೆ ರೈಲಿನಲ್ಲೇ ಆಹಾರ ಪೂರೈಕೆಯಾಗುತ್ತದೆ. ಗ್ರಾಹಕರು ಕೇಳಿದ ಖಾದ್ಯಗಳನ್ನು ಹೊತ್ತು ಅಡುಗೆ ಮನೆಯಿಂದ ಹೊರಡುವ ರೈಲು ನೇರವಾಗಿ, ಗ್ರಾಹಕರ ಟೇಬಲ್‌ಗೆ ಬಂದು ನಿಲ್ಲುತ್ತದೆ!

ಅಚ್ಚರಿಯಾಯ್ತಲ್ಲವಾ. ಹೌದು. ಈ ರೆಸ್ಟೊರೆಂಟ್‌ನಲ್ಲಿ ರೈಲಿನಲ್ಲೇ ಖಾದ್ಯಗಳನ್ನು ಪೂರೈಸಲಾಗುತ್ತದೆ. ಆದರೆ, ಅದು ನಿಜವಾದ ರೈಲಲ್ಲ. ಆಟಿಕೆಯ ರೈಲು. ಅಡುಗೆಮನೆಯಿಂದ ಖಾದ್ಯಗಳನ್ನು ಜೋಡಿಸಿಕೊಂಡು ಹೊರಡುವ ಪುಟಾಣಿ ರೈಲು ಪುಟ್ಟ ಹಳಿಗಳ ಮೇಲೆ ಸಾಗುತ್ತಾ ಗ್ರಾಹಕರ ಟೇಬಲ್ ತಲುಪುತ್ತದೆ.

ಹೀಗೆ ಆಟಿಕೆ ರೈಲಿನ ಮೂಲಕ ಆಹಾರ ಪೂರೈಸುವ ವಿಶಿಷ್ಟ ರೆಸ್ಟೊರೆಂಟ್ ಹೆಸರು 'ಪ್ಲಾಟ್‌ಫಾರ್ಮ್ 65'. ಬೆಂಗಳೂರಿನ ಹುಳಿಮಾವು ಪ್ರದೇಶದಲ್ಲಿ ಆರಂಭವಾಗಿದೆ. ಇದು ಬೆಂಗಳೂರಿನ ಮೊಟ್ಟ ಮೊದಲ 'ರೈಲು ಪರಿಕಲ್ಪನೆ'ಯ ರೆಸ್ಟೊರೆಂಟ್.

ರೆಸ್ಟೊರೆಂಟ್‌ನಲ್ಲಿರುವ ಎಲ್ಲಾ ಟೇಬಲ್‌ಗಳಿಗೂ ರೈಲು ಹಳಿಗಳ ಸಂಪರ್ಕ ಕಲ್ಪಿಸಲಾಗಿದೆ. ಆಟಿಕೆ ರೈಲಿನ ಮೂಲಕವೇ ಎಲ್ಲ ಟೇಬಲ್‌ಗಳಲ್ಲಿರುವ ಗ್ರಾಹಕರಿಗೂ ಮೆನುವಿನಲ್ಲಿರುವ ಅವರು ಕೇಳಿದ ಆಹಾರ ಪೂರೈಕೆಯಾಗುತ್ತದೆ.

ರೆಸ್ಟೊರೆಂಟ್‌ನ ಒಳಾಂಗಣವನ್ನು ವಿಶಿಷ್ಟವಾಗಿ ಅಲಂಕರಿಸಲಾಗಿದೆ. ಇಲ್ಲಿ ಪ್ರತಿ ಟೇಬಲ್ ಕೂಡ ಒಂದು ಜಂಕ್ಷನ್. ಆಟಿಕೆಯ ರೈಲು, ಗ್ರಾಹಕರು ಆರ್ಡರ್ ಮಾಡಿದ ಖಾದ್ಯವನ್ನು ಆಯಾ ಜಂಕ್ಷನ್‌ನ ಪ್ಲಾಟ್‌ಫಾರ್ಮ್‌ಗಳಿಗೆ (ಟೇಬಲ್‌ಗಳಿಗೆ) ತಲುಪಿಸುತ್ತದೆ.

ರೆಸ್ಟೊರೆಂಟ್ ವಿಶೇಷ

ಈ 'ಪ್ಲಾಟ್‌ಫಾರ್ಮ್ 65' ರೆಸ್ಟೊರೆಂಟ್‌ನಲ್ಲಿ ಮಲ್ಟಿಕ್ಯುಸಿನ್ ಖಾದ್ಯಗಳು ಲಭ್ಯವಿದೆ. ವಿಶೇಷವಾಗಿ ಕನ್ನಡಿಗರ ಮೆಚ್ಚಿನ ಸಾಂಪ್ರದಾಯಿಕ ಆಹಾರಗಳಾದ ಕೋಳಿ ಸುಕ್ಕ, ರವಾ ಬಾಂಗಡಾ ಫ್ರೈ, ರಾಗಿ ಮುದ್ದೆ, ನಾಟಿ ಕೋಳಿ ಸಾರು, ಖುಷ್ಕಾದಂತಹ ಖಾದ್ಯಗಳು ಸಿಗುತ್ತವೆ. ಇಲ್ಲಿ ವಿಶಿಷ್ಟ ಆಂಧ್ರ ಶೈಲಿ ಖಾದ್ಯಗಳೂ ಲಭ್ಯ. ರೆಸ್ಟೊರೆಂಟ್‌ನಲ್ಲಿ 300 ಬಗೆಯ ಖಾದ್ಯಗಳನ್ನು ತಯಾರಿಸಲಾಗುತ್ತಿದೆ. ಗ್ರಾಹಕರು ತಮ್ಮಿಷ್ಟದ ಖಾದ್ಯವನ್ನು ಆಯ್ದುಕೊಳ್ಳಬಹುದು.

ದೇಶದ ಏಳು ಕಡೆ

ಹೈದರಾಬಾದ್ ನಗರದಲ್ಲಿ 2019ರಲ್ಲಿ ಸ್ಥಾಪನೆ ಯಾದ 'ಫ್ಲಾಟ್‌ಫಾರ್ಮ್ 65' ರೆಸ್ಟೊರೆಂಟ್, ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕದವರೆಗೆ ತನ್ನ ಪಾಕವೈವಿಧ್ಯವನ್ನು ವಿಸ್ತರಿಸಿದೆ. ಪ್ರಸ್ತುತ ದೇಶದಾದ್ಯಂತ ಏಳು ಕಡೆಗಳಲ್ಲಿ 'ಪ್ಲಾಟ್‌ಫಾರ್ಮ್ 65' ರೆಸ್ಟೊರೆಂಟ್‌ಗಳಿವೆ. ತೆಲಂಗಾಣದ ಹೈದರಾಬಾದ್ ನಗರದ ಕೆಪಿಹೆಚ್‌ಬಿ, ಕೊಂಡಪುರ, ಕೊಂಪಲ್ಲಿ, ದಿಲ್ ಖುಷ್‌ನಗರ. ಆಂಧ್ರಪ್ರದೇಶದ ವಿಜಯವಾಡ ಮತ್ತು ವಿಶಾಖಪಟ್ಟಣ. ಕರ್ನಾಟಕದ ಬೆಂಗಳೂರಿನಲ್ಲಿ ರೆಸ್ಟೊರೆಂಟ್ ಶಾಖೆಗಳಿವೆ.

ಪ್ರತಿ ಬಾರಿ ಹೊಸ ಮೆನು

ಗ್ರಾಹಕರು ಪ್ರತಿ ಬಾರಿ ಈ ಇಲ್ಲಿಗೆ ಭೇಟಿ ನೀಡಿದಾಗಲೂ ಹೊಸ ಮೆನು ಕಾರ್ಡ್ ನೀಡಿ, ಅವರಲ್ಲಿ ಅಚ್ಚರಿ ಮೂಡಿಸುತ್ತಾರೆ ರೆಸ್ಟೊರೆಂಟ್‌ನವರು. ಇಲ್ಲಿನ ಪ್ರಧಾನ ಸ್ವಾದಿಷ್ಟ ಖಾದ್ಯಗಳಾದ ಅಲ್ಲಂ ಕೋಡಿವಿಂಗ್ಸ್, ರಾಯಲವಾರಿ ಕೋಡಿ ಕುರ, ಕ್ಲಾಸಿಕ್ ಮಶ್ರೂಮ್, ಚಿಲ್ಲಿ ಪನೀರ್ ಮತ್ತು ವಿಭಿನ್ನ ಸ್ಪೈಸಿ ಬಿರಿಯಾನಿಗಳು ಬಾಯಲ್ಲಿ ನೀರೂರಿಸುತ್ತವೆ.

ಆಸಕ್ತರು www. platform65.in ಜಾಲತಾಣ ಅಥವಾ 9606488859/04046210606 ಸಂಖ್ಯೆಗಳಿಗೆ ಕರೆ ಮಾಡಿ ನಿಮ್ಮ ಸ್ಥಳ ಕಾಯ್ದಿರಿಸಬಹುದು. ರೆಸ್ಟೊರೆಂಟ್ ಮೊಬೈಲ್ ಅಪ್ಲಿಕೇಷನ್ ಕೂಡ ಹೊಂದಿದ್ದು, ಆ್ಯಪ್ ಮೂಲಕವೂ ಆಹಾರವನ್ನು ಆರ್ಡರ್ ಮಾಡಬಹುದು ಮತ್ತು ಪಾರ್ಸಲ್‌ಗಳ ಮೇಲೆ ಶೇ 15 ರಿಯಾಯಿತಿ ಪಡೆಯಬಹುದು.

ರೆಸ್ಟೊರೆಂಟ್ ವಿಳಾಸ: 'ಪ್ಲಾಟ್‌ಫಾರ್ಮ್ 65', 4ನೇ ಮಹಡಿ, 75/ಬಿ, ವಿಂಡ್ಸಾರ್ ಎಫ್4, ಕ್ರೈಸ್ಟ್ ಯೂನಿವರ್ಸಿಟಿ ಎದುರಿಗೆ, ಬನ್ನೇರಘಟ್ಟ ಮುಖ್ಯರಸ್ತೆ, ಹುಳಿಮಾವು, ಬೆಂಗಳೂರು-560076.